ಕರ್ನಾಟಕ ವಿಧಾನ ಸಭೆ

ಮಂಗಳವಾರ 10ನೇ ಫೆಬ್ರವರಿ 2004 ರಂದು ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11.20 ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು (ಶ್ರೀ ಎಂ. ವಿ. ವೆಂಕಟಪ್ಪರವರು) ಪೀಠವನ್ನು ಅಲಂಕರಿಸಿದ್ದರು

1. ವಿತ್ತೀಯ ಕಾರ್ಯಕಲಾಪ

2004-2005ನೇ ಸಾಲಿನ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ(ಮುಂದು)

ಅಧ್ಯಕ್ಷರು : ಮಾನ್ಯ ಪಾಟೀಲ್ ಅವರೇ, ತಮಗೆ ಮಾತನಾಡಲು ಇನ್ನೂ ಎಷ್ಟು ಹೊತ್ತು ಸಮಯ ಬೇಕು ?

ಶ್ರೀ ಎಸ್.ಎಸ್. ಪಾಟೀಲ್: ಎಷ್ಟು ಹೊತ್ತು ಬೇಕಾದರೂ ಮಾತನಾಡುತ್ತೇನೆ.

ಅಧ್ಯಕ್ಷರು : ಒಬ್ಬರೇ ಸಂಜೆಯವರೆಗೂ ಮಾತನಾಡುತ್ತೀರಾ ?

ಅಧ್ಯಕ್ಷರು : ನಮಗೆ ಸಮಯ ಇಲ್ಲ. ನಿನ್ನೆ ನೀವು ಒಂದು ಗಂಟೆ ಐದು ನಿಮಿಷ ಮಾತನಾಡಿದ್ದೀರಿ. ಇನ್ನು 25 ನಿಮಿಷಗಳಲ್ಲಿ ಮುಗಿಸಿ.

ಶ್ರೀ ಬಿ.ಬಿ. ಶಿವಪ್ಪ : ಇನ್ನು ಮೂರು ದಿವಸ ಅಂದರೆ ಸಭೆ ಮುಂದಕ್ಕೆ ಹೋಗುತ್ತದೆ ಎಂದು ಅರ್ಥ.

ಅಧ್ಯಕ್ಷರು : ಇನ್ನು 25 ನಿಮಿಷ ಅಂದರೆ ನಿಮಗೆ ಒಂದೂವರೆ ಗಂಟೆ ಸಮಯ ಕೊಡುತ್ತೇನೆ. ದಯವಿಟ್ಟು ಇನ್ನು 25 ನಿಮಿಷದಲ್ಲಿ ಮುಗಿಸಿ. ಇಲ್ಲಿ ಏನಾಗುತ್ತದೆ ಗೊತ್ತೇ ? ನೀವು ಯಾವುದೋ ವಚನಗಳನ್ನು ಹೇಳುತ್ತೀರಿ. ಡೈಲಾಗ್ ಶುರುವಾಗುತ್ತದೆ, ಅರ್ಧದಲ್ಲಿಯೇ ಕಟ್ ಆಗುತ್ತದೆ.

ಶ್ರೀ ಜಗದೀಶ ಶೆಟ್ಟರ್ : ಸನ್ಮಾನ್ಯ ಅಧ್ಯಕ್ಷರೇ, ಒಂದು ವಿಚಾರವನ್ನು ಪ್ರಸ್ತಾಪ ಮಾಡಲು ಸೂಚನೆ ಕೊಟ್ಟಿದ್ದೆ. ಈಗ ಅವಕಾಶ ಕೊಟ್ಟರೆ ಈಗಲೇ ಮಾತನಾಡುತ್ತೇನೆ, ಇಲ್ಲ ಎಂದರೆ ನಂತರ ಮಾತನಾಡುತ್ತೇನೆ. ಆ ತೆಲಗಿ ವಿಷಯದ ಬಗ್ಗೆ ಒಂದಿಷ್ಟು ವಿಚಾರ ಹೇಳಬೇಕಾಗಿದೆ. ಈಗ ತಾವು ಅವಕಾಶ ಕೊಟ್ಟರೆ ಮಾತನಾಡುತ್ತೇನೆ.

ಅಧ್ಯಕ್ಷರು : ಇಲ್ಲ ಅಮೇಲೆ ಮಾತನಾಡಿ. ಹೋಮ್ ಮಿನಿಸ್ಟರ್‌ಗೆ ಈಗ ತಾನೇ ಕಳುಹಿಸಿ ಕೊಟ್ಟಿದ್ದೀರಿ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಎಸ್.ಎಸ್.ಪಾಟೀಲ್ ಅವರು ಮಾತನಾಡಿದ ನಂತರ ಅವಕಾಶ ಕೊಡಿ.

ಅಧ್ಯಕ್ಷರು : ಆಗಬಹುದು, ಮಾನ್ಯ ಪಾಟೀಲ್ ಅವರೇ, ದಯವಿಟ್ಟು 25 ನಿಮಿಷದಲ್ಲಿ ಮುಗಿಸಿ.

ಶ್ರೀ ಎಸ್.ಎಸ್.ಪಾಟೀಲ್ : ಮಾನ್ಯ ಅಧ್ಯಕ್ಷರೇ, ಯಾರು ಮಾತನಾಡುವವರೇ ಇಲ್ಲ, ಹಾಗಿದೆ ಪರಿಸ್ಥಿತಿ. ಈಗ ಹಾಳೂರಿಗೆ ಉಳಿದವನೇ ಗೌಡ ' ಎನ್ನುತ್ತಾರಲ್ಲಾ, ಹಾಗಿದೆ.

ಅಧ್ಯಕ್ಷರು : ಅಂದರೆ ಯಾರೂ ಮಾತನಾಡುವವರು ಇಲ್ಲ ಅಂದರೆ ನೀವೇ ಮಾತನಾಡಿ.

ಶ್ರೀ ಎಸ್.ಎಸ್.ಪಾಟೀಲ್ : ಮಾತನಾಡುವವರು ಇದ್ದಾರೆ, ಆದರೆ ಕಡಿಮೆ ಇದ್ದಾರೆ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಪಾಟೀಲ್ ಅವರದ್ದು ಆದ ನಂತರ ನಾನು ಮಾತನಾಡಬೇಕು. ರೂಲಿಂಗ್ ಪಾರ್ಟಿಯವರು ಯಾರಾದರೂ ಮಾತನಾಡಲಿ.

ಶ್ರೀ ಎಸ್.ಎಸ್. ಪಾಟೀಲ್ : ಮಾತನಾಡಲಿ. ಏನು ತಪ್ಪು ಇದೆ? ಇದು ಕೊನೆಯ ಅಧಿವೇಶನ ಅಲ್ಲವೇ ? ನಾಳೆ ಅಡ್ಜರ್ನ್ ಮಾಡಿ ಕಳುಹಿಸಿತ್ತೀರೋ, ನಾಡಿದ್ದು ಕಳುಹಿಸಿತ್ತೀರೋ ಗೊತ್ತಿಲ್ಲ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ಮಾನ್ಯ ಅಧ್ಯಕ್ಷರೇ, ಈಗ ವಿಧಾನಸಭೆ ಒಂದು ತರಹ ಕೋಮಾ ಸ್ಟೇಜಿಗೆ ಹೋಗಿ ಬಿಟ್ಟಿದೆ. ಇದು ಸಾಯುತ್ತದೋ, ಬದುಕುತ್ತದೋ ಹೇಳಿ ?

ಅಧ್ಯಕ್ಷರು : ನಿನ್ನೆ ಮಾನ್ಯ ಶೆಟ್ಟರ್ ಅವರು ಹೇಳಿದ್ದಾರೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ಆರು ತಿಂಗಳು ಬದುಕುತ್ತದೆ ಎಂದರೆ ಒಂದು ತರಹ ಮಾತನಾಡುತ್ತೇವೆ. ನಾಳೆ ಸಾಯುತ್ತದೆ. ಎಂದರೆ ಮತ್ತೇಕೆ ಮಾತನಾಡಬೇಕು ? ತಾವೇ ಒಂದು ರೂಲಿಂಗ್ ಕೊಟ್ಟು ಬಿಡಿ. ಬದುಕುತ್ತದೋ ಇಲ್ಲವೋ ಎಂದು ಹೇಳಿ ಬಿಟ್ಟರೆ ನಾವು ಮಾತನಾಡುವುದಕ್ಕೆ ಅನುಕೂಲ ಆಗುತ್ತದೆ. ಕೋಮಾ ಸ್ಟೇಜಿನಿಂದ ಹೊರಗೆ ಬರುತ್ತದಾ ಅಥವಾ ಹೋಗುತ್ತದಾ ಎಂದು ಹೇಳಿ.

ಶ್ರೀ ಬಿ.ಎನ್.ಬಚ್ಚೇಗೌಡ : ಮಾನ್ಯ ಮುಖ್ಯಮಂತ್ರಿಗಳು ಮೌನವಾಗಿದ್ದಾರೆ. ಸ್ವಾಮಿ. ಏನು ಆಗುತ್ತದೆ ಎಂದು ಅರ್ಥ ಆಗುವುದಿಲ್ಲ. ಯಾವತ್ತು ಕಡೆ ಆಗುತ್ತದೆ ಎಂದು ಅರ್ಥ ಆಗುವುದಿಲ್ಲ. ಆ ದೃಷ್ಟಿಯಿಂದ ಇದರ ಬಗ್ಗೆ ತಾವೇ ಹೇಳಬೇಕು. ಯಾವತ್ತು ಇದು ಕಡೆ ಆಗುತ್ತದೆ ಎಂದು ಮಾನ್ಯ ಅಧ್ಯಕ್ಷರೇ ಹೇಳಬೇಕು.

ಅಧ್ಯಕ್ಷರು : ಸರ್ಕಾರದವರು ಬಿಸಿನೆಸ್ ಕೊಟ್ಟಾಗ ಮಾಡಿ ಕೊಡುವುದು ನಮ್ಮ ಕರ್ತವ್ಯ ಅಷ್ಟೇ. ಯಾವಾಗ ಮುಗಿಯುತ್ತದೆ ಎಂದು ಗೊತ್ತಿಲ್ಲ. ಸರ್ಕಾರ ಬಿಸಿನೆಸ್ ಮೇಲೆ ಡಿಪೆಂಡ ಆಗಿದೆ.

ಶ್ರೀ ಬಿ.ಎನ್. ಬಚ್ಚೇಗೌಡ : ಇದು ಕಡೆಯ ಸದನ, ಕಡೆಯ ದಿವಸಗಳು ಎಂದು ಕೇಳಿದೆ.

ಅಧ್ಯಕ್ಷರು : ನೋಡೋಣ, ಮಾನ್ಯ ಮುಖ್ಯಮಂತ್ರಿಗಳು ಮಧ್ಯಾಹ್ನ ಇಲ್ಲಿಗೆ ಬರಬಹುದು.

ಶ್ರೀ ಬಿ.ಎನ್.ಬಚ್ಚೇಗೌಡ : "ಮೌನಂ ಸಮ್ಮತಿ ಲಕ್ಷಣಂ" ಎಂದು ಹೇಳಿ ಏನಾದರೂ ಒಪ್ಪಿಸಿಕೊಳ್ಳಬಹುದು ?

ಅಧ್ಯಕ್ಷರು : ಎಷ್ಟು ದಿವಸ ನಡೆಯುತ್ತಿರುತ್ತದೆ, ಅಷ್ಟು ದಿವಸ ಮಾತನಾಡುತ್ತೀರಿ. ಆಮೇಲೆ ನೋಡೋಣ.

ಶ್ರೀ ಜಗದೀಶ್ ಶೆಟ್ಟರ್ : ಇಷ್ಟೊಂದು ಹೃದಯ ವೈಶಾಲ್ಯತೆ ಎಷ್ಟು ದಿವಸ ಆದರೂ ನಡೆಯಲಿ ಅಂದರೆ, ಫಸ್ಟ್ ಟೈಮ್ ಈ ರೀತಿ ಅನುಭವ ಆಗುತ್ತದೆ. ಎಷ್ಟು ಹೊತ್ತು ಬೇಕಾದರೂ ಮಾತನಾಡಬಹುದು ಎಂದು ಇದೇ ಮೊದಲ ಬಾರಿ ಅನುಭವ ಆಗುತ್ತಿದೆ.

†ಶ್ರೀ ಎಸ್.ಎಸ್. ಪಾಟೀಲ(ಮುಂಡರಗಿ) : ಮಾನ್ಯ ಅಧ್ಯಕ್ಷರೇ, ನಿನ್ನೆಯ ದಿವಸ ನಾನು ಕೆಲವು ವಿಷಯಗಳ ಬಗ್ಗೆ ಮಾತನಾಡಿದ್ದೇನೆ. ಬಹುಶಃ ಈ ದಿವಸ ಗ್ರಾಮೀಣಾಭಿವೃದ್ಧಿ ಸಚಿವರು

(† ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಮತ್ತು ಭಾಷಣವನ್ನು ಪುರಸ್ಕರಿಸಿಲ್ಲವೆಂದು ಸೂಚಿಸುತ್ತದೆ)

ಇದ್ದ ಹಾಗೆ ಇಲ್ಲ. ಕುಡಿಯುವ ನೀರಿನ ಮಂತ್ರಿಗಳು ಕಾಣುತ್ತಿಲ್ಲ. ಕೃಷಿ ಮಂತ್ರಿಗಳು ಇಲ್ಲ. ಅದರಲ್ಲಿ ಅರ್ಧ ಕೃಷಿ ಮಂತ್ರಿಗಳು ಇದ್ದಾರೆ. ನನಗೆ ಅನಿಸುತ್ತದೆ, ಈ ಸರ್ಕಾರ ಯಾವುದರ ಬಗ್ಗೆ ಆದ್ಯತೆ ಇಟ್ಟುಕೊಂಡಿದ್ದಾರೆ ಎಂದು ಅನಿಸುತ್ತದೆ. ಇವರ ಆದ್ಯತೆ ಏನು ಎಂದೇ ನನಗೆ ತಿಳಿಯುವುದಿಲ್ಲ. ಈ ಬಜೆಟ್‌ನಲ್ಲಿ ನಾನು ನೋಡಿದರೆ ಗೊತ್ತಾಗುತ್ತದೆ, ಇಲ್ಲಿ ಆದ್ಯತೆಯ ಮೇಲೆ ಮಾತನಾಡಬೇಕು ಎಂದರೆ ಇವರು ಹೇಳುತ್ತಾರೆ. ಕುಡಿಯುವ ನೀರು ಕೊಡುತ್ತೇವೆ, ರೈತರಿಗೆ ಹಾಗೆ ಮಾಡುತ್ತೇವೆ, 600 ಕೋಟಿ ರೂಪಾಯಿಗಳನ್ನು ನಾವು ಇದಕ್ಕೆ ಮನ್ನಾ ಮಾಡುತ್ತೇವೆಂದು ಹೇಳುತ್ತಾರೆ. ಇಲ್ಲಿ ಇವರು ಈ ಯೋಜನಾ ವೆಚ್ಚದೊಳಗೆ ಹೇಳುತ್ತಾರೆ. "ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳು". ಹೋದಸಾರಿ 481 ಕೋಟಿ ರೂಪಾಯಿಗಳನ್ನು ಇಟ್ಟಿದ್ದರೆ ಈ ಸಾರಿ 500 ಕೋಟಿ ರೂಪಾಯಿಗಳಿಗೆ ಹೋಗಬೇಕಾಗಿತ್ತು. ಆದರೆ ದುರ್ದೈವದಿಂದ ಅದು 481 ಕೋಟಿ ರೂ.ಗೆ ಹೋಗಿದೆ. 481 ಕೋಟಿ ರೂಪಾಯಿ 71 ಪೈಸೆಗಳು ಹೋದ ವರ್ಷದ ಬಜೆಟ್‌ನಲ್ಲಿದ್ದರೆ ಈ ವರ್ಷ ಬಜೆಟ್ ಹೆಚ್ಚಾಗಿರುವುದರಿಂದ ಇದು ಖರೆಯಾಗಿ 500 ಕೋಟಿ ರೂ.ಗಳಿಗೆ ಹೋಗಬೇಕಾಗಿತ್ತು. ಆದರೆ ದುರ್ದೈವದಿಂದ 481 ಕೋಟಿ ರೂ.ಗಳಿಗೆ ಇಳಿಸಿದ್ದಾರೆ. ಅಂದರೆ ಇವರ ಆದ್ಯತೆ ಕೃಷಿ ವಲಯಕ್ಕೆ ಇದೆ ಎಂದು ಹೇಳುತ್ತಾರಲ್ಲಾ, ಇದರ ಮೇಲೆ ಏನು ಆದ್ಯತೆ ಆಗುತ್ತದೆ? ಹಣ ಇಲ್ಲದೇ ಇವರೇನು ಮಾಡುತ್ತಾರೆ? ಇಲ್ಲಿ ಕೂಡ ಇವರದ್ದು ಆದ್ಯತೆ ಇಲ್ಲ. ಇನ್ನು ನೀರಾವರಿ ಬಗ್ಗೆ ಹೇಳುತ್ತಾರೆ. ಸ್ಕ್ಯೂ ನೀರಾವರಿ ಮತ್ತು ಪ್ರವಾಹ ನಿಯಂತ್ರಣದ ವಿಚಾರ. ಹೋದ ಸಲ 3002 ಕೋಟಿ ರೂಪಾಯಿ ರೂ.ಗಳನ್ನು ಇಟ್ಟರೆ ಈ ಸಲ 26–41 ಕೋಟಿ ರೂ.ಗಳನ್ನು ಇಟ್ಟಿದ್ದಾರೆ. 400 ಕೋಟಿ ರೂ.ಗಳನ್ನು ನೀರಾವರಿಗೆ ಕಡಿಮೆ ಮಾಡಿದ್ದಾರೆ. ಇವರು ಜನರ ಮನೆ ಬಾಗಿಲಿಗೆ ನೀರು ಒಯ್ಯುತ್ತೇವೆ. ರೈತರಿಗೆ ನೀರು ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ. ಆದರೆ ಇಲ್ಲಿ ಬಜೆಟ್‌ನಲ್ಲಿ ನಾವು ನೋಡಿದರೆ ಹೋದ ಸಲ 3000 ಕೋಟಿ ರೂ.ಗಳನ್ನು ಇಟ್ಟಿದ್ದರೆ ಈ ಸಲ 2600 ಕೋಟಿ ರೂ.ಗಳನ್ನು ಇಟ್ಟದ್ದಾರೆ. ಅಲ್ಲಿಯೂ ಕಡಿಮೆ ಮಾಡಿದರು. ಅಂದರೆ ಇವರ ಆದ್ಯತೆ ಯಾವುದಕ್ಕೆ ಕೈಗಾರಿಕಾ ವಿಚಾರ. ಆ ಮಂತ್ರಿಗಳೇ ಇಲ್ಲ. ಸಣ್ಣ ಕೈಗಾರಿಕಾ ಮಂತ್ರಿಗಳು, ಇಲ್ಲ, ದೊಡ್ಡ ಕೈಗಾರಿಕಾ ಮಂತ್ರಿಗಳು ಇಲ್ಲ. ಅದು ಯಾರ ಕಡೆಗೆ ಇದೆಯೋ ಗೊತ್ತಿಲ್ಲ. ಆ ಕೈಗಾರಿಕಾ ವಿಚಾರವಂತೂ ದೇವರಿಗೇ ಗೊತ್ತು. ಇವರು ನಮ್ಮ ಚಿಕ್ಕ ನೀರಾವರಿ ಸಚಿವರು ಇದ್ದಾರೆ.ಸಣ್ಣ ನೀರಾವರಿ ಸಚಿವರಿಗೆ ದೊಡ್ಡ ಖಾತೆ. ದೊಡ್ಡ ನೀರಾವರಿ ಮಂತ್ರಿಗಳಿಗೆ ಸಣ್ಣ ನೀರಾವರಿ ಖಾತೆ ಕೊಟ್ಟು ಬಿಟ್ಟಿದ್ದಾರೆ. ದುರ್ದೈವದಿಂದ ಅದರಲ್ಲಿ ದುಡ್ಡು ಇಲ್ಲ. 'ಏನೂ ಇಲ್ಲ' 'ಏನೇನೂ ಇಲ್ಲ' ಅಲ್ಲಿ 450 ಕೋಟಿ ರೂಪಾಯಿಗಳನ್ನು ಕಡಿಮೆ ಮಾಡಿದ್ದೀರಿ. ಇನ್ನು ನೀವು ಮಾಡುತ್ತೀರೇನು? ನೀರಾವರಿಗೆ ಕೂಡ ಇವರಿಗೆ ಆದ್ಯತೆ ಇಲ್ಲ. 3000 ಕೋಟಿ ರೂಪಾಯಿಗಳಿಂದ ಈ ಸಾರಿ ಖರೇ ಅಂದರೆ 3500 ಕೋಟಿ ರೂಪಾಯಿಗಳಿಗೆ ಇವತ್ತಿನ ಬಜೆಟ್ ಪ್ರಕಾರ ಹೋಗಬೇಕಾಗಿತ್ತು. ಅದು ಇವತ್ತು 'ಏನಾಗಿದೆ ಎಂದರೆ 400 ಕೋಟಿ ರೂಪಾಯಿಗಳನ್ನು ನೀರಾವರಿ ಬಜೆಟ್‌ಗೆ ಕಡಿಮೆ ಮಾಡುತ್ತಾರೆ. ಜನರಿಗೆ, ರೈತರಿಗೆ ನಾವು ಸಾಕಷ್ಟು ನೀರಾವರಿ ಒದಗಿಸುತ್ತೇವೆ ಎಂದು ಒಂದು ಕಡೆ ಬಜೆಟ್‌ನಲ್ಲಿ ಓದಿ ಹೇಳುತ್ತಾರೆ. ಯಾವುದಕ್ಕೆ ಇವರ ಆದ್ಯತೆ ಇದೆ? ಕೈಗಾರಿಕೆಗೆ ಹೋದ ಸಲ 165 ಕೋಟಿ ರೂಪಾಯಿಗಳನ್ನು ಇಟ್ಟಿದ್ದರೆ ಈ ಸಲ 86 ಕೋಟಿ ರೂಪಾಯಿಗಳಿಗೆ ಇಳಿಸಿದ್ದಾರೆ. ಸಣ್ಣ ಕೈಗಾರಿಕೆಗಳಿಗೆ ದುಡ್ಡೇ ಇಲ್ಲ. ಆ ಸಬ್ಸಿಡಿ ಕೊಟ್ಟಿಲ್ಲ. ರಾಜ್ಯದಲ್ಲಿ ಕೈಗಾರಿಕೆಗಳು

ಮುಚ್ಚಿ ಹೋದವು. ನಮ್ಮ ದೇಶಪಾಂಡೆಯವರು ಭಾರೀ ಅಭಿವೃದ್ಧಿ ಸಾಧಿಸುತ್ತೇವೆಂದು ಹೇಳುತ್ತಾರೆ. ಇಲ್ಲಿ ಕೈಗಾರಿಕೆಗಳಿಗೆ ದುಡ್ಡು ಕಡಿಮೆ ಮಾಡಿದ್ದಾರೆ. ಅತೀ ಮಹತ್ವದ ವಿಚಾರ ಎಂದರೆ ನೀರು ಪೂರೈಕೆ ಮತ್ತು ನೈರ್ಮಲ್ಯ, 'ಕುಡಿಯುವ ನೀರು ಮತ್ತು ನೈರ್ಮಲ್ಯ' ಇದನ್ನು ನೋಡಿದರೆ ನೋವೆನಿಸುತ್ತದೆ. ರಾಜ್ಯದಲ್ಲಿ ಕುಡಿಯುವ ನೀರಿನ ತೊಂದರೆ ಇದೆ. ಆ ಕುಡಿಯುವ ನೀರಿನ ಮಂತ್ರಿಗಳು ಇಲ್ಲ, ಕೇಳಿದ ಕೂಡಲೇ ನೀರು ಕೊಡುತ್ತೇನೆ, ಸಾಕಷ್ಟು ದುಡ್ಡು ಇದೆ ಎಂದು ಹೇಳುತ್ತಾರೆ. ಇಲ್ಲಿ ನೋಡಿ ಅಧ್ಯಕ್ಷರೇ, ಹೋದ ಸಲ 703 ಕೋಟಿ ರೂಪಾಯಿಗಳನ್ನು ಕುಡಿಯುವ ನೀರಿಗೆ ಇಟ್ಟಿದ್ದರೆ ಈ ಸಲ 600 ಕೋಟಿ ರೂ.ಗಳಿಗೆ ಇಳಿಸಿದ್ದಾರೆ. ಕುಡಿಯುವ ನೀರಿಗೆ 100 ಕೋಟಿ ರೂ.ಗಳನ್ನು ಕಡಿಮೆ ಮಾಡಿದ್ದಾರೆ. ಖರೇ ಎಂದರೆ ಈ ವರ್ಷ 700 ಕೋಟಿ ರೂಪಾಯಿಗಳಿಂದ 1000 ಕೋಟಿ ರೂಪಾಯಿಗಳಿಗೆ ಏರಬೇಕಾಗಿತ್ತು. ಅಷ್ಟು ದುಡ್ಡು ಇವತ್ತು ಕುಡಿಯುವ ನೀರಿಗೆ ಬೇಕಾಗುತ್ತದೆ. ಅಲ್ಲಿ ಕೂಡ ಆದ್ಯತೆ ಇಲ್ಲ. ಇನ್ನು ಶಿಕ್ಷಣ ಕ್ರೀಡೆ ವಿಚಾರ. ಯಾವುದಕ್ಕೆ ಇವರ ಆದ್ಯತೆ ಎಂದು ನಾನು ಕೇಳುತ್ತಿದ್ದೇನೆ, ಅಲ್ಲಿ ಕೂಡ ಕಡಿಮೆ ಮಾಡಿದ್ದಾರೆ. ಹೋದ ಸಲ 565 ಕೋಟಿ ರೂ.ಗಳನ್ನು ಕೊಟ್ಟಿದ್ದಾರೆ ಅದು ಈ ಸಲ 600 ಕೋಟಿ ರೂ ಆಗಬೇಕಾಗಿತ್ತು. ಎಲ್ಲೂ ಶಿಕ್ಷಕರು ಇಲ್ಲ ಯಾವ ಶಾಲೆಯಲ್ಲೂ ಇಲ್ಲ. ಎಲ್ಲಾ ಶಾಲೆಗಳೂ ಖಾಲಿ ಇವೆ. ಬರೇ ಅಕ್ಷರ, ಅಕ್ಷರ ಎಂದು ಹೇಳಿ ಅದೇನೋ ಸರ್ವಜ್ಞನ ವಚನ ಹೇಳಿ ಬಿಟ್ಟಿದ್ದಾರೆ. ಅಕ್ಷರ ದಾಸೋಹ ಎಂದು ಹೇಳಿ ಸರ್ವಜ್ಞನ ವಚನವನ್ನು ಹೇಳಿದ್ದಾರೆ. ಅನ್ನವನ್ನು ಇಕ್ಕುವುದು ಸನ್ನಿಯನು ನುಡಿಯುವುದು ಎಂದು ಸರ್ವಜ್ಞ ಹೇಳಿದ್ದಾನೆ, ಇಲ್ಲ ಎಂದಲ್ಲ. ಯಾರಿಗೆ? ಅಲ್ಲೇ ಇನ್ನೊಂದು ವಿಚಾರವನ್ನು ಸರ್ವಜ್ಞ ಹೇಳಿದ್ದಾನೆ. " ವಿದ್ಯೆ ಹೇಳದ ಗುರು, ಬುದ್ಧಿ ಹೇಳದ ತಂದೆ, ಬಿದ್ದರೂ ಬಂದು ನೋಡದಾ ತಾಯಿ, ಈ ಮೂರು ಶುದ್ಧ ವೈರಿಗಳು" ಎಂದು ಹೇಳಿದ್ದಾನೆ. ಅಲ್ಲಿ ಶಿಕ್ಷಕರು ವಿದ್ಯೆಯನ್ನೇ ಹೇಳುವುದಿಲ್ಲ. ಅದಕ್ಕೂ ಕೂಡ ಹಣ ಕಡಿಮೆ ಇಟ್ಟಿದ್ದಾರೆ. 565 ಕೋಟಿ ರೂಪಾಯಿಗಳಿದ್ದದ್ದು 600 ಕೋಟಿ ರೂ. ಆಗುವುದರ ಬದಲು 520 ಕೋಟಿಗೆ ರೂ.ಗಳಿಗೆ ಇಳಿದಿದೆ. ಶಿಕ್ಷಣಕ್ಕೆ ಇವರ ಆದ್ಯತೆ ಇಲ್ಲ. ಇನ್ನು ಸಾರಿಗೆ ಸುದ್ದಿಯಲಂತೂ ದೇವರಿಗೆ ಗೊತ್ತು. ಕೆಎಸ್‌ಆರ್‌ಟಿಸಿ ಮುಚ್ಚುತ್ತಾರೆ, ಆ ಮಂತ್ರಿಗಳು ಇಲ್ಲಿ ಎಲ್ಲೂ ಕಾಣುತ್ತಿಲ್ಲ. ಅವರು ಎಲ್ಲೋ ಹೋಗಿದ್ದಾರೆ. ಅವರು ದೊಡ್ಡ ಮಂತ್ರಿಗಳು ಇದ್ದಾರೆ. ಅದನ್ನು ಮುಚ್ಚುತ್ತಾರೆ. ಕೆಎಸ್‌ಆರ್‌ಟಿಸಿ ಮುಚ್ಚಿ ಅದನ್ನು ಸಂಪೂರ್ಣ ನಾಶ ಮಾಡಿ ಖಾಸಗಿ ಬಸ್‌ಗಳನ್ನು ಓಡಿಸುವುದಕ್ಕೆ ಇಲ್ಲಿ ಹಚ್ಚಿದ್ದಾರೆ. ಆ ಡ್ರೈವರ್‌ಗಳಿಗೆ ಅಲ್ಲಿ ಕೆಲಸವೇ ಇಲ್ಲ. ಕೆಲಸವಿಲ್ಲದೇ ಡ್ರೈವರ್‌ಗಳು ಅಡ್ಡಾಡುತ್ತಾರೆ. ಎಲ್ಲವನ್ನೂ ಮುಚ್ಚುತ್ತಾರೆ, ಕೆಎಸ್‌ಆರ್‌ಟಿಸಿಯನ್ನು ಇವರು ಬಂದ್ ಮಾಡುತ್ತಾರೆ. ಅಂದರೆ ಸಾರಿಗೆಗೆ ಇವರ ಆದ್ಯತೆ ಇಲ್ಲ.

ಶ್ರೀ ಡಿ.ವಿ. ಸದಾನಂದ ಗೌಡ : ಮಾನ್ಯ ಅಧ್ಯಕ್ಷರೇ, ಉದಾಹರಣೆಗೆ ಒಂದು ವಿಚಾರ ಹೇಳುತ್ತೇನೆ. ನಾನು ಮೊನ್ನೆ ತಾನೇ ಕೆಡಿಪಿ. ಮೀಟಿಂಗ್ ಮಾಡಿದೆ. ದಕ್ಷಿಣ ಕನ್ನಡ ಜಿಲ್ಲೆಯನ್ನು ಪ್ರಾಯೋಗಿಕವಾಗಿ ಖಾಸಗಿ ವಾಹನಗಳಿಗೆಂದು ಕೊಟ್ಟಿದ್ದಾರೆ. ಗ್ರಾಮಾಂತರ ಪ್ರದೇಶಗಳಿಗಂತೂ ಬಸ್ಸುಗಳನ್ನು ಓಡಿಸುವುದಿಲ್ಲ. ಈಗೇನೋ ಮಿನಿ ಬಸ್‌ಗಳು ಗ್ರಾಮಾಂತರ ಬಸ್‌ಗಳು ಎಂದು ಹೇಳಿ ಅವರೇನು ಬೋರ್ಡ್ ಹಾಕಿದ್ದಾರೆ ಅವು ಎಲ್ಲ ನಗರದಿಂದ ನಗರಕ್ಕೆ ದಕ್ಷಿಣದಿಂದ ಪಟ್ಟಣಕ್ಕೆ ಓಡಾಡುತ್ತವೆ. ಪುತ್ತೂರಿನ ಒಂದು ಡಿಪೋದಲ್ಲಿ ಅಧಿಕೃತವಾಗಿ ಅಲ್ಲಿಯ ಕೆಎಸ್‌ಆರ್‌ಟಿಸಿ ಡಿಪೋ

ಮ್ಯಾನೇಜರ್ ಲೆಕ್ಕದಲ್ಲಿ ದಿನಕ್ಕೆ ಎರಡು ಲಕ್ಷ ರೂಪಾಯಿ ಲುಕ್ಸಾನು. ಕೆಎಸ್ಆರ್‌ಟಿಸಿಗೆ ಈಗ ಒಂದು ದಿನಕ್ಕೆ ಎರಡು ಲಕ್ಷ ರೂಪಾಯಿಗಳು ಲುಕ್ಸಾನು. ಒಂದು ಕಡೆಯಿಂದ ಅವರೇನು ಹೇಳುತ್ತಾರೆ ಎಂದರೆ ನಮಗೆ ಖಾಸಗಿ ವಾಹನಗಳಿಂದ ನಮಗೆ ಟ್ಯಾಕ್ಸ್ ಸಿಗುವ ಕಾರಣ, ಆ ಟ್ಯಾಕ್ಸ್ ಆದಾಯದಿಂದ ನಮಗೆ ಜಾಸ್ತಿ ಹಣ ಸಿಗುತ್ತದೆ ಎನ್ನುತ್ತಾರೆ. ಪುತ್ತೂರಿನ ಟ್ಯಾಕ್ಸ್ ಆಫೀಸ್‌ನಲ್ಲಿ ಎರಡು ಕೋಟಿ ರೂಪಾಯಿ ನಿಗದಿತವಾಗಿ ಒಂದು ಅದಾಯ ಬರಬೇಕು ಎಂಬುದು ಅವರ ಅಂದಾಜು. ಅಂಕಿ ಅಂಶಗಳ ಪ್ರಕಾರ 16 ಲಕ್ಷ ರೂಪಾಯಿಗಳು ಮಾತ್ರ ಬಂದಿದೆ. ಒಂದು ಕಡೆಯಿಂದ ಆರ್‌ಟಿಓ ಆಫೀಸ್‌ನಿಂದ ಕೂಡ ನಮಗೆ ಟ್ಯಾಕ್ಸ್ ಗಣನೀಯವಾಗಿ ಬರುತ್ತಿಲ್ಲ. ದಿನಕ್ಕೆ ಎರಡು ಲಕ್ಷ ರೂಪಾಯಿ ಕೆಎಸ್ಆರ್‌ಟಿಸಿಯವರಿಗೆ ಲುಕ್ಸಾನ್ ಆಗುತ್ತಿದೆ. ನಮ್ಮ ಜಿಲ್ಲಾ ಮಂತ್ರಿಗಳಾಗಿ ಕೆಎಸ್ಆರ್‌ಟಿಸಿಯನ್ನು ಮುಚ್ಚುತ್ತಾರೆ ಎನ್ನುವುದೇ ನನಗೆ ಬಹಳ ಬೇಸರ. ನನಗೆ ಬಹಳ ಬೇಸರ ಆಗುತ್ತಿರುವುದು ಎಂದರೆ ನಮ್ಮ ಜಿಲ್ಲೆಯವರೇ ಕೆಎಸ್ಆರ್‌ಟಿಸಿ ಮಂತ್ರಿಗಳಾಗಿ ಕೆಎಸ್ಅರ್‌ಟಿಸಿಯನ್ನು ಮುಚ್ಚುತ್ತಾರಲ್ಲಾ, ಆ ಅಪವಾದ ನಮಗೇ ಶಾಶ್ವತವಾಗಿ ತಟ್ಟುತ್ತದಲ್ಲಾ ಎಂದು ಬೇಸರ. ಇನ್ನಾದರೂ ಇದನ್ನು ಪರಿಗಣನೆ ಮಾಡಬೇಕು ಎಂದು ಹೇಳುವಂತಹ ವಿನಂತಿ ಅವರಿಗೆ. ಅವರು ಇವತ್ತು ಇಲ್ಲ.

ಶ್ರೀ ಎಸ್.ಎಸ್.ಪಾಟೀಲ್ : ಇವರದ್ದು ಯಾವುದಕ್ಕೆ ಆದ್ಯತೆ ಎಂದು ನನಗಂತೂ ತಿಳಿಯುವುದಿಲ್ಲ. ಆದರೆ ಕೆಎಸ್ಆರ್‌ಟಿಸಿಯಂತೂ ಮುಚ್ಚುತ್ತಾರೆ. ಅದರಲ್ಲಿ ಪ್ರಶ್ನೆಯೇ ಇಲ್ಲ. ಅದನ್ನು ಮುಚ್ಚುತ್ತಾರೆ. ಅದನ್ನು ಮುಚ್ಚುವಂತಹ ವಿಚಾರ ಮಾಡಿದ್ದಾರೆ. ಅದನ್ನೆಲ್ಲಾ ಮಾರಿಕೊಂಡು ತೆಗೆದುಕೊಂಡು ಹೋಗಿ ಬಿಡುತ್ತಾರೆ. ಇನ್ನು ಮೂರು ತಿಂಗಳಲ್ಲಿ ಏನು ಮಾಡುತ್ತಾರೆ? ಚುನಾವಣೆ ಬರುತ್ತದೆ, ಈಗಂತೂ ಆಗುವುದಿಲ್ಲ. ಆದರೆ ಕೆಎಸ್ಆರ್‌ಟಿಸಿಯನ್ನು ಮುಚ್ಚುತ್ತಾರೆ. ಮುಂದೆ ಬಂದವರು ಅದು ತಲೆ ಎತ್ತದ ಹಾಗೆ ಮಾಡಿ ಸಂಪೂರ್ಣ ನಾಶ ಮಾಡಿ ಹೋಗುತ್ತಾರೆ. ಈ ಸಾರಿಯ ಆಯವ್ಯಯದಲ್ಲಿ ಸಾರಿಗೆಗೆ ಕೂಡ ಕಡಿಮೆ ಮಾಡಿದ್ದಾರೆ. ಬೇರೆ ಬೇರೆ ಬಾಬಿಗೆ ಬೇಕಾಗುತ್ತದೆ. ಎಂದು ಸಾರಿಗೆಗೆ ಕಡಿಮೆ ಮಾಡಿದ್ದಾರೆ. ಇನ್ನೂ ಬಹಳ ಮಹತ್ವದ ವಿಚಾರ ಇದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮಂತ್ರಿಗಳು ಇದ್ದಿದ್ದರೆ ಅದು ಕೂಡ ಶುರುವಾಗುತ್ತಿತ್ತು, ಯಾವ ದವಾಖಾನೆಯಲ್ಲೂ ಔಷಧ ಇಲ್ಲ, ಯಾವ ದವಾಖಾನೆಯಲ್ಲೂ ಡಾಕ್ಟರ್‌ಗಳು ಇಲ್ಲ, ನರ್ಸ್‌ಗಳು ಇಲ್ಲ. ಕಾಂಪೌಂಡರ್‌ಗಳು ಇಲ್ಲ. ಡಿ–ವರ್ಗದ ನೌಕರದಾರರು ಸಹ ಇಲ್ಲ. ಆಮೇಲೆ ಆಪರೇಷನ್ ಥಿಯೇಟರ್ ಇದೆಯಲ್ಲಾ ಅದನ್ನು ನೋಡಬೇಕು, ನಾನು ಮೊನ್ನೆ ಒಂದು ಕಡೆ ಹೋಗಿದ್ದೆ. ಅಲ್ಲಿ ಅಪರೇಷನ್ ಥಿಯೇಟರ್ ಒಳಗೆ ಹೋದರೆ ಥಿಯೇಟರ್ ನೊಳಗಡೆ ಒಂದು ಹಂದಿ ಹೋಗಿತ್ತು, ಆ ಹಂದಿಗೆ ಅಲ್ಲಿ ವಾಸನೆ ಹೆಚ್ಚಾಗಿದೆಯೆಂದು ತಿಳಿದು ಆ ಹಂದಿ ಹೊರಗೋಡಿ ಬರುತ್ತದೆ ! ಹಂದಿಗಳು ನಮ್ಮ ಸರ್ಕಾರಿ ಆಪರೇಷನ್ ಥಿಯೇಟರ್ ಒಳಹೊಕ್ಕರೆ ಮರಳಿ ಬಂದುಬಿಡುತ್ತದೆ ! ಅಂತಹ ಪರಿಸ್ಥಿತಿ ಸರ್ಕಾರಿ ದವಾಖಾನೆಗಳ ಆಪರೇಶನ್ ಥಿಯೇಟರ್‌ಗಳಲ್ಲಿದೆ. ಎಲ್ಲಿಯೂ ಡಾಕ್ಟರ್‌ಗಳಿಲ್ಲ, ಎಲ್ಲಾದಕ್ಕೂ ಆದ್ಯತೆ ಇವರದು ಯಾವುದಕ್ಕೆ ಆದ್ಯತೆ ಇದೆ ? ಇಂತಹ ಪರಿಸ್ಥಿಯಲ್ಲಿ ಆರೋಗ್ಯ ಖಾತೆಗೂ ಕೂಡ ಹಣ ಕಡಿಮೆ ಮಾಡಿದ್ದೀರಿ. ನಿಜವಾಗಿಯೂ ಈ ವರ್ಷ ಆರೋಗ್ಯ ಖಾತೆಗೆ ಹಣ ಹೆಚ್ಚು ಮೀಸಲಿಡಬೇಕಿತ್ತು. 143ರಿಂದ 200 ಕೋಟಿ ರೂಪಾಯಿಗಳವರೆಗೆ ಹಣ ಮೀಸಲಿಡಬೇಕಿತ್ತು. ದುರ್ದೈವದಿಂದ ಹೆಚ್ಚು ಹಣ ಮೀಸಲಿಡಲಿಲ್ಲ, ಈ ಹಿನ್ನಲೆಯಲ್ಲಿ ಇವರಿಗೆ ಆರೋಗ್ಯದ ಬಗ್ಗೆ ಗಮನವಿಲ್ಲ.

ಇನ್ನು 'ಇತರೆ' ಬಗ್ಗೆ ಹೇಳುವುದಾದರೆ, ಇದರಲ್ಲಿ ಏನೇನು ಮಾಡುತ್ತಾರೋ, ಏನೇನಿದೆಯೋ, ಅವರಲ್ಲಿ ಏನೇನು ಕೂಡಿಸಿದ್ದಾರೋ, ಬಜೆಟ್‌ನಲ್ಲಿ 'ಇತರೆ, ಇತರೆ' ಎಂದು ಇಟ್ಟುಕೊಂಡಿರುತ್ತಾರೆ. ಅದರಲ್ಲಿರುವ ಹಣವನ್ನು ಯಾವುದಕ್ಕೆ ವಿನಿಯೋಗಿಸುತ್ತಾರೋ........ ಡ್ಯಾನ್ಸ್ ಬಗ್ಗೆ ಮುಂದೆ ಹೇಳುತ್ತೇನೆ. ವಿರೋಧ ಪಕ್ಷದ ನಾಯಕರಾದ ಮಾನ್ಯ ಜಗದೀಶ್ ಶೆಟ್ಟರ್‌ರವರು ನಿನ್ನೆ ಡ್ಯಾನ್ಸ್ ಬಗ್ಗೆ ಪ್ರಸ್ತಾಪಿಸಿದರು. ಶಿಡ್ಲಘಟ್ಟದಲ್ಲಿ ಒಂದು ಡ್ಯಾನ್ಸ್ ಮಾಡಿಸಿದ್ದಾರೆ ! ಅಲ್ಲಿ ಡ್ಯಾನ್ಸ್ ಕಾರ್ಯಕ್ರಮ ನಡೆದಿರುವುದನ್ನು ನಾವು ಟಿ.ವಿ.ಯಲ್ಲಿ ವೀಕ್ಷಿಸಿದೆವು. ಮಾನ್ಯ ಅಧ್ಯಕ್ಷರ ಜಿಲ್ಲೆಯಲ್ಲೇ ಮತ್ತೊಂದು ಡ್ಯಾನ್ಸ್ ಕಾರ್ಯಕ್ರಮ ಜರುಗಿದೆ ಅದರ ಬಗ್ಗೆ ನಾನು ಮುಂದೆ ಪ್ರಸ್ತಾಪಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳ ಜಿಲ್ಲೆಯಲ್ಲೊಂದು ಡ್ಯಾನ್ಸ್ ಕಾರ್ಯಕ್ರಮ ನಡೆದರೆ, ಮಾನ್ಯ ಅಧ್ಯಕ್ಷರ ಜಿಲ್ಲೆಯಲ್ಲೊಂದು ನಡೆದಿದೆ !

(ನಗು)

ಶ್ರೀ ಡಿ.ವಿ.ಸದಾನಂದಗೌಡ : 'ಇತರೆ' ಎಂದು ಬಜೆಟ್‌ನಲ್ಲಿ ಹಣ ಇಟ್ಟಿದ್ದಾರಲ್ಲಾ ಅದರಲ್ಲಿ ಬಹುಶಃ ಪ್ರಮುಖವಾಗಿ ಈ ಡ್ಯಾನ್ಸ್‌ಗೆಂದೇ ಮೀಸಲಿಟ್ಟಿರಬೇಕು !

ಅಧ್ಯಕ್ಷರು : ಅದಕ್ಕೂ ನನಗೂ ಬಹಳ ದೂರ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ. 'ಇತರೆ' ಎಂದು ಬಜೆಟ್‌ನಲ್ಲಿ ಇಟ್ಟು ಸಾವಿರ್ವಾರು ವೆಚ್ಚ ಇನ್ನಿತರ ವೆಚ್ಚಗಳಿಗೆ ವಿನಿಯೋಗಿಸಿಕೊಳ್ಳಲಿ. ಆದರೆ, ಕಳೆದ ಸಲ 953 ಕೋಟಿ ಇದ್ದುದು ಈ ಸಲ 825 ಕೋಟಿ ರೂಪಾಯಿಗಳಿಗೆ ಇಳಿಸಿದ್ದಾರೆ. ನೀವು ಇನ್ನೇನು ಮಾಡುತ್ತೀರಿ ? ಗ್ರಾಮೀಣಾಭಿವೃದ್ಧಿ ಹಣಬರಹವೂ ಅಷ್ಟೇ ! ಕೃಷಿ ಹಣೆಬರಹವೂ ಅಷ್ಟೇ ! ನೀರಾವರಿಯ ಹಣೆಬರಹವೂ ಅಷ್ಟೇ ! ಕೈಗಾರಿಕೆ, ನೀರು ಪೂರೈಕೆ, ಶಿಕ್ಷಣ, ಕ್ರೀಡೆ ಮತ್ತು ಸಾರಿಗೆ ಈ ಎಲ್ಲದರ ಹಣೆಬರಹವೂ ಅಷ್ಟೇ ! ಇವೆಲ್ಲವೂ ಆದ್ಯತಾ ವಲಯಗಳು ! ಕುಡಿಯುವ ನೀರು, ಆರೋಗ್ಯ, ಶಿಕ್ಷಣ ಇವೆಲ್ಲದಕ್ಕೂ ಬಜೆಟ್‌ನಲ್ಲಿ ಹಣ ಕಡಿಮೆ ಮಾಡಿದ್ದಾರೆ. ಇವರ ಆದ್ಯತೆಗಳೇನು? ಮಾನ್ಯ ಅಧ್ಯಕ್ಷರೆ. ಇವರು ಅಧಿಕಾರಕ್ಕೆ ಬಂದ ನಂತರ ಎಷ್ಟು ಸಂಖ್ಯೆಯಲ್ಲಿ ಶಿಕ್ಷಕರುಗಳ ನೇಮಕಾತಿಯಾಗಿದಿಲ್ಲ ಎಂಬುದನ್ನು ಕೇಳಿ, ಕನ್ನಡ ಶಾಲೆಯಲ್ಲಿ ಶಿಕ್ಷಕರ ಹುದ್ದೆಗಳು ಖಾಲಿ ಇವೆ. ನಮ್ಮ ಪಕ್ಷದ ಸರ್ಕಾರ ಅಧಿಕಾರದಲ್ಲಿದ್ದಾಗ 7ರಿಂದ 10ನೇ ತರಗತಿವರೆಗೆ ಏಳು ಶಿಕ್ಷಕರನ್ನು ನೇಮಿಸಿದ್ದೆವು. ಈಗ ಒಂದು ತರಗತಿಗೆ ನಲವತ್ತು ಸಂಖ್ಯೆಯಲ್ಲಿ ವಿದ್ಯಾರ್ಥಿಗಳಿದ್ದರೂ ಅನುಪಾತಕ್ಕೆ ತಕ್ಕಂತೆ ಶಿಕ್ಷಕರನ್ನು ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಪರಿಸ್ಥಿತಿ ಹೀಗಿದ್ದರೂ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಾರಂತೆ, ಅಕ್ಷರ ಊಟದಂತೆ ! ಅಕ್ಷರ ದಾಸೋಹ ಕಾರ್ಯಕ್ರಮವನ್ನು ಟಿ.ವಿ.ಯಲ್ಲಿ ನೋಡಬೇಕು. ರೇಡಿಯೋ, ಟಿ.ವಿ.ಯಲ್ಲಿ ಈ ಕಾರ್ಯಕ್ರಮದ್ದೇ ಪ್ರಸಾರ. ಕೇಂದ್ರ ಸರ್ಕಾರ ಯಾವಾಗ ಅಕ್ಕಿ ಸರಬರಾಜು ಮಾಡುವುದನ್ನು ನಿಲ್ಲಿಸುವುದೋ ಅವೊತ್ತೇ ಈ ಅಕ್ಷರ ದಾಸೋಹ ಕಾರ್ಯಕ್ರಮ ಕೂಡ ನಿಂತುಹೋಗುತ್ತದೆ. ಇವೊತ್ತು ಇವರಿಗೆ ಯಾವುದೇ ಆದ್ಯತೆಯಿಲ್ಲ. ಯಾವುದೇ ಆದ್ಯತೆ ಗೊತ್ತಿಲ್ಲ, ಈ ಬಜೆಟ್ ಗಮನಿಸಿದರೆ ಆದ್ಯತಾ ವಲಯಗಳಿಗೆ ಕೂಡ ಬಜೆಟ್‌ನಲ್ಲಿ ಹಣ ಕಡಿಮೆಗೊಳಿಸಿರುವುದರಿಂದ ಆದ್ಯತಾ ವಲಯಗಳಿಗೆ ಅನ್ಯಾಯವೆಸಗಿದ್ದಾರೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇವೊತ್ತು ನಮಗೆ ಕುಡಿಯುವ ನೀರು ಬೇಕು, ಮಳೆ ಬೇಕು. ಇದಾಗಬೇಕಿದ್ದರೆ ಇವರು ಇನ್ಯಾವುದಕ್ಕೆ ಹೆಚ್ಚು ಆದ್ಯತೆ ನೀಡಬೇಕು? ಅದೇನೂ ಇವೊತ್ತು ಆಗುವುದಿಲ್ಲ, ಅರಣ್ಯೀಕರಣದ ಕಡೆ ಇವರ ಲಕ್ಷ್ಯವಿಲ್ಲ. ಅರಣ್ಯೀಕರಣದ ಬಗ್ಗೆ ನಾನು ಹೇಳುತ್ತಾ ಬಂದಿದ್ದರೂ ಬಜೆಟ್‌ನಲ್ಲಿ ಈ ಕುರಿತು

ಯಾವುದೇ ಪ್ರಸ್ತಾಪ ಮಾಡಿಲ್ಲ. ಈ ಬಜೆಟ್ ಮಾಡಿರುವುದು ವೋಟಿಗೋಸ್ಕರ ! ವೋಟಿಗೋಸ್ಕರ ಏನೇನು ಹೇಳಬೇಕೋ ಅದೆಲ್ಲವನ್ನೂ ಹೇಳಿದ್ದಾರೆ. ಅರಣ್ಯದ ಬಗ್ಗೆ ಬಜೆಟ್‌ನಲ್ಲಿ ಒತ್ತುಕೊಟ್ಟಿಲ್ಲ. ಅರಣ್ಯವೆಲ್ಲವೂ ಹಾಳಾಗಿ ಹೋಗಿದೆ, ಅರಣ್ಯ ಬೆಳೆಸುವ ಕಡೆಗೆ ಇವರ ಗಮನವಿಲ್ಲ ಪರಿಸರ ಸಂರಕ್ಷಣೆ ಬಗ್ಗೆ ಇವರ ಗಮನವಿಲ್ಲ. ಅಧ್ಯಕ್ಷರೇ, ನಿಮ್ಮ ಜಿಲ್ಲೆಯಲ್ಲಿನ ವಿಷಯ ತೆಗೆದುಕೊಂಡರೆ, ಅಲ್ಲಿ 700ರಿಂದ 800 ಅಡಿ ಆಳದವರೆಗೂ ಬೋರ್ ಹಾಕಿದ್ದಾರೆ. ಪರಿಸ್ಥಿತ ಹೀಗೆಯೇ ಮುಂದುವರೆದರೆ ಮುಂದೊಂದು ದಿನ ಬಾಟಲಿಯ ನೀರು ಕುಡಿಯಬೇಕಾಗುತ್ತದೆ. ಆಗ ಗಿಡ-ಮರಗಳೆಲ್ಲವೂ ಒಣಗಿಹೋಗಿ, ಮುಖಕ್ಕೆ ಆಕ್ಸಿಜನ್ ಮಾಸ್ಕ್ ಧರಿಸಿ ಅಡ್ಡಾಡುವ ಕಾಲ ಬಹಳ ದೂರವಿಲ್ಲ. ಸರ್ಕಾರ ಮಾಡಿರುವ ತಪ್ಪಿಗೆ ಮುಂದಿನ ಪೀಳಿಗೆ ಹಾಳಾಗಬೇಕಾಗುತ್ತದೆ, ಆ ಪೀಳಿಗೆ ನಿಮ್ಮನ್ನು ಶಪಿಸುತ್ತದೆ. ಇವೊತ್ತಿನಿಂದ ನಾವು ಅರಣ್ಯೀಕರಣ ಮಾಡದಿದ್ದರೆ ಮುಂದಿನ ದಿನಗಳಲ್ಲಿ ಬಹಳ ಕಷ್ಟವನ್ನು ಎದುರಿಸಬೇಕಾಗುತ್ತದೆ. ಒಂದು ಅರಣ್ಯ ಬೆಳೆಸಬೇಕಿದ್ದರೆ 65 ವರ್ಷಗಳು ಬೇಕು. ಒಂದು ಅರಣ್ಯವಾಗಬೇಕಿದ್ದರೆ, ಇವೊತ್ತು ಗಿಡಗಳನ್ನು ನೆಟ್ಟರೆ ಅವು ಬೆಳೆದು ಹೆಮ್ಮರವಾಗಿ ಅರಣ್ಯವಾಗಲು 65 ವರ್ಷಗಳು ಬೇಕಾಗುತ್ತದೆ. ಆದರೆ, ದುರ್ದೈವವಶಾತ್, ಅರಣ್ಯೀಕರಣದ ಕಡೆ ಇವರ ಗಮನವಿಲ್ಲ. ಪರಿಸರದ ಕಡೆಗೂ ಗಮನವಿಲ್ಲ. ಹೀಗೆ 700-800 ಅಡಿಗಳವರೆಗೂ ಬೋರ್ ಹಾಕುತ್ತಾ ಹೋಗುತ್ತಿದ್ದರೆ ಗಿಡ-ಮರಗಳ ಬೇರುಗಳಿಗೆ ನೀರು ದಕ್ಕದೆ ಅವೆಲ್ಲವೂ ನಾಶವಾದರೆ ನಾವೆಲ್ಲರೂ ಮೂಗಿಗೆ ಆಕ್ಸಿಜನ್ ಮಾಸ್ಕ್ ಧರಿಸಿ ಓಡಾಡುವ ಪರಿಸ್ಥಿತಿ ಬರುತ್ತದೆ ಅದರತ್ತ ಇವರ ಗಮನವೂ ಇಲ್ಲ. ಆದ್ಯತೆಯೂ ಇಲ್ಲ. ಆರೋಗ್ಯದ ಬಗ್ಗೆ ಈಗಾಗಲೇ ಹೇಳಿದ್ದೇನೆ. ಅದರ ಬಗ್ಗೆಯೂ ಗಮನವಿಲ್ಲ.

ಇನ್ನು ಪಶುಸಂಗೋಪನೆ ಬಗ್ಗೆ ಹೇಳುವುದಾದರೆ, ಈ ಖಾತೆಯ ಮಂತ್ರಿಗಳು ಸದನದಲ್ಲಿಲ್ಲ. ಪಶುವೈದ್ಯ ವಿಶ್ವವಿದ್ಯಾನಿಲಯಕ್ಕೆ ಬಸವಣ್ಣನವರ ಹೆಸರಿಡಲು ಹೊರಟಿದ್ದಾರೆ ! ಗುಲ್ಬರ್ಗ ವಿಶ್ವವಿದ್ಯಾನಿಲಯಕ್ಕೆ ಬಸವಣ್ಣನವರ ಹೆಸರಿಡಿಯೆಂದರೆ. ಬೀದರ್‌ನಲ್ಲೊಂದು ಹೊಸ ಪಶು ವಿಶ್ವವಿದ್ಯಾನಿಲಯ ಸ್ಥಾಪಿಸಲು ಹೊರಟಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ಬೀದರ್‌ನಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಪಶುವೈದ್ಯ ವಿಶ್ವವಿದ್ಯಾನಿಲಯದ ವ್ಯಾಪ್ತಿ ಬಹಳ ಸೀಮಿತವಾಗಿದೆ. ಇವೊತ್ತು ಬಸವಣ್ಣನವರು ಅಂತರಾಷ್ಟ್ರೀಯ ಮಟ್ಟದ ವ್ಯಕ್ತಿಯಾಗಿದ್ದಾರೆ. ಇವೊತ್ತು ಸರ್ಕಾರಕ್ಕೆ ನಿಜವಾಗಿಯೂ ಬಸವಣ್ಣನವರ ಹೆಸರನ್ನು ಇಡಬೇಕೆಂಬ ಇಚ್ಛೆಯಿದ್ದರೆ ಗುಲ್ಬರ್ಗ ವಿಶ್ವವಿದ್ಯಾನಿಲಯಕ್ಕೆ ಇಡಿ, ಕೃಷಿ ವಿಶ್ವವಿದ್ಯಾನಿಲಯಕ್ಕೆ ಇಡಿ, ಇಲ್ಲವೇ ಬೆಂಗಳೂರಿನಲ್ಲಿ ಸ್ಥಾಪನೆಯಾಗಲಿರುವ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಅವರ ಹೆಸರಿಡಿ. ಅದು ಬಿಟ್ಟು ಸುಮ್ಮನೆ ನಾವು ಬಸವಣ್ಣನವರ ಹೆಸರಿಟ್ಟೆವು ಎಂದು ಹೇಳುವ ಮೂಲಕ ಪಶುವೈದ್ಯ ವಿಶ್ವವಿದ್ಯಾನಿಲಯಕ್ಕೆ ಅವರ ಹೆಸರಿಡುವುದು ಸರಿಯಾದ ಕ್ರಮವಲ್ಲ. ಇದರ ಬಗ್ಗೆ ಹಿರಿಯರಾದ ನೀವುಗಳೆಲ್ಲರೂ ವಿಚಾರ ಮಾಡಬೇಕು. ಪಶುವೈದ್ಯ ವಿಶ್ವವಿದ್ಯಾನಿಲಯಕ್ಕೆ ಬಸವಣ್ಣನವರ ಹೆಸರಿಡಲು ಹೊರಟಿದ್ದೀರಿ. ರಾಜ್ಯ ಸರ್ಕಾರ ಈ ರೀತಿ ಹೇಳಿರುವುದರ ಬಗ್ಗೆ ಪತ್ರಿಕೆಗಳಲ್ಲಿ ಆ ಹೇಳಿಕೆ ಪ್ರಕಟವಾಗಿದೆ. ಅದಕೋಸ್ಕರ, ಪಶುವೈದ್ಯ ವಿಶ್ವವಿದ್ಯಾನಿಲಯಕ್ಕೆ ಬಸವಣ್ಣನವರ ಹೆಸರಿಡುವುದರ ಮೂಲಕ ಅವರಿಗೆ ಅವಮಾನ ಮಾಡುತ್ತಿದ್ದೀರಿ. ಇದು ಬೇಡ. ನಿಜವಾಗಿಯೂ ನೀವು ಬಸವಣ್ಣನವರ ಹೆಸರಿಡಬೇಕಿದ್ದರೆ ಅಂತಹ ಧೀಮಂತ ವ್ಯಕ್ತಿಗೆ ಬೆಂಗಳೂರಿನಲ್ಲಿ ಸ್ಥಾಪನೆಗೊಳ್ಳಲಿರುವ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಅವರ ಹೆಸರಿಡಿ ಅಥವಾ ಗುಲ್ಬರ್ಗಾ ವಿಶ್ವವಿದ್ಯಾನಿಲಯಕ್ಕೆ ಅವರ ಹೆಸರಿಡಿ. ಅದು ಬಿಟ್ಟು ಪಶುವೈದ್ಯ ವಿಶ್ವವಿದ್ಯಾನಿಲಯಕ್ಕೆ ಅವರ ಹೆಸರಿಡುತ್ತಿದ್ದೀರಿ. ಅದರ ವ್ಯಾಪ್ತಿಯೊಳಗೆ

ಎರಡು ಕಾಲೇಜುಗಳು ಮಾತ್ರ ಬರುತ್ತದೆ. ಅದರ ವ್ಯಾಪ್ತಿಗೆ ಏನೇನೂ ಇಲ್ಲ. ಸುಮ್ಮನೆ ಹೆಸರಿಡುತ್ತೇವೆಂದು ಅವರ ಹೆಸರಿಟ್ಟುಬಿಡುವ ಕ್ರಮ ಸರಿಯಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ಸಾಮಾಜಿಕ ನ್ಯಾಯ ಒದಗಿಸಿರುವಂಥ ಯಾರಾದರೂ ಪ್ರವಾದಿ ಇದ್ದರೆ ಅದು ಬಸವಣ್ಣನವರು ಮಾತ್ರ ಎಲ್ಲರನ್ನೂ ಸಮಾನತೆಯಿಂದ ಕಂಡು, ತುಳಿಯಲ್ಪಟ್ಟವರನ್ನು ಮೇಲಕ್ಕೆತ್ತಿದವರು ಬಸವಣ್ಣನವರು. ಬಸವಣ್ಣನವರ ಹೆಸರಿಡುವುದರ ಮೂಲಕ ಏನೋ ಮಾಡುತ್ತೇವೆಂದು ಮಾಡು ಈ ರಾಜ್ಯದಲ್ಲಿರುವ ಲಿಂಗಾಯತರ ವೋಟು ಪಡೆಯಬೇಕೆಂಬ ದೃಷ್ಟಿಯಿಂದ ಮಾಡುತ್ತಿರುವ ಕೆಲಸ ಇದು. ಮೊದಲು ಅಕ್ಷರ ದಾಸೋಹ ಕಾರ್ಯಕ್ರಮದ ಮೇಲುಸ್ತವಾರಿಗೆ ರೇವಣ್ಣಸಿದ್ದಯ್ಯನವರನ್ನು ನೇಮಿಸಿದರು, ಈಗ ಬಿ.ಎಸ್. ಪಾಟೀಲ್ ಅವರನ್ನು ದೆಹಲಿಯಲ್ಲಿ ರಾಜ್ಯದ ವಿಶೇಷ ಪ್ರತಿನಿಧಿಯಾಗಿ ನೇಮಿಸಿದ್ದಾರೆ. ಈಗ ಮತ್ತೆ ಇದೊಂದು ತಂದಿದ್ದಾರೆ. ಇವರ ನಾಟಕವೆಲ್ಲಾ ತಿಳಿಯುತ್ತದೆ. ಇದು ತಿಳಿಯದಿರುವುದೇನಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಪಾಟೀಲರೆ, ತಾವು ಸ್ವಲ್ಪ ಕೇಳಬೇಕು. ಬಸವಣ್ಣನವರ ಗುತ್ತಿಗೆಯನ್ನು ನೀವೊಬ್ಬರೇ ತೆಗೆದುಕೊಂಡಿದ್ದೀರಾ ? ನೀವು ಅವರ ಗುತ್ತಿಗೆದಾರರೇ ? ಈ ರಾಜ್ಯದ ಲಿಂಗಾಯತರ ವೋಟು ದಕ್ಕಿಸಿಕೊಳ್ಳಲು ಬಸವಣ್ಣನವರ ಹೆಸರಿಡುತ್ತಾರೆಂದು ನೀವು ಹೇಳುತ್ತಿದ್ದೀರಲಾ, ರೇವಣ್ಣಸಿದ್ದಯ್ಯ ಮತ್ತು ಬಿ.ಎಸ್. ಪಾಟೀಲರನ್ನು ನೇಮಿಸಿರುವುದರ ಬಗ್ಗೆ ನೀವೇನು ಹೇಳುತ್ತಿದ್ದೀರಿ. ಬಸವಣ್ಣನವರನ್ನು ನೀವೊಬ್ಬರೇ ಗುತ್ತಿಗೆ ತೆಗೆದುಕೊಂಡಿದ್ದೀರಾ ? ಬಸವಣ್ಣನವರು ಇಡೀ ಪ್ರಪಂಚಕ್ಕೆ ಒಂದು ಐಡಿಯಾಲಜಿ, ಫಿಲಾಸಫಿ ಕೊಟ್ಟಂಥ ಮಹಾಪುರುಷರು, ಅವರ ತತ್ವವನ್ನು ನಿಮ್ಮ ಮನೆಯಲ್ಲಿಯೇ ಇಟ್ಟುಕೊಂಡಿದ್ದಕ್ಕಾಗಿ ಇವೊತ್ತು ಈ ಪರಿಸ್ಥಿತಿ ಬಂದಿದೆ ! ಆ ತತ್ವವನ್ನು ನಿಮ್ಮ ಮನೆಯಿಂದ ಹೊರಗಡೆ ಬಂದಿದ್ದರೆ ಇವೊತ್ತು ಈ ದೇಶದಲ್ಲೊಂದು ಕ್ರಾಂತಿಯಾಗುತ್ತಿತ್ತು. ಆ ಕ್ರಾಂತಿಯನ್ನು ತಪ್ಪಿಸಿದವರು ನೀವು. 'ನಿಮ್ಮದು. ನಮ್ಮದು' ಎಂದು ಹೇಳದೆ 'ನಮ್ಮೆಲ್ಲರದೂ' ಎಂದು ಹೇಳಿ.

ಶ್ರೀ ಎಸ್.ಎಸ್. ಪಾಟೀಲ್ : ತಾವು ಇನ್ನೇನಾದರೂ ಹೇಳುವುದಿದೆಯೇ ? ಗುಲ್ಬರ್ಗ ವಿಶ್ವವಿದ್ಯಾನಿಲಯಕ್ಕೆ ಬಸವಣ್ಣನವರ ಹೆಸರಿಡಲು ವಿರೋಧಿಸಿದವರು ಯಾರು ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅಲ್ಲಿ ಅನೇಕ ವಿಚಾರಗಳಿವೆ ಅಂತಹ controversy ಅನ್ನು ಇಲ್ಲಿ ತರಬೇಡಿ. ಕೆಲವೆಡೆ ಅಂಬೇಡ್ಕರ್ ಹೆಸರನ್ನು ಹೇಳಿದರೆ, ಮತ್ತೆ ಕೆಲವು ಕಡೆ ಬಸವಣ್ಣನವರ ಹೆಸರನ್ನು ಹೇಳುತ್ತಾರೆ. ಇನ್ನೂ ಕೆಲವು ಕಡೆ ಅಲ್ಲಿನ ಸ್ಥಳೀಯ ರಾಜರ ಹೆಸರನ್ನು ಇಡಬೇಕೆಂದು ಹೇಳುತ್ತಾರೆ. ನೀವು ಅದನ್ನು ತಂದು ಇದಕ್ಕೆ ತೊಡಿಸಬೇಡಿ. ನಿಮಗೆ ಎಲ್ಲಿ ಅನುಕೂಲವಾಗುತ್ತದೋ ಅಲ್ಲಿ ಅವರ ಹೆಸರನ್ನು ಉಪಯೋಗಿಸುವುದು. ಅನಾನುಕೂಲವಾದರೆ ಜಾತಿ ಹೆಸರು ಹೇಳಿಕೊಂಡು ಹೋಗುವುದು. ಇದೆಲ್ಲವೂ ನಮಗೆ ಗೊತ್ತಿದೆ. ತಾವು ಕುಳಿತುಕೊಳ್ಳಿ.

ಅಧ್ಯಕ್ಷರು : ಪಾಟೀಲ್‌ರೆ, ಮಹಾನುಭಾವರ ಹೆಸರನ್ನು ಪ್ರಸ್ತಾಪಿಸುವ ಮೂಲಕ controversy ಸೃಷ್ಟಿಸುವುದು ಬೇಡ.

ಶ್ರೀ ಎಸ್.ಎಸ್. ಪಾಟೀಲ್ :ಮಾನ್ಯ ಅಧ್ಯಕ್ಷರೆ, ಇವೆಲ್ಲವೂ ಇರಬೇಕು. ಅಸೆಂಬ್ಲಿಯಲ್ಲಿ ನಾವು ಹೇಳಬೇಕು ಅವರು ಕೇಳಬೇಕು. ಇದೆಲ್ಲವೂ ನಡೆಯಬೇಕು. ಇದರ ಬಗ್ಗೆ ಚರ್ಚೆಯಾಗಬೇಕು.

ಅಧ್ಯಕ್ಷರು : ಇಲ್ಲಿ controversy ಬೇಡ. ಚರ್ಚೆ ಬೇಕಿದ್ದರೆ ಹೊರಗಡೆ ಮಾಡಿಕೊಳ್ಳಿ. ಇಲ್ಲಿ ಬಜೆಟ್ ಬಗ್ಗೆ ಮಾತ್ರ ನೀವು ಮಾತನಾಡಬೇಕು.

ಶ್ರೀ ಎಸ್.ಎಸ್. ಪಾಟೀಲ್ : ನಾನು ಬಜೆಟ್ ಬಗ್ಗೆಯೇ ಮಾತನಾಡುತ್ತಿದ್ದೇನೆ.

ಅಧ್ಯಕ್ಷರು : ಬಜೆಟ್‌ಗೂ ಬಸವಣ್ಣನವರಿಗೂ ಎಲ್ಲಿಂದೆಲ್ಲಿಯ ಸಂಬಂಧ ?

ಶ್ರೀ ಎಸ್.ಎಸ್. ಪಾಟೀಲ್ : ಒಂದು ವಿಶ್ವವಿದ್ಯಾನಿಲಯಕ್ಕೆ ಬಸವಣ್ಣನವರ ಹೆಸರಿಡುತ್ತೇವೆಂದು ಹೇಳಿದ್ದಾರೆ.

ಅಧ್ಯಕ್ಷರು : ಅದು Controversy ಇದ್ದರೆ ಮತ್ತೇಕೆ ಮಾತನಾಡುತ್ತೀರಿ ? ಮಾನ್ಯ ಪಾಟೀಲ್‌ರೆ, ಅಂಬೇಡ್ಕರ್ ಅವರನ್ನಾಗಲಿ, ಬಸವಣ್ಣನವರನ್ನಾಗಲಿ ದಯವಿಟ್ಟು Conteroversy ಯಾಗಿ ಮಾಡಬೇಡಿ.

ಶ್ರೀ ಕೆ.ಷಡಕ್ಷರಿ : ಪಶು ಸಂಪತ್ತು ಬಹಳ ಪವಿತ್ರವಾದ ಸಂಪತ್ತಾಗಿದೆ. ಪಶುವಿಶ್ವವಿದ್ಯಾನಿಲಯಕ್ಕೆ ಬಸವಣ್ಣನವರ ಹೆಸರಿಡುವುದಕ್ಕೆ ನೀವೇಕೆ ವಿರೋಧಿಸುತ್ತಿದ್ದೀರೆಂಬುದು ಗೊತ್ತಾಗುತ್ತಿಲ್ಲ.

ಡಾ: ಎಸ್.ಎಲ್. ಭಾರತೀಶಂಕರ್ :ಮಾನ್ಯ ಅಧ್ಯಕ್ಷರೇ, ಮನುಷ್ಯರಿಗಿಂತಲೂ ಎಷ್ಟೋ ಸಲ ಪಶುಗಳೇ ಮೇಲಲ್ಲವೇ ? ಪಶುವೈದ್ಯ ವಿಶ್ವವಿದ್ಯಾನಿಲಯಕ್ಕೆ ಬಸವಣ್ಣನವರ ಹೆಸರಿಡುವುದರಲ್ಲಿ ತಪ್ಪೇನಿದೆ ?

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಖರ್ಗೆಯವರು ಏನು ಹೇಳಿದ್ದರು, ಮತ್ತೆ ನೀವು ಅಲ್ಲಿಗೇ ಬಂದು ಮುಟ್ಟಿದಿರಿ.

ಅಧ್ಯಕ್ಷರು : ಮಾನ್ಯ ಪಾಟೀಲರೇ, ಇನ್ನು ಕೇವಲ 15 ನಿಮಿಷಗಳ ಕಾಲ ಮಾತ್ರ ತಮಗೆ ಉಳಿದಿರುವುದರಿಂದ ಅಷ್ಟರೊಳಗೆ ತಾವು ತಮ್ಮ ಮಾತುಗಳನ್ನು ಮುಗಿಸಬೇಕು. .

ಶ್ರೀ ಎಸ್.ಎಸ್. ಪಾಟೀಲ್ : ಆಯಿತು 15 ನಿಮಿಷದೊಳಗೆ ಮಾತನಾಡೋಣ ಬಿಡಿ. ಕೊನೆಗೆ ಎಲ್ಲರೂ ಹೋಗುತ್ತೇವೆ. ನಾಳೆ ದಿವಸ ನಮ್ಮನ್ನು ಮಾತನಾಡಿರೆಂದರೂ ನಾವು ಸಿಗುವುದಿಲ್ಲ. ನೀವೂ ಅಧ್ಯಕ್ಷರಾಗಿರುವುದಿಲ್ಲ, ನಾನೂ ಇರುವುದಿಲ್ಲ, ಮುಂದೇನಾಗುತ್ತದೋ? ಅದು ದೇವರಿಗೇ ಗೊತ್ತು !

ಶ್ರೀ ಮಲ್ಲಿಕಾರ್ಜುನ ಖರ್ಗೆ : ಹೋಗುವವರು ಹೋಗಿ. ನಾವು ಬರುವವರಿದ್ದೇವೆ ! ಅದಕೋಸ್ಕರ, ಬರುವವರಿಗಾಗಿ ನೀವೇಕೆ ಬೇಡವೆನ್ನುತ್ತೀರಿ ?

ಶ್ರೀ ಎಸ್.ಎಸ್. ಪಾಟೀಲ್ : ಈ ರಾಜ್ಯದ ಮತದಾರ ಏನು ಮಾಡುತ್ತಾನೋ ಗೊತ್ತಿಲ್ಲ, ಎಲ್ಲರೂ ಹೊರಗೆ ಹೋಗುವವರೇ. ನೀವೂ ಹೊರಗೆ ಹೋಗುವವರೇ. ಆದುದರಿಂದ, ನೀವು ಇನ್ನೂ ಉಸ್ತುವಾರಿ ಮಂತ್ರಿಯಾಗಿ ಉಳಿಯುತ್ತೀರಿ. ನೀವು ಉಳಿದರೂ ಕೂಡ ನಾವು ಬೈಯಿಸಿಕೊಳ್ಳುವುದಕ್ಕೆ ಇರುವುದಿಲ್ಲ.

ಅಧ್ಯಕ್ಷರು : ಅದು ರಾಜ್ಯಾಂಗದಲ್ಲಿ ಮೆನ್‌ಷನ್ ಮಾಡಿರುವುದು. ಅದರ ಬಗ್ಗೆ ನಾವೇಕೆ ಚರ್ಚೆ ಮಾಡಬೇಕು ?

ಶ್ರೀ ಎಸ್.ಎಸ್. ಪಾಟೀಲ್ : ರಾಜ್ಯಾಂಗದ ಬಗ್ಗೆ ನಾನು ಮಾತನಾಡಬೇಕೆಂದರೆ, ಸಂವಿಧಾನ ವಿರೋಧಿ ಕೃತ್ಯವಾಗುತ್ತದೆ. ಮಧ್ಯಂತರ ಚುನಾವಣೆಗಳನ್ನು ಮಾಡಿದರೆ ಸಂವಿಧಾನಕ್ಕೆ ಅಪಮಾನ. ಐದು ವರ್ಷಗಳಿಗೆ ಒಂದು ಸಲ ಚುನಾವಣೆಯಾಗಬೇಕೆಂದು ಸಂವಿಧಾನದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ.

ಶ್ರೀ ಕರಿಯಣ್ಣ : ಇದನ್ನು ಕೇಂದ್ರ ಸರ್ಕಾರಕ್ಕೆ ಹೇಳಿದರ ನ್ಯಾಯ. ಕೇಂದ್ರ ಸರ್ಕಾರಕ್ಕೆ ಮಾಡದೆ ರಾಜ್ಯ ಸರ್ಕಾರದಲ್ಲಿ ಮಾಡಿದರೆ ಏನು ಮಾಡೋಣ ? ಒಂದು ಸಲ ಜಾತಿಯ ಬಗ್ಗೆ ಹೇಳುತ್ತೀರಿ ಮತ್ತೊಂದು ಸಲ ಸಂವಿಧಾನಕ್ಕೆ ಹೋಲಿಸುತ್ತೀರಿ......

ಶ್ರೀ ಎಸ್.ಎಸ್. ಪಾಟೀಲ್ : ಆದರೆ ಸಂವಿಧಾನಕ್ಕೆ ಗೌರವ ಕೊಡಬೇಕಾಗುತ್ತದೆ. ಇಂಗ್ಲೇಡ್‌ನಲ್ಲಿ ಐದು ವರ್ಷ ಆಗುವವರೆಗೆ ಚುನಾವಣೆಯನ್ನೇ ಮಾಡುವುದಿಲ್ಲ. ಆದರೆ ನಮ್ಮ ದೇಶದಲ್ಲಿ ತಮಗೆ ಯಾವಾಗ ಬೇಕಾದರೂ ಚುನಾವಣೆ ಮಾಡುವುದು ದೇಶವನ್ನು ಹಾಳು ಮಾಡುವುದು....

ಅಧ್ಯಕ್ಷರು : ಕೇಂದ್ರ ಸರ್ಕಾರದವರು ಮಾಡುತ್ತಿದ್ದಾರೆ. ಅವರು ಮಾಡದಿದ್ದರೆ ಇವರೇನು ? ಮಾಡುತ್ತಿರಲಿಲ್ಲ. ನಮಗೆ ಅಂದರೆ ಶಾಸಕರಿಗೆ ವಿ.ಆರ್.ಎಸ್.ಕೂಡ ಇಲ್ಲ. ಕಂಪಲ್‌ಸರಿ ರಿಟೈರ್‌ಮೆಂಟ್.

ಶ್ರೀ ಎಸ್.ಎಸ್. ಪಾಟೀಲ್ : ನಾನು ಹೇಳುತ್ತಿರುವುದು ನೀವು ಡಿಸಾಲ್ವ್ ಮಾಡಲು ಹೋಗಬೇಡಿ. ಚುನಾವಣಾ ಕಮೀಷನರ್ ಏನು ಮಾಡುತ್ತಾರೋ ನೋಡೋಣ. ಅಧಿಕಾರ ಹೇಗೂ ನಿಮ್ಮ ಕೈಯಲ್ಲೇ ಇದೆಯಲ್ಲಾ ನೀವು ಅದಕ್ಕೆ ಅಂಟಿಕೊಳ್ಳಿರಿ. ತಾವು ಸಂವಿಧಾನಕ್ಕೆ ಅಂಟಿಕೊಳ್ಳಿರಿ. ನಾವು ಹೋದ ಸಲ ಅಂಟಿಕೊಂಡೆವು. ಅವರೇ ಡಿಸಾಲ್ವ್ ಮಾಡುವುದಾದರೆ ಮಾಡಿಕೊಳ್ಳಿ ಎಂದು ಹೇಳಿ. ನಾವೇನು ಚುನಾವಣೆ ಮಾಡಲು ಅಂಜಿರಲಿಲ್ಲ, ಆದರೆ ಸಂವಿಧಾನವನ್ನು ಗೌರವಿಸಬೇಕೆಂದು ಹೋದ ಸಲ ನಾವು ಡಿಸಾಲ್ವ್ ಮಾಡಲು ಹೋಗಲಿಲ್ಲ. ನಮ್ಮ ಕಾನೂನು ಸಚಿವರು ಚುನಾವಣಾ ಕಮೀಷನರ್‌ರವರಿಗೆ ಆ ಅಧಿಕಾರ ಇಲ್ಲವೆಂದು ಹೇಳಲು ಈಗ ಪ್ರಾರಂಭ ಮಾಡಿದ್ದಾರೆ. ಬಹಳ ಎಂದರೆ ಅದು ಸಲಹೆ ಮಾಡಬಹುದೆಂದು ಹೇಳುತ್ತಿದ್ದಾರೆ. ಅದೇನು ಮಾಡುತ್ತಾರೋ ಅವರಿಗೇ ಗೊತ್ತು ಆದರೆ ಸಂವಿಧಾನವನ್ನು ಗೌರವಿಸಬೇಕೆಂದರೆ ಐದು ವರ್ಷಕ್ಕೆ ಒಂದು ಸಲ ಚುನಾವಣೆ ನಡೆಯಬೇಕು. ಮಧ್ಯಂತರ ಚುನಾವಣೆಯನ್ನು ಮಾಡಿ ದೇಶವನ್ನು ಹಾಳು ಮಾಡುತ್ತಾರೆ. ಈ ಬಡ ದೇಶದಲ್ಲಿ ಸಾವಿರಾರು ಕೋಟಿ ರೂಪಾಯಿಗಳು ಹಾಳಾಗುತ್ತದೆ. ಐದು ವರ್ಷಕ್ಕೆ ಒಂದು ಸಲ ಚುನಾವಣೆಯಾಗದಿದ್ದರೆ ರಾಷ್ಟ್ರಪತಿಗಳ ಆಳ್ವಿಕೆ ಬರಬೇಕು. ಅದಕ್ಕೆ ಹೊರತು ಮಧ್ಯಂತರ ಚುನಾವಣೆಗೆ ಅದು ಬರಬಾರದು. ಅದು ನನ್ನ ಮತ್ತು ನಮ್ಮ ಪಕ್ಷದ ವಾದ. ಆದರೆ ಅವರೇ ಡಿಸಾಲ್ವ್ ಮಾಡಿದರೆ ನಾವು ತಯಾರಿದ್ದೇವೆ. ನಾವು ಏನೇ ಮಾಡಲು ತಯಾರಿದ್ದೇವೆ. ಅದರ ಬಗ್ಗೆ ಬೇರೆ ಪ್ರಶ್ನೆ ಇಲ್ಲ. ಆದರೆ ಅದನ್ನು ಮಾಡಬಾರದು, ಅದು ಸರಿಯಲ್ಲ. ಕೇಂದ್ರ ಸರ್ಕಾರ ಕೂಡ ಮಾಡಿದ್ದು ಬಹಳ ದೊಡ್ಡ ತಪ್ಪು. ಶ್ರೀ ಮಾನ್ ವಾಜ್‌ಪೇಯಿಯವರಂಥ ಘನತೆವೆತ್ತ ಪ್ರಧಾನ ಮಂತ್ರಿಗಳು ಈ ಮಟ್ಟಕ್ಕೆ ಇಳಿಯಬಾರದಿತ್ತು ಎಂದು ನನ್ನ ವಾದ. ಅವರು ನಿಜವಾಗಿಯೂ ಇದನ್ನು ಮಾಡಬಾರದಿತ್ತು. ಬಿಜೆಪಿಯವರೂ ಕೂಡ ಡಿಸಾಲ್ವ್ ಮಾಡಬಾರದಿತ್ತು. ಸಂವಿಧಾನವನ್ನು ಗೌರವಿಸಬೇಕಾಗಿತ್ತು. ಸಂವಿಧಾನದ ಪ್ರಕಾರ ಐದು ವರ್ಷಕ್ಕೆ ಒಂದು ಸಲ ಚುನಾವಣೆ ನಡೆಯಬೇಕಾಗುತ್ತದೆ. ಇವತ್ತು ಇಂಗ್ಲೆಂಡ್‌ನ ಸಂವಿಧಾನವನ್ನು ಹೋಗಿ ನೋಡಿ, ಅದರಲ್ಲಿ ನಮ್ಮಂತೆ ಇಷ್ಟೊಂದು ಬರೆದಿಲ್ಲ. ಆದರೂ ಕೂಡ ಅವರು ಮಾಡುತ್ತಿಲ್ಲ. ಅಲ್ಲಿ ಮಾಡುವುದಿಲ್ಲ. ಇದು ನಮ್ಮ ದೇಶದ ದುರಂತ, ದುರ್ದೈವ, ಈ ಹಿನ್ನೆಲೆಯಲ್ಲಿ, ನಿಜವಾಗಿಯೂ ಆ ಬಸವಣ್ಣನವರ ಹೆಸರನ್ನು ಇಡಬೇಕೆಂದಿದ್ದರೆ ಗುಲ್ಬರ್ಗಾ ವಿಶ್ವವಿದ್ಯಾನಿಲಯ ಅಥವಾ ಕೃಷಿ ವಿಶ್ವವಿದ್ಯಾನಿಲಯಕ್ಕೆ ಇಡಿ. ಅಕ್ಕಮಹಾದೇವಿಯವರ ಹೆಸರನ್ನು ಇಡಬೇಕೆಂದು ಹೇಳಿದೆವು. ಆದರೆ ಅದನ್ನು ಇಡುತ್ತಿಲ್ಲ. ಅದನ್ನು ಬಿಟ್ಟು ಏನೇನೋ ಹೊಸದನ್ನು ಮಾಡಲು ಹೊರಟಿದ್ದೀರಿ. ಆ ಹೆಸರನ್ನು ಇಡಿ. ಬಸವಣ್ಣ, ಅಕ್ಕಮಹಾದೇವಿಯಂಥವರು ಯಾರಿಗೂ ಸಂಬಂಧವಿಲ್ಲದವರು. ಇನ್ನು ಸಹಕಾರದ ಬಗ್ಗೆ ಹೇಳುವುದಾದರೆ ಸಹಕಾರಿ ಸಂಸ್ಥೆಗಳು ಹಾಳಾಗಿ ಹೋಗುತ್ತವೆ. ಆ ಮಂತ್ರಿಗಳೇ ಇಂದು ಇಲ್ಲ, ನಿನ್ನೆ ಇದ್ದರು, ಈ ಬಜೆಟ್‌ನಲ್ಲಿ ಸಹಕಾರದ

ಬಗ್ಗೆ ಏನೇನೂ ಹೇಳಿಲ್ಲ, ಒಂದು ಪೈಸೆ ಹಣವೂ ಇಲ್ಲ. ಎಲ್ಲಾ ಸಹಕಾರಿ ಸಂಸ್ಥೆಗಳು ಹಾಳಾಗಿಹೋಗುತ್ತವೆ. ಅವುಗಳನ್ನು ಡಿಸಾಲ್ವ್ ಮಾಡುತ್ತಾರೋ ಏನೋ ಗೊತ್ತಿಲ್ಲ. ಇವರು ಡಿಸಾಲ್ವ್ ಮಾಡದಿದ್ದರೆ ಅಲ್ಲಿ ಮಾರ್ಚ್‌ನೊಳಗೆ ಚುನಾವಣೆಯನ್ನು ಕಂಪಲ್‌ಸರಿಯಾಗಿ ನಡೆಸಬೇಕೆಂದು ಮಾಡಿದ್ದೇವೆ, ಅಲ್ಲಿ ಚುನಾವಣೆಗಳು ನಡೆಯುತ್ತವೆ, ಆ ಚುನಾವಣೆಗಳನ್ನು ಮುಂದೆ ಹಾಕುವುದಿದ್ದರೆ ಈಗಲೇ ಹಾಕಿ. ಅವರೆಲ್ಲಾ ನೋಟೀಸ್ ತಂದು ಕೋಟಿಗಟ್ಟಲೆ ಹಣ ಖರ್ಚಾದಮೇಲೆ ನಾಲ್ಕು ದಿವಸ ಇದ್ದಾಗ ಚುನಾವಣೆಯನ್ನು ಮುಂದಕ್ಕೆ ಹಾಕುತ್ತೀರಿ. ಚುನಾವಣೆಯನ್ನು ಮುಂದಕ್ಕೆ ಹಾಕದಿದ್ದರೆ ಅವರು ನೋಟೀಸ್ ತೆಗೆದು ಕೋಟಿಗಟ್ಟಲೆ ಹಣವನ್ನು ಖರ್ಚುಮಾಡುತ್ತಾರೆ. ಮೊದಲೇ ಆ ಸೊಸೈಟಿಗಳಲ್ಲಿ ದುಡ್ಡು ಇಲ್ಲ. ಒಂದೊಂದು ಸೊಸೈಟಿಗಳಲ್ಲಿ ಒಂದು ಲಕ್ಷ ಎರಡು ಲಕ್ಷ ಕೇವಲ ಪೋಸ್ಟ್‌ಗೆ ಹೋಗುತ್ತದೆ. ದೊಡ್ಡ ದೊಡ್ಡ ಸೊಸೈಟಿಗಳಲ್ಲಿ ಲಕ್ಷಗಟ್ಟಲೆ ಹಣ ಕೇವಲ ಪೋಸ್ಟ್‌ಗೆ ಹಾಗೂ ಪ್ರಿಂಟ್‌ಗೇ ಹೋಗುತ್ತದೆ. ಚುನಾವಣೆ ನಾಲ್ಕು ದಿವಸ ಇದ್ದಾಗ ಎಲ್ಲರೂ ಕೂಡಿಕೊಂಡು ಬೇಡ ಚುನಾವಣೆಯನ್ನು ಮುಂದೆ ಹಾಕೋಣವೆಂದು ಮುಂದಕ್ಕೆ ಹಾಕಿಬಿಡುತ್ತಾರೆ. ಆದ್ದರಿಂದ ಆ ಚುನಾವಣೆಗಳನ್ನು ಮುಂದಕ್ಕೆ ಹಾಕುವುದಿದ್ದರೆ ಇವತ್ತೇ ಹಾಕಿ, ಇಲ್ಲದಿದ್ದರೆ ಹಾಕಬೇಡಿ. ಅವುಗಳೇನು ಲೋಕಸಭೆ, ರಾಜ್ಯಸಭೆಗಳ ಚುನಾವಣೆಯ ಜೊತೆ ಬರುವವಲ್ಲ, ಅದ್ದರಿಂದ ಅದರ ಚುನಾವಣೆ ನಡೆಯಲಿ. ಅದನ್ನು ಮುಂದಕ್ಕೆ ಹಾಕಬೇಡಿ. ಹಾಕುವುದಿದ್ದರೆ ತಕ್ಷಣವೇ ಹಾಕಿ. ಇಲ್ಲದಿದ್ದರೆ ಅವುಗಳು ಮತ್ತಷ್ಟು ಹಾಳಾಗುತ್ತದೆ. ಇದು ನನ್ನ ವಾದ. ಸಹಕಾರದ ಬಗ್ಗೆ ನಾನು ಹೋದ ಬಜೆಟ್‌ನಲ್ಲೇ ಹೇಳಿದ್ದೆ, ಏನಾದರೂ ಮಾಡಿ ನೂರಾರು ಕೋಟಿ ರೂ.ಗಳನ್ನು ತೆಗೆಯಿರಿ clearence the Balance sheet ಇಲ್ಲಿ ನಮ್ಮ ಲ್ಯಾಂಡ್‌ಬ್ಯಾಂಕ್‌ನ ಅಧ್ಯಕ್ಷರು ಕುಳಿತಿದ್ದಾರೆ. ಅವರು ಸುಮ್ಮನೆ ಅಧ್ಯಕ್ಷರು. ಅವರ ಕಾರಿಗೆ ಡೀಸೆಲ್ ಹಾಕಲು ಹಣವಿಲ್ಲ. ಪರಿಸ್ಥಿತಿ ಹಾಗಾಗಿದೆ. ಅದು ಉಳಿಯಬೇಕೆಂದರೆ ಸರ್ಕಾರ ಕೈಹಾಕಬೇಕಾಗುತ್ತದೆ. ಕೇಂದ್ರದವರು Clearence the Balance sheet ಅಂದರೆ ಬ್ಯಾಲೆನ್ಸ್ ಶೀಟ್ಸ್ ಸ್ವಚ್ಛ ಮಾಡುವ ದಿಸೆಯಿಂದ ಕೇಂದ್ರದಲ್ಲಿ ಅವಕಾಶ ಮಾಡಿದ್ದಾರೆ. ಇವರು ಒಂದು ನೂರು ಕೋಟಿ ರೂ.ಗಳನ್ನು ಪ್ರಾವಿಜನ್ ಮಾಡಿ ಎಂದು ನಾನು ಹೇಳಿದ್ದೆ. ಕೊನೆಗೆ ಏನೂ ಬರುವುದಿಲ್ಲ. ಆದರೆ ಅದನ್ನು ಹೊಂದಿದರೆ ಅಪೆಕ್ಸ್ ಬ್ಯಾಂಕ್, ಲ್ಯಾಂಡ್‌ಬ್ಯಾಂಕ್ ಮತ್ತು ಎಲ್ಲಾ ಸೊಸೈಟಿಗಳೂ ಉಳಿಯುತ್ತವೆ. ಅದನ್ನು ಮಾಡಲಿಲ್ಲ. ಇವರ ಆದ್ಯತೆ ಯಾವುದು ? ಸಹಕಾರಿ ಸಂಸ್ಥೆಗಳು ಹಾಳಾಗಿಹೋದರೆ ರೈತ ಹಾಳಾಗಿ ಹೋಗುತ್ತಾನೆ. ಮುಳುಗಿ ಹೋಗುತ್ತಾನೆ, ರಾಜ್ಯ ಮುಳುಗಿ ಹೋಗುತ್ತದೆ. ದೇಶ ಮುಳುಗಿ ಹೋಗುತ್ತದೆ. ಸಹಕಾರಿ ಸಂಸ್ಥೆ ಉಳಿದರೆ ಮಾತ್ರ ರೈತ ಉಳಿಯುತ್ತಾನೆ. ಇವತ್ತು ರೈತರಿಗಾಗಿ ಕಟ್ಟಿದಂಥ ಸಂಸ್ಥೆಗಳು ಇವತ್ತು ಹಾಳಾಗಿಹೋಗುತ್ತಿವೆ. ಸಕ್ಕರೆ ಕಾರ್ಖಾನೆಗಳನ್ನು ನೋಡಿದರೆ. ಇವತ್ತು ಯಾವ ಸಕ್ಕರೆ ಕಾರ್ಖಾನೆಗಳೂ ಉಳಿದಿಲ್ಲ. ಅವೆಲ್ಲಾ ನಾಶವಾಗಿ ಹೋಗುತ್ತಿವೆ. ಕೋ-ಆಪರೇಟೀವ್ ಟೆಕ್ಸ್‌ಟೈಲ್ಸ್ ಮಿಲ್ ಇಲ್ಲ. ಆಯಿಲ್ ಇಂಡಸ್ಟ್ರೀಸ್ ಇಲ್ಲ. ಎಲ್ಲಾ ಹೋದರೆ ಮುಂದೆ ಗತಿ ಏನು ? ಅದರ ಬಗ್ಗೆ ನಿಮ್ಮ ಈ ಬಜೆಟ್‌ನಲ್ಲಿ ಏನೂ ಹೇಳಲಿಲ್ಲ. ಅದರ ಬಗ್ಗೆ ನಿಮಗೆ ಕಾಳಜಿ ಇಲ್ಲ ರೈತರಿಗೆ ಇವತ್ತಿನವರೆಗೆ ಸಕ್ಕರೆಯ ಹಣವನ್ನು ಕೊಟ್ಟಿಲ್ಲ, ಅವರ ಗತಿಯೇನು ಎಂಬ ಬಗ್ಗೆ ನೀವು ಇಲ್ಲಿ ಹೇಳಲಿಲ್ಲ. ಬರೇ 600 ಕೋಟಿ ರೂಪಾಯಿಗಳ ಬಗ್ಗೆ ಹೇಳಿ ಏನೋ ಒಂದು ದೊಡ್ಡಸ್ತನ ಮಾಡಲು ಹೊರಟಿದ್ದೀರಿ. ಆದರೆ ಸಹಕಾರದ ಬಗ್ಗೆ ತಾವು ಏನನ್ನೂ ಹೇಳಿಲ್ಲ. ಆದ್ದರಿಂದ ಅವನ್ನೆಲ್ಲಾ ಉಳಿಸಿಕೊಳ್ಳಬೇಕಾದರೆ ಮೊದಲನೆಯದಾಗಿ ತಾವೇನು ನಾಳೆ ಇದನ್ನು ಪುನರ್ವಿಮರ್ಶೆ ಮಾಡಿ ಎಂದು ಹೇಳುತ್ತೀರಲ್ಲಾ, ಆಗ ಸುಮಾರು 100 ಕೋಟಿ

ರೂ.ಗಳನ್ನಾದರೂ clearence the Balance sheet ತೆಗೆದು ಇಟ್ಟರೆ ನಿಜವಾಗಿ ಅಪೆಕ್ಸ್ ಬ್ಯಾಂಕ್ ಉಳಿಯುತ್ತದೆ. ಅದರ ಮೂಲಕ ಆ ಸಂಸ್ಥೆಗಳು ಉಳಿಯುತ್ತವೆ. ಲ್ಯಾಂಡ್ ಬ್ಯಾಂಕ್ ಉಳಿಯುತ್ತದೆ. ಸಕ್ಕರೆ ಕಾರ್ಖಾನೆಗಳು ಉಳಿಯುತ್ತವೆ. ಇವೆಲ್ಲಾ ರೈತರಿಗೆ ಅನುಕೂಲವಾಗತಕ್ಕದ್ದು. ಸಕ್ಕರೆ ಕಾರ್ಖಾನೆಗಳಿಂದ ನೂರು. ಇನ್ನೂರು ಕೋಟಿ ಟ್ಯಾಕ್ಸ್ ಸರ್ಕಾರಕ್ಕೆ ಬರುತ್ತದೆ. ಹೊಸ ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸುವ ಸಲುವಾಗಿ ಒಂದು ಸಮಿತಿಯನ್ನು ರಚನೆ ಅದಕ್ಕೆ ತಾವು ಅಧ್ಯಕ್ಷರಾಗಿರಬಹುದು ಕಾಣುತ್ತದೆ, ಸಕ್ಕರೆ ಕಾರ್ಖಾನೆಗಳ ಸಲುವಾಗಿ ತಮ್ಮ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನೇನೋ ಮಾಡಿದ್ದೀರಿ, ಅದನ್ನು ಇವತ್ತು ಉಳಿಸಿಕೊಳ್ಳದಿದ್ದರೆ ಸಕ್ಕರೆ ರೈತರಿಗೆ ಧಕ್ಕೆಯಾಗುತ್ತದೆ, ತಮಗೂ ಅದು ಗೊತ್ತಿದೆ, ತಾವೂ ಆ ಜಿಲ್ಲೆಯಿಂದ ಬಂದಂಥವರು. ಆ ಸಕ್ಕರೆ ಕಾರ್ಖಾನೆಗಳು ಹಾಳಾಗಿಹೋದರೆ, ಇವತ್ತು ಒಂದೊಂದು ಕಾರ್ಖಾನೆಯನ್ನು ಕಟ್ಟಲು 50 ರಿಂದ 60 ಕೋಟಿ ರೂ.ಗಳು ಬೇಕಾಗುತ್ತದೆ. ಅಷ್ಟು ಹಣವನ್ನು ಎಲ್ಲಿಂದ ತರುತ್ತೀರಾ ? ತಾವು ಹೊಸ ಕಾರ್ಖಾನೆಗಳನ್ನು ಕಟ್ಟಲು ಹೊರಟಿದ್ದೀರಿ. ಅದಕ್ಕೆ ಈಗಾಗಲೇ ಸರ್ಕಾರದಿಂದ 14--15 ಕೋಟಿ ರೂ.ಗಳ ಬಂಡವಾಳವನ್ನು ಹಾಕಿದ್ದೀರಿ, ಅದಕ್ಕೆ ಸಾಲ ಸಿಗದಿದ್ದರೆ ಎನ್‌ಸಿಡಿಸಿ ಜೊತೆ ಮಾತನಾಡಿ, ಇವರೇನಾದರೂ ಸಾಲ ಕೊಡದಿದ್ದರೆ ಬಹಳ ಕಷ್ಟವಾಗುತ್ತದೆ. ಏಕೆಂದರೆ ಉಳಿದ ಬ್ಯಾಂಕ್‌ನವರು ಟರ್ಮ್ ಲೋನನ್ನು ಕೊಡುವ ಸ್ಥಿತಿಯಲ್ಲಿ ಇಲ್ಲ ಟರ್ಮ್ ಲೋನನ್ನು ಕೊಡಬೇಕೆಂದರೆ ಇವತ್ತು ಎನ್‌ಡಿಸಿಯನ್ನು ಹಿಡಿಯ ಬೇಕಾಗುತ್ತದೆ. ಅದನ್ನು ಮಾಡಿದರೆ ಮಾತ್ರ ಅನುಕೂಲವಾಗುತ್ತದೆ. ಆ ಬಗ್ಗೆ ಕೂಡ ಇವರು ಕ್ರಮ ಕೈಗೊಳ್ಳಬೇಕು.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಅಧ್ಯಕ್ಷರೇ, ಸಕ್ಕರೆ ಕಾರ್ಖಾನೆಗಳ ಬಗ್ಗೆ ಅವರು ಮಾತನಾಡಿದರು. ಅನೇಕ ಕಾರ್ಖಾನೆಗಳಿಗೆ ಮೃದುಸಾಲ ಕೊಡುತ್ತೇವೆಂಬ ವಿಚಾರ ಕ್ಯಾಬಿನೆಟ್‌ವರೆಗೆ ಬಂತು. ಹಣ ಕೊಡುತ್ತೇವೆಂದು ಹೇಳಿ ಕೊಡಲೇ ಇಲ್ಲ. ಈ ಸಲ ಕೆಲವು ಕಾರ್ಖಾನೆಗಳು ಪ್ರಾರಂಭವೇ ಆಗುವುದಿಲ್ಲ. ನಮ್ಮ ಬ್ರಹ್ಮಾವರದ್ದೆಲ್ಲಾ ನಿಂತು ಹೋಗಿದೆ. ರೈತರು ಕಬ್ಬನ್ನು ಏನು ಮಾಡಬೇಕು ಎಂಬುದೇ ಗೊತ್ತಿಲ್ಲ. ಬೇರೆ ಬೇರೆ ಕಾರ್ಖಾನೆಗಳಿಗೆ ಕಬ್ಬನ್ನು ತೆಗೆದುಕೊಂಡು ಹೋದರೆ ಅದಕ್ಕೆ ಸರ್ಕಾರ ಟ್ರಾನ್ಸ್‌ಪೋರ್ಟ್‌ಷನ್ ಸಬ್ಸಿಡಿಯನ್ನಾದರೂ ಕೊಟ್ಟರೆ ರೈತರಿಗೆ ಸಹಾಯವಾಗುತ್ತದೆ. ಇಲ್ಲದಿದ್ದರೆ ರೈತರೇ ಟ್ರಾನ್ಸ್‌ಪೋರ್ಟ್ ಮಾಡಿಕೊಂಡು ಹೋದರೆ ಅವರಿಗೆ ನೂರು ರೂಪಾಯಿಯೂ ಸಿಗುವುದಿಲ್ಲ, ಅವರೇನು ಖರ್ಚು ಮಾಡಿದ್ದರೆ ಆ ಹಣವೂ ವಾಪಸ್ ಬರುವುದಿಲ್ಲ. ಆ ಪರಿಸ್ಥಿತಿ ಬಂದಿದೆ.

ಶ್ರೀ ಉಮೇಶ್ ವಿ. ಕತ್ತಿ : ಮಾನ್ಯ ಅಧ್ಯಕ್ಷರೇ. ಸಕ್ಕರೆ ಕಾರ್ಖಾನೆಗಳ ಪರಿಸ್ಥಿತಿ ರಾಜ್ಯದಲ್ಲಿ ಸಂಪೂರ್ಣವಾಗಿ ಹದಗೆಟ್ಟುಹೋಗಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆ ಆದರೆ ಅವರು ಸಹಾಯ ಮಾಡುವುದು ಪಾಂಡವಪುರ ಸಕ್ಕರೆ ಕಾರ್ಖಾನೆ ಒಂದನ್ನು ಬಿಟ್ಟರೆ ಬೇರೆ ಯಾವುದಕ್ಕೂ ಇಲ್ಲ. ಪಾಂಡವಪುರಕ್ಕೆ ವಿಶೇಷವಾದ ಹಣವನ್ನು ಕೊಟ್ಟರು. ಅದೇ ರೀತಿ ಬೆಳಗಾಂ ಇರಬಹುದು, ಖಾನಾಪುರ ರಾಯಭಾಗ್, ಬೀದರ್‌ನ ಮುಳುಖೇಡ್ ಇರಬಹುದು, ಅವುಗಳ್ಯಾವುದಕ್ಕೂ ಹಣದ ಸಹಾಯ ಮಾಡಲಿಲ್ಲ, ಇವತ್ತಿಗೂ ರೈತರ ಬಿಲ್ಲನ್ನು ಕೊಡದೆಯೇ ರೈತರು ಬೀದಿಪಾಲಾದ್ದಾರೆ. ಸರ್ಕಾರ ಸ್ವಲ್ಪ ಅದರ ಬಗ್ಗೆ ಕೂಡಲೇ ಗಮನಹರಿಸಿ ಆ ಹಣವನ್ನು ಕೊಡಿಸುವ ಕೆಲಸವನ್ನು ಮಾಡಬೇಕು. ಇವರು ಕೊಡುತ್ತಾರೋ, ಕಾರ್ಖಾನೆಯವರು ಕೊಡುತ್ತಾರೋ, ಪಾಂಡವಪುರ

ಕಾರ್ಖಾನೆಯನ್ನು ಮಾರಾಟ ಮಾಡಿ ಕೊಡಿಸುತ್ತಾರೋ, ಒಟ್ಟಿನಲ್ಲಿ ಯಾವುದಾದರೂ ಒಂದು ಕ್ರಮ ತೆಗೆದುಕೊಳ್ಳಬೇಕು. ಪಾಂಡವಪುರ ತಮ್ಮ ಜಿಲ್ಲೆಯಲ್ಲಿ ಬರುವುದರಿಂದ ಅದಕ್ಕೆ ಕೊಟ್ಟಿರಬಹುದು. ಅದಕ್ಕೆ ನಾವು ವಿರೋಧ ಮಾಡುವುದಿಲ್ಲ ಆದರೆ ನಮ್ಮ ಜಿಲ್ಲೆಯ ಸಕ್ಕರೆ ಕಾರ್ಖಾನೆಗಳಿಗೂ ಸಹಾಯ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಖರ್ಗೆಯವರು ಹೊರಕ್ಕೆ ಹೋಗಿಬಿಟ್ಟರೆಂದು ಕಾಣುತ್ತದೆ, ನಿನ್ನೆ ಅವರು ಎಲ್ಲರೂ ನಮ್ಮ ಬಜೆಟ್‌ನ್ನು ಹೊಗಳಿಬಿಟ್ಟಿದ್ದಾರೆಂದು ಹೇಳಿದರು. ಅದಕ್ಕೆ ಯಾವ್ಯಾವ ಪತ್ರಿಕೆಗಳಲ್ಲಿ ಏನೇನು ಬಂದಿದೆ ಎಂದು ಓದಿ ಎಂದು ಹೇಳಿದ್ದೆ. ಇವತ್ತು ಅದನ್ನು ತಂದಿದ್ದೇನೆ, ಅದನ್ನು ಓದುತ್ತೇನೆ. " ರಾಜ್ಯ ಮುಂಗಡ ಪತ್ರ ಉತ್ತರ ಕರ್ನಾಟಕಕ್ಕೆ ತೀವ್ರ ನಿರಾಸೆ ಉತ್ತರ ಕರ್ನಾಟಕದ ಬಗ್ಗೆ ಡಾ॥ ನಂಜುಂಡಪ್ಪನವರ ವರದಿಯನ್ನು ಜಾರಿಗೆ ತರುತ್ತಾರೆಂದು ನಾವೇನು ತಿಳಿದುಕೊಂಡಿದ್ದೆವು, ಆದರೆ ಅವರು ಸುಮ್ಮನೆ ಹೇಳಿದಂತೆ ಮಾಡಿ ಇದ್ದದನ್ನು ರದ್ದು ಮಾಡಿದರು. ಅದರಲ್ಲಿ ಹೈದ್ರಾಬಾದ್ ಕರ್ನಾಟಕದ್ದು ದೊಡ್ಡ ಪ್ರಮಾಣದಲ್ಲಿ ಇತ್ತು. ನಮ್ಮದೇನು ಬಯಲು ಸೀಮೆ ಏನಿತ್ತು ಅದನ್ನು ರದ್ದು ಮಾಡಲು ಬರುವುದಿಲ್ಲ. ಪಗಾರ ಪೂರ್ತಿಕೊಡುತ್ತಿದ್ದರು. ಆದರೆ ಉತ್ತರ ಕರ್ನಾಟಕ ಅಭಿವೃದ್ಧಿ ಮಂಡಳಿಯನ್ನು ಸ್ಥಾಪನೆ ಮಾಡಿದ್ದಾರೆ. ಅದಕ್ಕೆ ನಿಜವಾಗಿ ನಾವು ಹೇಳಬೇಕೆಂದರೆ ಡಾ॥ ನಂಜುಂಡಪ್ಪನವರ ವರದಿಯಲ್ಲಿ ಸುಮಾರು 15 ಸಾವಿರ ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಅವರು ಹೇಳಿದ್ದಾರೆ. ಆ ಹದಿನೈದು ಸಾವಿರ ಕೋಟಿ ರೂ.ಗಳ ಯೋಜನೆಯಲ್ಲಿ ಉತ್ತರ ಕರ್ನಾಟಕ ಅಭಿವೃದ್ಧಿ ಮಂಡಳಿಯೆಂದು ಮಾಡಿ ಅದಕ್ಕೆ ಐದು ಕೋಟಿ ರೂ.ಗಳನ್ನು ಕೊಟ್ಟಿದ್ದಾರೆ. ಐದು ಕೋಟಿ ರೂ.ಗಳು ಅಂದರೆ ಇನ್ನು ಎಷ್ಟು ಸಾವಿರ ವರ್ಷ ಬೇಕು ? ಕನಿಷ್ಠ ವರ್ಷಕ್ಕೆ ಎರಡು ಸಾವಿರ ಕೋಟಿ ರೂಪಾಯಿಗಳನ್ನಾದರೂ ಪ್ರಾವಿಷನ್ ಮಾಡಿ ಯಾವುದಾದರೂ ರೀತಿಯಿಂದ ಹಣ ಕೊಡತಕ್ಕ ವ್ಯವಸ್ಥೆ ಮಾಡಿದರೆ 8–10 ವರ್ಷಗಳಲ್ಲಿ ಅದು ಅಭಿವೃದ್ಧಿ ಆಗಬಹುದು.

11.50 ಪಿ.ಎಂ.

ಅದು ಯಾವುದೂ ಇಲ್ಲದೇ ಕೇವಲ 5 ಕೋಟಿ ರೂ.ಗಳನ್ನು ಮಾತ್ರ ಉತ್ತರ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಇಟ್ಟಿದ್ದೀರಿ. ಇದರ ಅರ್ಥ ಏನು ? ಇದು ನೀವು ಉತ್ತರ ಕರ್ನಾಟಕಕ್ಕೆ ಮಾಡಿದಂತಹ ಕಡು ಮೋಸವಾಗಿದೆ. ಈ ಮೊತ್ತ ಬಕಾಸುರನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಎಂಬಂತಾಗಿದೆ. 15 ಸಾವಿರ ಕೋಟಿ ರೂ.ಗಳು ಅಲ್ಲಿನ ಅಭಿವೃದ್ಧಿಗಾಗಿ ಬೇಕಿರುವಾಗ ನೀವು ಅದರಲ್ಲಿ ಕೇವಲ 5 ಕೋಟಿ ರೂ.ಗಳನ್ನು ಮಾತ್ರ ಅದಕ್ಕಾಗಿ ಇಟ್ಟಿದ್ದೀರಿ ಇದರಿಂದ ಏನೂ ಅಭಿವೃದ್ಧಿ ಮಾಡುವುದಕ್ಕಾಗುವುದಿಲ್ಲ. ಅದರ ಕಡೆಗೆ ತಾವು ಗಮನವನ್ನೇ ಕೊಟ್ಟಿಲ್ಲ ಹೈಕೋರ್ಟ್ ಪೀಠ ಸ್ಥಾಪನೆಗಾಗಿ ಕಳೆದ ವರ್ಷದ ಬಜೆಟ್‌ನಲ್ಲ 10 ಕೋಟಿ ರೂ.ಗಳನ್ನು ಇಡಲಾಗಿತ್ತು. ಆದರೆ ಮುಖ್ಯ ನ್ಯಾಯಾಧೀಶರು ಅದಕ್ಕಾಗಿ 150 ಕೋಟಿ ರೂ.ಗಳಾದರೂ ಬೇಕಾಗುತ್ತದೆ ಎಂದು ಹೇಳಿದ್ದಾರೆ. ಆ 150 ಕೋಟಿ ರೂ.ಗಳಲ್ಲಿ 100 ಕೋಟಿ ರೂ.ಗಳಿಗಾದರೂ ತಾವು ಬಜೆಟ್‌ನಲ್ಲಿ ಪ್ರಾವಿಷನ್ ಮಾಡಿದ್ದರೆ ತಮ್ಮ ಸರ್ಕಾರಕ್ಕೆ ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಸ್ಥಾಪಿಸುವ ಕಲ್ಪನೆ ಇದೆ. ಅದರ ಕಡೆಗೆ ಸರ್ಕಾರದ ಅಭಿಲಾಷೆ ಇದೆ ಎನ್ನುವ ಮಾತನ್ನು ನಾವು ಒಪ್ಪಿಕೊಳ್ಳಬಹುದಾಗಿತ್ತು. ಆದರೆ ಆ ರೀತಿ ಏನೂ ಆಗಿಲ್ಲ. ಹಿಂದಿನ ವರ್ಷ ಇಟ್ಟಿದ್ದ 10 ಕೋಟಿ ರೂ.ಗಳನ್ನು ತೆಗೆದಿದ್ದೀರಿ. ಈ ವರ್ಷದ ಬಜೆಟ್‌ನಲ್ಲಿ ಅದಕ್ಕಾಗಿ ಏನನ್ನೂ ತೋರಿಸಿಲ್ಲ. ಹೀಗಾದರೆ ಅಲ್ಲಿ ಹೈಕೋರ್ಟ್ ಪೀಠ ಸ್ಥಾಪಿಸಲು ಮುಖ್ಯ ನ್ಯಾಯಾಧೀಶರಾದರೂ

ಹೇಗೆ ಒಪ್ಪುತ್ತಾರೆ ? ನೀವು ಬಜೆಟ್‌ನಲ್ಲಿ ಹಣಕ್ಕಾಗಿ ಪ್ರಾವಿಷನ್ ಮಾಡಿಕೊಂಡಿಲ್ಲ, ಆದ್ದರಿಂದ ನಾವು ಇದಕ್ಕೆ ಒಪ್ಪುವುದಿಲ್ಲ ಎಂದು ಅವರು ಹೇಳುತ್ತಾರೆ. ಹೈಕೋರ್ಟ್ ಪೀಠ ಸ್ಥಾಪನೆ ಮಾಡುವುದಕ್ಕೆ ನಿಮಗೆ ಆಸಕ್ತಿ ಇಲ್ಲ. ಇದು ಇವತ್ತಿನ ದಿವಸ ಈ ಸರ್ಕಾರ ನಮಗೆ ಮಾಡತಕ್ಕಂತಹ ಅನ್ಯಾಯವಾಗಿದೆ. ಇನ್ನು ಅಕ್ಷರ ದಾಸೋಹ ಬಗ್ಗೆ ಹೇಳುವುದಾದರೆ, ಮೊದಲನೇ ಸಾಲಿನಲ್ಲಿ ಯಾರು ಮಂತ್ರಿಗಳೇ ಇಲ್ಲ. ನಮ್ಮ ಕಡೆಯೂ ಬಹಳಷ್ಟು ಸೀಟುಗಳು ಖಾಲಿ ಇವೆ. ಆದ್ದರಿಂದ ಆ ಬಗ್ಗೆ ನಾನು ಏನೂ ಹೇಳುವುದಕ್ಕಾಗುವುದಿಲ್ಲ. ಮಾನ್ಯ ಅಧ್ಯಕ್ಷರೇ, ನಮ್ಮ ಪರಿಸ್ಥಿತಿ ಹೇಗಾಗಿದೆ ಎಂಬುದನ್ನು ನೀವೇ ನೋಡಿ. ಯಾರು ಇಲ್ಲದೇ ಕೇವಲ ಇಬ್ಬರಿದ್ದರೂ ಸಾಕು. ನಾವು ಮಾತನಾಡಿ ಹೋಗಿ ಬಿಡೋಣ ಎನ್ನುವಂತಹ ಪರಿಸ್ಥಿತಿಗೆ ಇಂದು ನಾವು ಬಂದಿದ್ದೇವೆ. ನಾವು ಈ ಕಡೆಗೂ ಹೇಳುವಂತಿಲ್ಲ, ಆ ಕಡೆಗೂ ಹೇಳುವಂತಿಲ್ಲ. ನಮ್ಮ ಪರಿಸ್ಥಿತಿ ಇವತ್ತು ಹೀಗಾಗಿದೆ. ಈ ಅಧಿವೇಶನದ್ದು ಎಂತಹ ಪರಿಸ್ಥಿತಿ ಆಗಿದೆ ನೋಡಿ !

ಶ್ರೀ ಎ.ಕೃಷ್ಣಪ್ಪ : ತಾವು ಹೇಳಿದ್ದನ್ನು ನಾನು ಇಲ್ಲಿ ಬರೆದುಕೊಳ್ಳುತ್ತಿದ್ದೇನೆ.

ಶ್ರೀ ಎಸ್.ಎಸ್.ಪಾಟೀಲ್ :ಓಹೋ ! ಹಾಗಾದರೆ ನೀವೊಬ್ಬರು ಇದ್ದರೆ ಸಾಕು ಬಿಡಿ. ಎಲ್ಲಾ ಮಂತ್ರಿಗಳನ್ನೂ ತೆಗೆದು ಬಿಡಿ. ಮಾನ್ಯ ಮುಖ್ಯಮಂತ್ರಿಗಳು ದೆಹಲಿಯಲ್ಲಿರಲಿ, ನೀವು ಇಲ್ಲಿ ಬರೆದುಕೊಳ್ಳುತ್ತಾ ಕುಳಿತುಕೊಳ್ಳಿ. ಆ ರೀತಿ ಮಾಡುವುದರಿಂದ ಬಡ ಬೋರೇಗೌಡನ ದುಡ್ಡಾದರೂ ಸರ್ಕಾರಕ್ಕೆ ಉಳಿಯುತ್ತದೆ.

ಮಾನ್ಯ ಅಧ್ಯಕ್ಷರೇ, ಅಕ್ಷರ ದಾಸೋಹದ ಬಗ್ಗೆ ಈ ಸರ್ಕಾರ ಬಹಳ ದೊಡ್ಡ ಪ್ರಚಾರವನ್ನು ಮಾಡುತ್ತಿದೆ. ಅನ್ನವನು ಇಕ್ಕುವುದು, ನನ್ನಿಯನು ನುಡಿಯುವುದು............" ಎಂದು ಸರ್ವಜ್ಞನ ವಚನವನ್ನು ಬಜೆಟ್ ಭಾಷಣದಲ್ಲಿ ಹೇಳಲಾಗಿದೆ. ಸರ್ವಜ್ಞ ಕೇವಲ ಸರ್ಕಾರಿ ಶಾಲೆಗಳ ಮಕ್ಕಳಿಗೆ ಮಾತ್ರ ಅನ್ನ ನೀಡಿ ಎಂದು ಹೇಳಿದ್ದಾನೆಯೇ ? ಖಾಸಗಿ ಮತ್ತು ಅನುದಾನಿತ ಶಾಲೆಗಳಲ್ಲಿ ಕಲಿಯುತ್ತಿರುವವರು ಮಕ್ಕಳಲ್ಲವೇ ? ಅದರಲ್ಲೂ ಉತ್ತರ ಕರ್ನಾಟಕದಲ್ಲಿ ಶೇಕಡ 80ರಷ್ಟು ಖಾಸಗಿ ಶಾಲೆಗಳೇ ಇವೆ. ಇದು ಉತ್ತರ ಕರ್ನಾಟಕಕ್ಕೆ ನೀವು ಮಾಡತಕ್ಕಂಥ ಮೋಸವಾಗಿದೆ.

ಶ್ರೀ ಎ. ಕೃಷ್ಣಪ್ಪ : ನೀವು ಹೇಳುವುದು ಹೇಗಿದೆ ಎಂದರೆ, ಏನನ್ನೂ ಮಾಡದಿರುವಾಗ ಏನೋ ಮಾಡಲು ಹೊರಟಿರುವುದನ್ನೂ ಕೂಡ ನೀವು ಟೀಕೆ ಮಾಡಲಿಕ್ಕೆ ಹೊರಟಿದ್ದೀರಲ್ಲಾ ? ಯಾವುದೇ ದೇಶದಲ್ಲಿ ಅಥವಾ ಪ್ರಪಂಚದಲ್ಲಿ ಯಾವುದೇ ಸರ್ಕಾರಗಳು ಸರ್ಕಾರಿ ಶಾಲೆಗಳನ್ನು ಬಿಟ್ಟು ಖಾಸಗಿ ಶಾಲೆಗಳಿಗೆ ಕೊಡುವುದನ್ನು ಮಾಡುತ್ತಿದ್ದಾರಾ ?

ಶ್ರೀ ಎಸ್.ಎಸ್. ಪಾಟೀಲ್ : ಹಾಗಾದರೆ ನೀವು ಇಲ್ಲಿ ಸರ್ವಜ್ಞನ ವಚನವನ್ನೇಕೆ ಹೇಳುತ್ತಿದ್ದೀರಿ ?

ಶ್ರೀ ಎ.ಕೃಷ್ಣಪ್ಪ : ಜವಾಬ್ದಾರಿ ಹಾಗೆಯೇ ಇರುವುದು. ಸರ್ಕಾರಿ ಮಕ್ಕಳಿಗೆ ಮಾತ್ರ ಆದ್ಯತೆ ಕೊಡುತ್ತಿದ್ದೇವೆ.

ಶ್ರೀ ಎಸ್.ಎಸ್. ಪಾಟೀಲ್ : ಅನ್ನವನ್ನು ನೀಡುವುದಾದರೆ ಎಲ್ಲರಿಗೂ ನೀಡು ಎಂದು ಸರ್ವಜ್ಞ ಹೇಳುತ್ತಾನೆ.

ಶ್ರೀ ಎ.ಕೃಷ್ಣಪ್ಪ : ಊರಿನಲ್ಲಿರುವ ಎಲ್ಲಾ ಶಾಲೆಗಳಿಗೂ ಊಟ ನೀಡಲು ಸರ್ಕಾರ ಪಾಲಿಸಿ ಮಾಡಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ : " ಅನ್ನವನು ಇಕ್ಕುವುದು ...." ಎಂದರೆ ಎಲ್ಲರಿಗೂ ಎಂದು ಅರ್ಥ. ಎಲ್ಲಿ ಬಡವರು ಮತ್ತು ನಿರ್ಗತಿಕರ ಮಕ್ಕಳು ಇದ್ದಾರೋ ಅವರೆಲ್ಲರಿಗೂ ಅನ್ನ ನೀಡಿ ಎಂದು ಸರ್ವಜ್ಞ ಹೇಳಿದ್ದಾನೆ.

ಶ್ರೀ ಎ.ಕೃಷ್ಣಪ್ಪ : ಮಾನ್ಯ ಪಾಟೀಲರೇ, ಅವರು ಆ ಸೌಕರ್ಯವನ್ನು ಅನುಭವಿಸಬೇಕಾಗಿದ್ದರೆ, ಅವರೆಲ್ಲಾ ಸರ್ಕಾರಿ ಶಾಲೆಗಳಿಗೆ ಬರಲಿ ಎನ್ನುವ ಉದ್ದೇಶದಿಂದ ನಾವು ಈ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದ್ದೇವೆ.

ಶ್ರೀ ಎಸ್.ಎಸ್.ಪಾಟೀಲ್ : ನೀವು ಸಮಾಜ ಕಲ್ಯಾಣ ಇಲಾಖೆ ಸಚಿವರಲ್ಲವೇ ? ನಿಮ್ಮ ಇಲಾಖೆ ಬಗ್ಗೆಯೂ ಈಗ ನಾನು ಹೇಳುವವನಿದ್ದೇನೆ.

ಶ್ರೀ ಎ.ಕೃಷ್ಣಪ್ಪ : ಬೇಕಾದರೆ ಮಾನ್ಯ ಸ್ಪೀಕರ್‌ರವರಿಂದ ನಿಮಗೆ ಒಂದು ಗಂಟೆ ಎಕ್ಸ್‌ಟ್ರಾ ಕೊಡಿಸುತ್ತೇವೆ, ನೀವು ಸಮಾಜ ಕಲ್ಯಾಣ ಇಲಾಖೆಯೇ ಬಗ್ಗೆಯೇ ಮಾತನಾಡಿ.

ಶ್ರೀ ಅಧ್ಯಕ್ಷರು : ದಯವಿಟ್ಟು ತಮ್ಮ ತಮ್ಮಲ್ಲಿ ಸಂಭಾಷಣೆ ಮಾಡಬೇಡಿ. ಮಾನ್ಯ ಪಾಟೀಲರೇ, ನಿಮಗೆ ಮಾತನಾಡಲು ಇನ್ನು ಕೇವಲ ಐದು ನಿಮಿಷಗಳು ಮಾತ್ರ ಇದೆ.

ಶ್ರೀ ಎಸ್.ಎಸ್. ಪಾಟೀಲ್ :ಅವರು ಮಾತನಾಡಲು ಎದ್ದಿದ್ದರಿಂದ ನಾನೂ ಮಾತನಾಡಬೇಕಾಯಿತು. ಮಾನ್ಯ ಅಧ್ಯಕ್ಷರೇ, ಅವರಿಗೆ ಮಧ್ಯೆ ಏಳದಂತೆ ತಾವು ಹೇಳಿ.

ಅಧ್ಯಕ್ಷರು : ನೀವು ದಯವಿಟ್ಟು ಆಧ್ಯಕ್ಷರ ಕಡೆಗೆ ನೋಡಿಕೊಂಡು ಮಾತನಾಡಿ. ನೀವು ಆ ಕಡೆಗೆ ನೋಡಲೇ ಬೇಡಿ.

ಶ್ರೀ ಎಸ್.ಎಸ್.ಪಾಟೀಲ್ : ಮಂತ್ರಿಗಳು ಕೂಡ ಸ್ವಲ್ಪ ಹೇಳಬೇಕಾಗುತ್ತದೆ. ಸುಮ್ಮನೆ ನಾನೊಬ್ಬನೇ ಮಾತನಾಡಿಕೊಂಡು ಹೋದರೆ ಅದು ಸರಿಯಾಗುವುದಿಲ್ಲ. ಮಂತ್ರಿಗಳೂ ಕೂಡ ಸ್ವಲ್ಪ ಹೇಳಲಿ. ಈಗ ತಾನೇ ಮಾನ್ಯ ಖರ್ಗೆಯವರು ಹೇಳಿ, ಅನಿಸಿಕೊಂಡು, ಹೊರಗೆ ಹೋದರಲ್ಲಾ ! ಆ ರೀತಿಯಾಗಿ ಇವರದೂ ಆಗಬೇಕು. ಹೋದ ವರ್ಷದ ಬಜೆಟಿನಲ್ಲಿ 75 ಹೊಸ ಹಾಸ್ಟೆಲ್‌ಗಳನ್ನು ತೆರೆಯುತ್ತೇವೆ ಎಂದು ನೀವು ಹೇಳಿದ್ದಿರಿ. ಅದು ಇನ್ನೂ ಪ್ರಗತಿಯಲ್ಲಿದೆ ಎಂದು ಹೇಳುತ್ತಿದ್ದೀರಿ. ಹಿಂದೆ ಮಾನ್ಯ ಕೃಷ್ಣಪ್ಪನವರು ಪಶು ಸಂಗೋಪನೆ ಸಚಿವರಾಗಿದ್ದೀರಿ. ತಾವು ತಮ್ಮ ಕಾಲದಲ್ಲಿ ಒಂದಾದರೂ ಹೊಸ ದವಾಖಾನೆ ತೆರೆದ್ದೀರಾ ?

ಅಧ್ಯಕ್ಷರು : ಮಾನ್ಯ ಪಾಟೀಲರೇ, ತಾವು ದಯವಿಟ್ಟು ಕನ್‌ಕ್ಲೂಡ್ ಮಾಡಿ. ನಿಮಗೆ ಇನ್ನು ಕೇವಲ ಐದು ನಿಮಿಷ ಕಾಲಾವಕಾಶ ಮಾತ್ರ ಇದೆ.

ಶ್ರೀ ಎಸ್.ಎಸ್.ಪಾಟೀಲ್ : ಮಾನ್ಯ ಅಧ್ಯಕ್ಷರೇ, ನಾನು ಅಕ್ಷರ ದಾಸೋಹದ ಬಗ್ಗೆ ಹೇಳುವುದನ್ನು ಮುಂದುವರೆಸುತ್ತೇನೆ. ನಾನು ಮೊನ್ನೆ ತಾನೇ ಪ್ರಗತಿ ಪರಿಶೀಲನೆ ಸಭೆಯ ಕೆಲವೊಂದು ಹಳ್ಳಿಗಳಿಗೆ ಹೋಗಿದ್ದೆ. ಅಲ್ಲೊಬ್ಬರು ರಿಟೈರ್ಡ್ ಕನ್ನಡ ಶಾಲೆ ಮೇಷ್ಟ್ರು ಇದ್ದರು. ಅವರು ಬಹಳ ಒಳ್ಳೆಯವರು. ಅವರೂ ಕೂಡ ಕಾಂಗ್ರೆಸ್ಸಿನವರೇ, ಅವರು ನನಗೊಂದು ಮಾತು ಹೇಳಿದರು, 'ಗೌಡ್ರೇ, ದಯಮಾಡಿ ಏನಾದರೂ ಮಾಡಿ ಈ 'ಅಕ್ಷರ ದಾಸೋಹ" ಬಂದ್ ಮಾಡಿಸಿ, ಅವರಿಗೆ ಏನಾದರೂ ಕೊಡುವುದಿದ್ದರೆ 20 ಕಿಲೋ ಅಕ್ಕಿ ಅವರ ಮನೆಗೆ ಕೊಡಿಸುವಂತೆ ಮಾಡಿ, ಶಾಲೆಗಳಲ್ಲಿ ಮಾಸ್ತರುಗಳ್ಯಾರೂ ಕಲಿಸುವುದೇ ಇಲ್ರಿ, ಮಾಸ್ತರುಗಳಿಗೆ ಬರೀ ಇದೇ ಉದ್ಯೋಗವಾಗುತ್ತಿದೆ. ಶಾಲೆಗಳಲ್ಲಿ ಮಾಸ್ತರರುಗಳೇ ಇಲ್ಲ, ಇದ್ದರೂ ಈ ಕೆಲಸ ಮಾಡುತ್ತಾ ಕಲಿಸುವುದನ್ನು ಬಿಟ್ಟಿದ್ದಾರೆ

ಎಂದರು ಮೊನ್ನೆ ರೇವಣ್ಣ ಸಿದ್ದಯ್ಯನವರು ನಮ್ಮ ಕಡೆಗೆ ಬಂದಿದ್ದರೂ. ನೀವು ಇವತ್ತು ಲಕ್ಷಗಟ್ಟಲೆ ಮಕ್ಕಳ ಹಾಜರಾತಿ ಹೆಚ್ಚಾಗಿದೆ ಎಂದು ಅಂಕಿ ಅಂಶಗಳನ್ನು ಹೇಳುತ್ತಿದ್ದೀರಿ. ಮಾನ್ಯ ಅಧ್ಯಕ್ಷರೇ, ತಾವು ಬೇಕಾದರೆ ಒಂದು ಸದನದ ಸಮಿತಿಯನ್ನು ಮಾಡಿ ಕಳುಹಿಸಿಕೊಡಿ, ಆ ಸಮಿತಿ ಎಲ್ಲಾ ಕಡೆ Surprise visit ಮಾಡಲಿ ಶಾಲೆಯೊಂದರಲ್ಲಿ ಒಟ್ಟು 500 ಮಕ್ಕಳು ಇದ್ದು ಊಟಕ್ಕೆ ಕೇವಲ 200 ಮಕ್ಕಳು ಮಾತ್ರ ಇದ್ದರೂ ಸಹ ಅವರು ಲೆಕ್ಕ ಬರೆಯುವಾಗ 500 ಮಕ್ಕಳು ಎಂದೇ ಲೆಕ್ಕ ಬರೆಯುತ್ತಾರೆ. ಆ 300 ಮಕ್ಕಳಲ್ಲೂ ಕೂಡ ಊಟ ಮಾಡಿ ಮನೆಗೆ ಹೋದವರು ಮರಳಿ ಶಾಲೆಗೆ ಬರುವುದಿಲ್ಲ. ಊಟದ ಸಮಯವಾದ ನಂತರ ಬೇಕಾದರೆ ನೀವು ಶಾಲೆಗಳಿಗೆ ಹೋಗಿ ನೋಡಿ. ನೀವು ಯಾವ ಶಾಲೆಗೆ ಬೇಕಾದರೂ ಹೋಗಿ ವಿಸಿಟ್ ಮಾಡಿ ನೋಡಿಕೊಂಡು ಬಂದು, ಅದರ ಅಂಕಿ ಅಂಶಗಳನ್ನು ನನಗೆ ಕೊಡಿ ಎಂದು ನಾನು ಮಾನ್ಯ ರೇವಣ್ಣ ಸಿದ್ದಯ್ಯನವರಿಗೇ ಹೇಳಿದೆ. ಆದರೆ ಅವರು ಸುಮ್ಮನೆ ಕುಳಿತುಕೊಂಡರು. ಸುಮ್ಮನೆ ತಪ್ಪು ಅಂಕಿ ಅಂಶಗಳನ್ನು ಇಲ್ಲಿಗೆ ಕಳುಹಿಸಲಾಗುತ್ತಿದೆ. ಈ ಅಕ್ಷರ ದಾಸೋಹದಿಂದ ಹಳ್ಳಿಯ ಮಕ್ಕಳಿಗೆ ಮತ್ತಷ್ಟು ವಂಚನೆಯಾಗುತ್ತಿದೆ. ಶಾಲೆಗಳಲ್ಲಿ ಕಲಿಸಲು ಮಾಸ್ತರುಗಳೇ ಇಲ್ಲ. ಅಡುಗೆ ಮಾಡುವುದಕ್ಕೆ ಅಡಿಗೆ ಮನೆಗಳೇ ಇಲ್ಲ. ಶಾಲೆಗಳಲ್ಲಿನ ಮಕ್ಕಳಿಗೆ ಏನಾದರೂ ಆದರೆ ಅಲ್ಲಿಯ ಶಿಕ್ಷಕರುಗಳನ್ನೇ ಸಸ್ಪೆಂಡ್ ಮಾಡುತ್ತೀರಿ. ಅವರಾದರೂ ಏನು ಮಾಡುತ್ತಾರೆ ? ಅಲ್ಲಿ ಕಲಿಸಲಿಕ್ಕೆ ಶಿಕ್ಷಕರುಗಳಿಲ್ಲ, ಅದರಲ್ಲೂ 3–4 ಮಂದಿಯನ್ನು ಅಡುಗೆ ಮಾಡಲಿಕ್ಕೆ ಹಚ್ಚುತ್ತಾರೆ, ಇದಲ್ಲದೆ ಹೈಸ್ಕೂಲ್ ಶಿಕ್ಷಕರುಗಳನ್ನು ಈ ಕಾರ್ಯಕ್ರಮದ ಸೂಪರ್‌ವಿಷನ್‌ಗಾಗಿ ನೇಮಿಸಲಾಗಿದೆ. ಇದರಿಂದಾಗಿ ಹೈಸ್ಕೂಲ್‌ನಲ್ಲೂ ಕೂಡ ಕಲಿಸುವವರೇ ಇಲ್ಲದಂತಾಗಿದೆ. ಇದು ಆಗಿರತಕ್ಕಂಥ ವ್ಯವಸ್ಥೆಯಾಗಿದೆ. ಅಕ್ಷರ ದಾಸೋಹದ ಬಗ್ಗೆ ನೀವು ಸುಮ್ಮನೆ ವರ್ಣನೆ ಮಾಡಿ ಹೇಳಿಕೊಳ್ಳಬೇಕಾಗಿಲ್ಲ. ಹಳ್ಳಿ ಮಕ್ಕಳಿಗೆ ನೀವು ಅನ್ಯಾಯ ಮಾಡುತ್ತಿದ್ದೀರಿ. ನಾನು ಈ ಮಾತನ್ನು ಮೊದಲಿನಿಂದಲೂ ಹೇಳುತ್ತಿದ್ದೇನೆ. ಇದನ್ನು ನೀವು ಪರಿಶೀಲನೆ ಮಾಡಿ. ಈ ಮಾತನ್ನು ಹಳ್ಳಿಗೆ ಹೋಗಿ ಹೇಳಿ ಎಂದು ಮಾನ್ಯ ಚಂದ್ರೇಗೌಡರು ನನಗೆ ಹೇಳಿದರು. ನಾನು ಈ ಮಾತನ್ನು ಹಳ್ಳಿಗಳಿಗೆ ಹೋಗಿಯೇ ಹೇಳುತ್ತೇನೆ. ಈ ಕಾರ್ಯಕ್ರಮದ ಬದಲಾಗಿ ಪ್ರತಿ ಮಕ್ಕಳ ಮನೆಗೆ 20 ಕೆ.ಜಿ. ಅಕ್ಕಿ ಕೊಡಿ, ಅದರಿಂದ ತಮ್ಮ ಮಕ್ಕಳಿಗೆ ಅವರು ಅನ್ನ ಮಾಡಿ ಉಣಿಸುತ್ತಾರೆ. ಇದನ್ನು ನೀವು ಎಲ್ಲಿಯವರೆಗೆ ನಡೆಸುತ್ತೀರಿ ಅಲ್ಲಿಯವರೆಗೆ ನೀವು ಕೇಂದ್ರದ ಮೇಲೆ ಅವಲಂಬಿತರಾಗಿರುತ್ತೀರಿ. ಅವರಿಗೂ ಈಗ ಓಟು ಬೇಕಾಗಿರುವುದರಿಂದ, ನಾವು ಎಲ್ಲಾ ಮಕ್ಕಳಿಗೂ ಆಗುವಂತೆ ಅಕ್ಕಿಯನ್ನು ಕೊಡುತ್ತೇವೆ ಎಂದು ಅವರು ಹೇಳಬಹುದು. ಈಗ ನೀವು ಇದನ್ನು 7ನೇ ತರಗತಿಯವರೆಗೂ ವಿಸ್ತರಿಸಲು ಹೊರಟಿದ್ದೀರಿ. ನೀವು ಮಾಡುವುದಾಗಿದ್ದರೆ, ಎಲ್ಲಾ ಶಾಲೆಗಳ, ಅದರಲ್ಲೂ ಖಾಸಗಿ ಮತ್ತು ಅನುದಾನಿತ ಶಾಲೆಗಳಲ್ಲಿ ಇರತಕ್ಕಂಥ ಮಕ್ಕಳಿಗೂ ಕೂಡ ಕೊಡತಕ್ಕಂಥ ವ್ಯವಸ್ಥೆ ಮಾಡಿ. ಆಗ ನೀವು ಸರ್ವಜ್ಞನ ವಚನವನ್ನು ಇಲ್ಲಿ ಉಲ್ಲೇಖ ಮಾಡಿದ್ದಕ್ಕೂ ಕೂಡ ಸಾರ್ಥಕವಾಗುತ್ತದೆ. " ಅನ್ನವನು ಇಕ್ಕುವುದು......" ಎಂದರೆ ಅಲ್ಲಿ ಕೇವಲ ಹುಡುಗರಿಗೆ ಮಾತ್ರ ನೀಡುವುದು ಎಂದು ಸರ್ವಜ್ಞ ಅಲ್ಲಿ ಹೇಳಿಲ್ಲ ದುಡಿಯುವ ಕೈಗಳಿಗೆ ಕೆಲಸ ಸಿಗುತ್ತಿಲ್ಲ. ಬರಗಾಲ ಪರಿಹಾರ ಕಾಮಗಾರಿಗಳು ಚಾಲೂ ಇಲ್ಲ. ಜನರು ಉಪವಾಸ ಬಿದ್ದಿದ್ದಾರೆ. ಅವರಿಗೆ ಕೆಲಸ ಕೊಡಿ. ಸರ್ವಜ್ಞನ ವಚನದಲ್ಲಿ ಹೇಳಿದ ಹಾಗೆ ಈ ರಾಜ್ಯದಲ್ಲಿ ಇರತಕ್ಕಂಥ ಸಾಮಾನ್ಯ ಮನುಷ್ಯನೂ ಕೂಡ ಅನ್ನ ಉಣ್ಣಬೇಕಾಗುತ್ತದೆ. ಆ ಕೆಲಸವನ್ನು ಈ ಸರ್ಕಾರದವರು ಮಾಡಿದರೆ ಮಾತ್ರ ನೀವು ಸರ್ವಜ್ಞನ ವಚನವನ್ನು ಇಲ್ಲಿ ಹೇಳುವುದಕ್ಕೆ ಅರ್ಹರಾಗುತ್ತೀರಿ. ಎಲ್ಲೋ ಒಂದಷ್ಟು ಸರ್ಕಾರಿ ಮಕ್ಕಳಿಗೆ ಅನ್ನ ನೀಡುವುದರಿಂದ ಏನೂ ಸಾಧಿಸಿದಂತಾಗುವುದಿಲ್ಲ. ಇಲ್ಲಿ

ಶ್ರೀಮಂತರ ಮಕ್ಕಳು ಯಾರೂ ಕೂಡ ಉಣ್ಣುವುದಿಲ್ಲ. ಬೇಕಾದರೆ ನೀವು ಅಲ್ಲಿಗೆ ಹೋಗಿ ನೋಡಿ. ಅವರು ಇವತ್ತಿಗೂ ಕೂಡ ಶಾಲೆಗೆ ಡಬ್ಬಿ ಕಟ್ಟಿಕೊಂಡು ಬರುತ್ತಾರೆ. ಶ್ರೀಮಂತರ ಮಕ್ಕಳಿಗೆ ಕೊಡಿ ಎಂದು ಯಾವ ದೇಶದಲ್ಲೂ, ಎಲ್ಲಿಯೂ ಹೇಳುವುದಿಲ್ಲ. ಬಡವರ ಮಕ್ಕಳಿಗೆ ಕೊಡಿ, ಬಡವರ ಮನೆಗೆ 10–20 ಕೆ.ಜಿ. ಅಕ್ಕಿ ಕಳುಹಿಸಿಕೊಡಿ. ಅವರ ತಾಯಿ ಅಡಿಗೆ ಮಾಡಿ ತನ್ನ ಮಕ್ಕಳಿಗೆ ಉಣಿಸುತ್ತಾಳೆ. ಅದನ್ನು ಬಿಟ್ಟು ಸುಮ್ಮನೆ ಎಲ್ಲರಿಗೂ ಕೊಡುತ್ತಾರೆ. ನನ್ನ ಮೊಮ್ಮಗನಿಗೂ ಕೂಡ ಕೊಡುತ್ತಾರೆ. ಅವನು ಅದನ್ನು ಉಣ್ಣುವುದೇ ಇಲ್ಲ. ಅವನಿಗೆ ಬುತ್ತಿ ಕಟ್ಟಿ ಡಬ್ಬಿ ಕೊಟ್ಟು ಕಳುಹಿಸಿರುತ್ತಾರೆ. ನಿಮ್ಮ ಮಕ್ಕಳು ಮತ್ತು ಮೊಮ್ಮಕ್ಕಳೂ ಸಹ ಉಣ್ಣುವುದಿಲ್ಲ. ಅವರುಗಳೂ ಸಹ ಡಬ್ಬಿ ತೆಗೆದುಕೊಂಡು ಹೋಗಿರುತ್ತಾರೆ. ಇದು ಆಗತಕ್ಕಂಥ ವ್ಯವಹಾರ. ಈ ಕಾರಣದಿಂದ ಈ ದಿವಸ ಇದು ಸರಿಯಾದಂಥಹ ಕ್ರಮವಲ್ಲವೆಂದು ಹೇಳುತ್ತೇನೆ. ಮಾನ್ಯ ಅಧ್ಯಕ್ಷರೇ, ಇನ್ನೂ ಇನ್‌ಶ್ಯೂರೆನ್ಸ್ ಬಗ್ಗೆ ಹೇಳುವುದಾದರೆ, ತಾವೂ ಕೂಡ ಇದರ ಬಗ್ಗೆ ಸ್ವಲ್ಪ ಕೇಳಬೇಕು. ಏಕೆಂದರೆ ತಮ್ಮ ತಾಲ್ಲೂಕಿಗೂ ಕೂಡ ಇದು ಬೇಕಾಗುತ್ತದೆ. ಎಲ್ಲಿ ಬರ ಪೀಡಿತ ತಾಲ್ಲೂಕುಗಳಿವೆಯೋ ಅಲ್ಲಿಗೆ ಇದು ಬೇಕಾಗಿದೆ. ಹಿಂದಿನ ಕೃಷಿ ಸಚಿವರಿಗೆ ಎಲ್ಲಾ ಪಂಚಾಯತ್‌ಗಳಲ್ಲೂ ಥ್ರೆಶೋಲ್ಡ್ ಯೀಲ್ಡ್ ಲೆಕ ಹಚ್ಚರಿ ಎಂದು ನಾನು ಹೇಳಿದ್ದೆ ಆ ರೀತಿ ಮಾಡುತ್ತೇವೆಂದು ಅಸೆಂಬ್ಲಿಯಲ್ಲಿ ಉತ್ತರ ಕೊಡಲಾಗಿತ್ತು. ಆದರೆ ಇವತ್ತಿನವರೆಗೂ ಥ್ರೆಶೋಲ್ಡ್ ಯೀಲ್ಡ್ ಎಷ್ಟು ಎಂದು ಯಾರಿಗೂ ಹೇಳಿಲ್ಲ. ಮೋಸ ಮಾಡುತ್ತಿದ್ದಾರೆ. ಮಾನ್ಯ ಅಧ್ಯಕ್ಷರೇ, ನಿಮಗೊಂದು ಉದಾಹರಣೆಯನ್ನು ಹೇಳುತ್ತೇನೆ. ಶೇಂಗಾ ಬೆಳೆಗೆ ಬೆಟಗೇರಿಯಲ್ಲಿ ಒಂದು ಹೆಕ್ಟೇರ್‌ಗೆ 269 ಕೆ.ಜಿ. ಥ್ರೆಶೋಲ್ಡ್ ಯೀಲ್ಡ್ ಎಂದು ನಿಗದಿಪಡಿಸಲಾಗಿದೆ. ಅಲ್ಲಿ 205 ಕೆ.ಜಿ. ಯೀಲ್ಡ್ ಬಂದಿದೆ. ಅಲ್ಲಿಗೆ ಕ್ರಾಪ್ ಇನ್‌ಶ್ಯೂರೆನ್ಸ್ ಹಣ ಕೊಡುತ್ತಾರೆ. ಅದರೆ ನಮ್ಮ ಮುಂಡರಗಿ ತಾಲ್ಲೂಕಿನ ಡಂಬಳದಲ್ಲಿ ಒಂದು ಹೆಕ್ಟೇರ್‌ಗೆ 90 ಕೆ.ಜಿ. ಯೀಲ್ಡ್ ಬಂದಿದೆ, ಆದರೆ ಅಲ್ಲಿ ಕ್ರಾಪ್ ಇನ್‌ಶ್ಯೂರೆನ್ಸ್ ಸಿಗುವುದಿಲ್ಲ. ಥ್ರೆಶೋಲ್ಡ್ ಯೀಲ್ಡ್ ಅಲ್ಲಿ 90 ಕೆ.ಜಿ. ಎಂದು ಇದೆ. ಇದು ಎಂತಹ ಅನ್ಯಾಯ ಎಂಬುದನ್ನು ನೀವೇ ನೋಡಿ. 200 ಕೆ.ಜಿ. ಗೂ ಮೇಲ್ಪಟ್ಟು ಉತ್ಪನ್ನ ಬಂದಿರುವಂತಹ ಕಡೆಗೆ ಇನ್‌ಶ್ಯೂರೆನ್ಸ್ ಸಿಗುತ್ತದೆ. ಆದರೆ 90 ಕೆ.ಜಿ. ಉತ್ಪನ್ನ ಬಂದಿರುವಂತಹ ಕಡೆ ಇನ್‌ಶೂರೆನ್ಸ್ ಸಿಗುವುದಿಲ್ಲ. ಇದು ನಿಮ್ಮ ಇನ್‌ಶ್ಯೂರೆನ್ಸ್ ಮಾನ್ಯ ಶೆಟ್ಟರ್‌ರವರೇ, ತಾವೂ ಕೂಡ ಇದರ ಬಗ್ಗೆ ಕೇಳಬೇಕು. ಇದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡಕ್ಕೂ ಸಂಬಂಧಪಟ್ಟಿದೆ.

ಶ್ರೀ ಜಗದೀಶ್ ಶೆಟ್ಟರ್ : ನಾನು ಆ ಬಗ್ಗೆ ಆಗಲೇ ಮಾತನಾಡಿದ್ದೇನೆ.

ಶ್ರೀ ಎಸ್.ಎಸ್.ಪಾಟೀಲ್ :ಸುಮ್ಮನೆ ಮಾತನಾಡಿ ಏನೂ ಪ್ರಯೋಜನ ಇಲ್ಲ, ಇದರಲ್ಲಿ ನಿಮ್ಮ ಪಾತ್ರವೂ ಕೂಡ ಇದೆ. ನೀವೇ ಇದನ್ನು ಸರಿ ಮಾಡಬೇಕು. ಬರೇ ಮಾತನಾಡುವುದರಿಂದ ಏನೂ ಆಗುವುದಿಲ್ಲ. ನೀವೂ ಮಾತನಾಡುತ್ತೀರಿ. ಅವರೂ ಮಾತನಾಡುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಪಾಟೀಲರೇ, ಕಂದಾಯ ಅಧಿಕಾರಿಗಳು ಮತ್ತು ಕೃಷಿ ಅಧಿಕಾರಿಗಳು ಕುಳಿತುಕೊಂಡು ಇದನ್ನೆಲ್ಲಾ ಮಾಡಬೇಕಾಗುತ್ತದೆ. ಅದನ್ನು ಇವರು ಸರಿಯಾಗಿ ಮಾಡುತ್ತಿಲ್ಲ. ಅದನ್ನೆ ನಾನು ಇಲ್ಲಿ ಹೇಳುತ್ತಿದ್ದೇನೆ. ಇದನ್ನೆಲ್ಲಾ ಕೇಂದ್ರ ಸರ್ಕಾರ ಬಂದು ಮಾಡುವುದಕ್ಕಾಗುತ್ತದೆಯೇ ? ಏನು ಮಾತನಾಡುತ್ತೀರಿ ನೀವು ?

ಶ್ರೀ ಎಸ್.ಎಸ್.ಪಾಟೀಲ್ : ಮಾನ್ಯ ವಿರೋಧ ಪಕ್ಷದ ನಾಯಕರೇ, ಇದು ಅಲ್ಲಿನ ಸರ್ಕಾರ ಮಾಡತಕ್ಕಂಥ ಪಾಲಿಸಿಯಾಗಿದೆ. ಅವರೇ ಅದನ್ನು ಮಾಡಬೇಕಾಗುತ್ತದೆ. ಯಾವ ರೀತಿಯಾಗಿ ಮಾಡಬೇಕು ? ಏನು ಮಾಡಬೇಕು ? ಹೇಗೆ ಮಾಡಬೇಕು ಎಂಬ ಬಗ್ಗೆ ಅವರೇ ನಿರ್ಣಯಗಳನ್ನು

ತೆಗೆದುಕೊಳ್ಳಬೇಕಾಗುತ್ತದೆ. ನಾವು ಇದರ ಬಗ್ಗೆ ಹತ್ತಾರು ಸಲ ಇಲ್ಲಿ ಹೇಳಿದ್ದೇವೆ. ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೂ ಕೂಡ representations ಕೊಟ್ಟಿದ್ದೇವೆ, Insurance Company ಯವರಿಗೂ ಕೂಡ ಹೇಳಿದ್ದೇವೆ. ಕೇಂದ್ರದ ಮಂತ್ರಿಗಳಿಗೂ ಕೂಡ ಹೇಳಿದ್ದೇವೆ. ಯಾರಿಗೆ ಹೇಳಿದರೂ ಕೂಡ ಸರಿಯಾದ ಪಾಲಿಸಿ ಆಗಿಲ್ಲ. 90 ಕೆ.ಜಿ. ಉತ್ಪನ್ನ ಬಂದಿರುವವಗೆ ಅವನಿಗಿಂತ ಥ್ರೆಶೋಲ್ಡ್ ಯೀಲ್ಡ್ ಕಡಿಮೆ ಇದೆ ಎಂಬ ಕಾರಣದಿಂದ ಅವನಿಗೆ ಇನ್‌ಶೂರೆನ್ಸ್ ಸಿಗುತ್ತಿಲ್ಲ. 205 ಕೆ.ಜಿ. ಉತ್ಪನ್ನ ಬಂದಿರುವವನಿಗ, ಅವನಿಗಿಂತ ಥ್ರೆಶೋಲ್ಡ್ ಯೀಲ್ಡ್ ಹೆಚ್ಚು ಇದೆ ಎಂಬ ಕಾರಣದಿಂದ ಅವನಿಗೆ ಇನ್‌ಶೂರೆನ್ಸ್ ಸಿಗುತ್ತದೆ. ಇದು ಯಾವ ರೀತಿಯ ಇನ್‌ಶೂರೆನ್ಸ್ ? ಇದು ಏನಾದರೂ ಬದಲಾವಣೆಯಾಗಬೇಕು. ಥ್ರೇಶೋಲ್ಡ್ ಯೀಲ್ಡ್ ಮಿನಿಯಮ್ ಎಷ್ಟು ಇರಬೇಕು ಎಂಬ ಬಗ್ಗೆ ಅಳತೆಗೋಲು ಇಡಬೇಕು. ಇಲ್ಲದಿದ್ದರೆ ಬರಗಾಲದಲ್ಲೂ ಕೂಡ ಇದು ಪ್ರಯೋಜನಕ್ಕೆ ಬರುವುದಿಲ್ಲ. ಮುಂದಿನ ವರ್ಷ ಏನಾಗುತ್ತದೆ. ಎಂದರೆ. ಅದು 90ರಿಂದ 85ಕ್ಕೆ ಇಳಿಯುತ್ತದೆ. ಅಂದರೆ ಒಂದು ಎಕರೆಗೆ 20--30 ಕೆ.ಜಿ. ಶೇಂಗಾ ಬಂದರೂ ಕೂಡ ಅವರಿಗೆ ಇನ್‌ಶೂರೆನ್ಸ್ ಸಿಗುವುದಿಲ್ಲ, ಮಾನ್ಯ ಅಧ್ಯಕ್ಷರೇ, ಇದ್ಯಾವ ರೀತಿಯ ಇನ್‌ಶೂರೆನ್ಸ್ ? ಇದು ರೈತರಿಗೆ ಮಾಡುವಂತಹ ಮೋಸವಲ್ಲವೇ ?

200 ಕೆ.ಜಿ. ಬಂದಾಗ, 300 ಕೆ.ಜಿ. ಬೆಳೆ ಬಂದಾಗ ನೀವು ಥ್ರೇಶೋಲ್ಡ್‌ನಲ್ಲಿ ಯೀಲ್ಡ್‌ನಲ್ಲಿ ಬರುತ್ತೀಯ ಎಂದು ಹೇಳುತ್ತೀರಿ, ಅದೇ ಬರಗಾಲ ಇರುವಂತಹ ಪ್ರದೇಶದಲ್ಲಿ ಥ್ರೇಶೋಲ್ಡ್ ಯೀಲ್ಡ್ ಇರುವುದು 90 ಕೆ.ಜಿ. ನಿನ್ನ ಬೆಳೆ 90 ಕೆ.ಜಿ. ಬಂದು ಬಿಟ್ಟಿದೆ. ನಿನಗೆ ಇನ್‌ಶೂರೆನ್ಸ್ ಸಿಗುವುದಿಲ್ಲವೆಂದು ಹೇಳುತ್ತೀರಿ. ಜನ ಅಲ್ಲಿ ಪಾಪರ್ ಆಗಿದ್ದಾರೆ. ಈ ರೈತರು ನಮಗೆ ಹಣ ತುಂಬಿಕೊಡಿ. ನಮಗೆ ಬೆಳೆ ಆಗಿಲ್ಲ, ನಮಗೆ ಅನ್ಯಾಯವಾಗಿದೆ, ಸರಿಪಡಿಸಿಕೊಡಿ ಎಂದು ಹೋದರೆ, ಮೊನ್ನೆ ನವಲಗುಂದದಲ್ಲಿ ರೈತರ ಮೇಲೆ ದೊಡ್ಡ ದಾಂಧಲೆ ಮಾಡಿ ಅವರನ್ನೆಲ್ಲಾ ತೆಗೆದುಕೊಂಡು ಬಂದು ಬಳ್ಳಾರಿ ಜೈಲಿನಲ್ಲಿ ಹಾಕಿದ್ದಾರೆ. ಹಿಂದೆ ಹಿರೇಕೇರೂರು ಘಟನೆ ನಡೆದಾಗ ಅವರನ್ನೆಲ್ಲಾ ತೆಗೆದುಕೊಂಡು ಹೋಗಿ ಹಿಂಡಲಗಾ ಜೈಲಿಗೆ ಹಾಕಿದ್ದರು. ಇದು ಈ ಸರ್ಕಾರ ಮಾಡತಕ್ಕಂಥಹ ಕೆಲಸ. ಖರ್ಗೆ ಸಾಹೇಬರೇ ದಯವಿಟ್ಟು ನೀವೂ ರೈತರ ಮಗನೇ ಇವತ್ತು ಮಂತ್ರಿ ಆಗಿದ್ದೀರಿ, ಆದರೆ ರೈತರ ಬಗ್ಗೆ ನಿಮಗೆ ಕಾಳಜಿ ಇರಲಿ. ರೈತರು ಹೊಟ್ಟೆ ಉರಿದು ಹೋಗಿದ್ದಾರೆ. ಅವರು ನಾಲ್ಕು ನಾಲ್ಕು ರೂಪಾಯಿ ಬಡ್ಡಿಗೆ ಸಾಲ ತಂದು ನಿಮ್ಮ ಇನ್‌ಶೂರೆನ್ಸ್ ಪ್ರೀಮಿಯಮ್ ಕಟ್ಟಿದ್ದಾರೆ. ಇಂತಹ ಕೆಟ್ಟ ನೀತಿಯಿಂದ ಅವರಿಗೆ ಇನ್‌ಶೂರೆನ್ಸ್ ಸಿಗುತ್ತಿಲ್ಲ. ಆ ಕಾರಣದಿಂದ ನಿಮಗೆ ಹೇಳುತ್ತೇನೆ, ಯಾವ ರೈತನ ಮೇಲೆ ನೀವು ಕೇಸ್ ಹಾಕಿದ್ದೀರಿ ಅದನ್ನೆಲ್ಲಾ ವಿತ್‌ಡ್ರಾ ಮಾಡಿಕೊಂಡು ಅವರನ್ನೆಲ್ಲಾ ಇವತ್ತು ನೀವು ಬಿಡುಗಡೆ ಮಾಡಬೇಕು. ಅದೇ ರೀತಿ ಹಿರೇಕೇರೂರು ರೈತರನ್ನೂ ಕೂಡ ತಾವು ಕೂಡಲೇ ಬಿಡುಗಡೆ ಮಾಡಬೇಕೆಂದು ಹೇಳುತ್ತೇನೆ. ಇನ್ನೂ ಮಹಿಳಾ ಕಲ್ಯಾಣ ಸಚಿವರಾದ ಶ್ರೀಮತಿ ಮೋಟಮ್ಮನವರು ಇಲ್ಲ. ಅವರು ತಕ್ಷಣ ರಾಜೀನಾಮೆ ಕೊಡಬೇಕು. ನೈತಿಕ ಹೊಣೆ ಹೊತ್ತು ಶ್ರೀಮತಿ ಮೋಟಮ್ಮನವರು ಮತ್ತು ಶ್ರೀಮತಿ ರಾಣಿ ಸತೀಶ್‌ರವರು ಹಾಗು ಮತ್ತು ಮಹಿಳಾ ಸಚಿವರು ಯಾರ್‍ಯಾರಿದ್ದಾರೆ ಅವರೆಲ್ಲಾ ರಾಜೀನಾಮೆ ಕೊಡಬೇಕು. ಟೀವಿಯಲ್ಲಿ ಅದನ್ನು ನೋಡಿದ ತಕ್ಷಣ ಅವರು ರಾಜೀನಾಮೆ ಕೊಡಬೇಕಾಗಿತ್ತು. ಆದರೆ ಈ ವಿಷಯದಲ್ಲಿ ಅವರ ಪ್ರತಿಭಟನೆಯೇ ಇಲ್ಲ. ನಿನ್ನೆ ಕೋಲಾರದ ಶಿಡ್ಲಘಟ್ಟದಲ್ಲಿ ಯಾರಿಗೋ ಅರೆಸ್ಟ್ ಮಾಡಿದ್ದಾರೆ. ಶ್ರೀ ಮಾನ್ ಮುನಿಯಪ್ಪನವರ ಬಗ್ಗೆ ಇಲ್ಲಿ ದಾಂಧಲೇ ಆಗಿದ್ದಕ್ಕೆ ಅವರನ್ನು ಅಲ್ಲಿ ಅರೆಸ್ಟ್ ಮಾಡಿಸಿದರು. ಇನ್ನೂ ಯಾರ ಮೇಲೂ ಕ್ರಮ ತೆಗೆದುಕೊಂಡಿಲ್ಲ. ಚನ್ನಿಗಪ್ಪ ಎಂದು ನಿಮ್ಮ ಪಕ್ಷದ ಅಧ್ಯಕ್ಷರು ಏನಿದ್ದಾರೆ ಅವರನ್ನು ಪಕ್ಷದಿಂದ

ಇನ್ನೂ ಕೂಡ ಹೊರಗೆ ಹಾಕಲಿಲ್ಲ. ಏಕೆಂದರೆ ನಿಮ್ಮ ಅವರು ಪಾರ್ಟಿಗೆ ಬೇಕು. ಸುಮ್ಮನೆ ಹೆಣ್ಣು ಮಕ್ಕಳಿಗೆ ಮೋಸ ಮಾಡುವುದಕ್ಕಾಗಿ ಏನೋ ಮಾಡಿದ್ದಾರೆ. ಹೆಣ್ಣಿನ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಇವರು ಹೆಣ್ಣಿನ ಅಂಗಾಂಗಗಳ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಅವರು ಒಬ್ಬರೇ ಅಲ್ಲ ಇಬ್ಬರು ಮಂತ್ರಿಗಳೂ ಕೂಡ ಇದ್ದರು ಅಲ್ಲಿ. ಆ ಮಂತ್ರಿಗಳನ್ನು ತಕ್ಷಣ ಅಧಿಕಾರದಿಂದ ವಜಾ ಮಾಡಬೇಕು. ಅವರಿಬ್ಬರನ್ನೂ ಪಕ್ಷದಿಂದ ಹೊರ ಹಾಕಬೇಕು. ಯಾವ ಮಂತ್ರಿಗಳು ಇದರಲ್ಲಿ ಭಾಗಿಯಾಗಿದ್ದಾರೆಂದು ಹೇಳಬೇಕು. ಮಂತ್ರಿಗಳು ಅಲ್ಲಿ ಏನು ಮಾಡಿದರು ? ಎಲ್ಲರೂ ನೋಡಿಕೊಂಡು ಕುಳಿತಿರುವುದು ಟಿವಿಯಲ್ಲಿ ಬಂದಿದೆ. ಹೆಣ್ಣು ಮಕ್ಕಳ ಮಾನ ಮರ್ಯಾದೆ ಕಳೆಯುತ್ತೀರಾ ?

ಅಧ್ಯಕ್ಷರು : ಪತ್ರಿಕೆಗಳ ವರದಿ ಪ್ರಕಾರ ಮಂತ್ರಿಗಳು ಆಚೆ ಬಂದ ಮೇಲೆ ನಡೆದಿರುವುದು ಎಂದು ಇದೆ.

ಶ್ರೀ ಎಸ್. ಅಂಜನಮೂರ್ತಿ : ಮಾನ್ಯ ಅಧ್ಯಕ್ಷರೇ, ಸುಮ್ಮನೆ ಮಾತನಾಡುವುದಲ್ಲ, ಸ್ವಲ್ಪ ಅರ್ಥ ಮಾಡಿಕೊಂಡು ಮಾತನಾಡಲಿ. ವೇದಿಕೆ ಮೇಲೆ ಮಂತ್ರಿಗಳು ಇರಲಿಲ್ಲ.

ಶ್ರೀ ಎಸ್.ಎಸ್.ಪಾಟೀಲ್ : ನೀವು ಒಂದು ತುಳಿಯಲ್ಪಟ್ಟ ಸಮಾಜದಿಂದ ಬಂದವರು ಅದೇ ಜನರ ಹೆಣ್ಣುಮಕ್ಕಳನ್ನು ಇಲ್ಲಿ ಉಪಯೋಗಿಸಿಕೊಳ್ಳುತ್ತಿದ್ದಾರೆ. ದೊಡ್ಡವರು ಯಾರೂ ಅಲ್ಲಿ ಹೋಗುವುದಿಲ್ಲ.

ಅಧ್ಯಕ್ಷರು : ದಯವಿಟ್ಟು ಈ ಕಡೆ ಮಾತನಾಡಿ.

ಶ್ರೀ ಎಸ್.ಎಸ್.ಪಾಟೀಲ್ : ನಿಜವಾಗಿ ಆ ಮಂತ್ರಿಗಳು ಇಲ್ಲವೆಂದರೆ, ನೀವು ವಿಚಾರಣೆ ಮಾಡಿಸಿ. ಆ ಮಂತ್ರಿಗಳು ಅಲ್ಲಿ ಇರಲಿಲ್ಲವೆಂದರೆ ಆಗಲಿ ನಾವು ಬೇಡವೆಂದು ಹೇಳುವುದಿಲ್ಲ.

ಅಧ್ಯಕ್ಷರು : ಪತ್ರಿಕೆಗಳ ಪ್ರಕಾರ, ಮಂತ್ರಿಗಳು ಅಲ್ಲಿ ಇರಲಿಲ್ಲ ಎಂದು ಇದೆ.

ಶ್ರೀ ಎಸ್. ಓ.ಮುದ್ದಹನುಮೇಗೌಡ : ಮಾನ್ಯ ಪಾಟೀಲರೇ, ನಿಮ್ಮ ಸರ್ಕಾರ ಇದ್ದಾಗ ಇಲ್ಲಿ ಬೆಂಗಳೂರಿನಲ್ಲಿ ವಿಶ್ವ ಸುಂದರಿ ಪ್ರದರ್ಶನ ಏರ್ಪಡಿಸಿದರಲ್ಲಾ ಆಗ ನೀವೇಕೆ ವಿರೋಧ ಮಾಡಲಿಲ್ಲ ? ವಿರೋಧ ಮಾಡಿ ನೀವು ಈಚೆ ಬರಬೇಕಾಗಿತ್ತು.

ಶ್ರೀ ಎಸ್.ಎಸ್.ಪಾಟೀಲ್ : ಇದು ನಿನ್ನೆ ನಡೆದಿದ್ದು, ಇವತ್ತು ಹೇಳುತ್ತಿದ್ದೇನೆ. ವಿಶ್ವ ಸುಂದರಿ ಪ್ರದರ್ಶನ ಕ್ಯಾಬರೆ ಅಲ್ಲ.

ಶ್ರೀ ಡಿ.ಬಿ.ಚಂದ್ರೇಗೌಡ : ಕ್ಯಾಬರೆ ಅಲ್ಲ ಬೆತ್ತಲೆ !

ಶ್ರೀ ಎಸ್.ಎಸ್.ಪಾಟೀಲ್ : ನೀವು ಇರಲಿಲ್ಲವೆಂದು ಹೇಳಿ. ಅದಕ್ಕೆ ನಾವೇನೂ ತಕರಾರು ಮಾಡುವುದಿಲ್ಲ, ನಮ್ಮ ತಕರಾರು ಅಲ್ಲಿ ಮಂತ್ರಿಗಳು ಇದ್ದರೆ ಎಂದು . ಇದ್ದರು ಎಂದು ನಾನು ಹೇಳಿಲ.

ಅಧ್ಯಕ್ಷರು : ಮಾನ್ಯ ಪಾಟೀಲರೇ, ಮಂತ್ರಿಗಳು ಹೇಳಿದ್ದಾರೆ, ನಾವು ಅಲ್ಲಿರಲಿಲ್ಲ, ನಾವು ಬಂದ ಮೇಲೆ ನಡೆದಿರುವುದು ಎಂದು ಹೇಳಿದ್ದಾರೆ.

ಶ್ರೀ ಎಸ್.ಎಸ್.ಪಾಟೀಲ್ : ತಾವು ಅಧ್ಯಕ್ಷರೇ ಈ ರೀತಿ ರಕ್ಷಣೆ ಮಾಡಿದರೆ ನಾವೇನು ಮಾಡುವುದು ?

ಅಧ್ಯಕ್ಷರು : ಪತ್ರಿಕೆಗಳಲ್ಲಿ ಬರೆದಿರುವುದನ್ನು ಹೇಳುತ್ತಿದ್ದೇನೆ ಅಷ್ಟೆ. ಆ ಸಂದರ್ಭದಲ್ಲಿ ನಾವು ಇರಲಿಲ್ಲವೆಂದು ಅವರು ಹೇಳಿದ್ದಾರೆ.

ಶ್ರೀ ಎಸ್.ಎಸ್.ಪಾಟೀಲ್ : ಪೋಲಿಸರಿಂದ ವರದಿ ತರಿಸಿ ಕೊಡಿ.

ಶ್ರೀ ಎಸ್.ಸುರೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೇ, ನೀವು ಹೇಳಿದಿರಿ, ಸಚಿವರು ಹೇಳುತ್ತಿದ್ದಾರೆ, ನಾವು ಇರಲಿಲ್ಲ ನಾವು ಬಂದ ಮೇಲೆ ನಡೆದಿದ್ದು ಎಂದು ಆ ಮಾತನ್ನು ಅವರು ಬಹಳ ಬೇಜಾರು ಮಾಡಿಕೊಂಡು ಹೇಳುತ್ತಿದ್ದಾರಾ ? ನಾವು ಆಗ ಇರಲಿಲ್ಲ, ನಾವು ಬಂದಮೇಲೆ ಮಾಡಿಬಿಟ್ಟರು ಅವರು ಎಂದು.

ಅಧ್ಯಕ್ಷರು : ಅವರು ಪತ್ರಿಕೆಯಲ್ಲಿ ಏನು ಹೇಳಿಕೆ ಕೊಟ್ಟಿದ್ದಾರೆ ಅದನ್ನು ಹೇಳುತ್ತಿದ್ದೇವೆ.

ಶ್ರೀ ಹೆಚ್.ಎಂ,ರೇವಣ್ಣ : ಬೆಂಗಳೂರಿನಲ್ಲಿ ಎಲ್ಲಾ ಗಣಪತಿ ಕಾರ್ಯಕ್ರಮಗಳನ್ನು ನೀವು ನೋಡಿದ್ದೀರಿ, ನೀವೂ ಕುಳಿತ್ತಿದ್ದೀರಿ, ಇವತ್ತು ಮಾತನಾಡುತ್ತೀರಿ.

ಶ್ರೀ ಸಿ.ಚೆನ್ನಿಗಪ್ಪ : ಮಾನ್ಯ ಅಧ್ಯಕ್ಷರೇ, ನಾವು ರಾಜಕಾರಿಣಿಗಳು ಸತ್ ಸಂಪ್ರದಾಯಕೋಸ್ಕರ ರಾಜಕಾರಿಣಿಗಳಾಗಿದ್ದೇವ್ರ, ಆದರೆ ಆ ಸಂಪ್ರದಾಯವನ್ನು ಮುರಿದು ಈ ರೀತಿ ಅಸಂಪ್ರದಾಯಿಕವಾಗಿ ನಡೆದುಕೊಂಡಿರುವುದು ಒಳ್ಳೆಯ ಕೆಲಸ ಅಲ್ಲ.

ಅಧ್ಯಕ್ಷರು : ನೀವು ಯಾವಾಗಲೂ ಕಾಂಟ್ರವರ್ಸಿ ಮಾತನಾಡುವುದಿಲ್ಲ, ಇವತ್ತು , ಏಕೆ ಕಾಂಟ್ರವರ್ಸಿಯಾಗಿ ಮಾತನಾಡುತ್ತಿದ್ದೀರಿ ?

ಶ್ರೀ ಎಸ್.ಎಸ್.ಪಾಟೀಲ್ : ಇಬ್ಬರು ಮಂತ್ರಿಗಳು ಇದ್ದರು ಅವರನ್ನು ತೆಗೆಯಿರಿ ಎಂದು ನಾನು ಹೇಳಲಿಲ್ಲ, ಯಾರಾದರೂ ಮಂತ್ರಿಗಳಿದ್ದಾರೆ ದೊಡ್ಡ ಅಪರಾಧ, ಇದ್ದರೆ ತೆಗೆಯಬೇಕು, ಎಂದು ಹೇಳಿದೆ. ಇಲ್ಲದಿದ್ದರೆ ತೆಗೆಯಿರಿ ಎಂದು ನಾನು ಹೇಳಲಿಲ್ಲ. ಅಲ್ಲಿ ಅವರು ಇಲ್ಲದಿದ್ದರೂ ಮಾನ್ಯ ರೇವಣ್ಣನವರನ್ನು ತೆಗೆದುಬಿಡಿ ಎಂದು ನಾನು ಹೇಳಲಿಲ್ಲ. ಅದು ನನ್ನ ವಾದ ಇಲ್ಲ. ಒಂದು ವೇಳೆ ಮಾನ್ಯ ರೇವಣ್ಣನವರು ಇದ್ದಿದ್ದೆ ಆದರೆ ಅವರೇ ನೈತಿಕ ಹೊಣೆ ಹೊತ್ತು ರಾಜೀನಾಮೆ ಕೊಡಬೇಕು. ಇಲ್ಲವೆಂದರೆ ಮುಗಿಯಿತು ಪ್ರಶ್ನೆಯೇ ಇಲ್ಲ.

ಅಧ್ಯಕ್ಷರೇ : ಅವರು ಇರಲಿಲ್ಲವೆಂದು ಹೇಳಿದ್ದಾರೆ. ಅಲ್ಲಿಗೆ ಮುಗಿಯಿತು. ನೀವು ಮುಂದುವರೆಸಿ.

ಶ್ರೀ ಎಸ್.ಎಸ್.ಪಾಟೀಲ್ : 11 ಲಕ್ಷ ಮನೆಗಳ ನಿರ್ಮಾಣದ ಗುರಿಯನ್ನು ನಾವು ಮುಟ್ಟುತ್ತೇವೆ, ಭಾರೀ ಪ್ರಗತಿ ಸಾಧಿಸಿದ್ದೇವೆಂದು ಹೇಳುತ್ತಾರೆ, ಆ 11 ಲಕ್ಷ ಮನೆಗಳನ್ನು ಇವರಿಗೆ ಇನ್ನೂ ಕಟ್ಟುವುದಕ್ಕಾಗಲಿಲ್ಲ. ಅರ್ಧ ಕೂಡ ಆಗಿಲ್ಲ. ಮತ್ತೆ ನವಗ್ರಾಮ ಎಂದು ಮಂಜೂರು ಮಾಡಿಕೊಟ್ಟಿದ್ದಾರೆ. ಅಲ್ಲಿ ಮನೆ ಕಟ್ಟುವುದಕ್ಕೆ ಜಾಗ ಇಲ್ಲ ಆ ಜಾಗ ಖರೀದಿ ಮಾಡುತ್ತೇವೆ ಎಂದು ಹೇಳಿದರೆ ದುಡ್ಡು ಇಲ್ಲ. ಯಾವ ಡಿ.ಸಿ. ಹತ್ತಿರವೂ ದುಡ್ಡು ಇಲ್ಲ, ಎಲ್ಲವನ್ನು ಇಟ್ಟುಕೊಂಡು ಕುಳಿತಿದ್ದಾರೆ.

ಶ್ರೀ ಹೆಚ್.ಎಂ.ರೇವಣ್ಣ : ಮಾನ್ಯ ಪಾಟೀಲರು ಹೆಸರು ಹೇಳಿದರು. ಅದಕ್ಕೆ ಒಂದು ಮಾತನ್ನು ಹೇಳುತ್ತೇನೆ. ಮೊನ್ನೆ ನಾಗಮಂಗಲದಲ್ಲಿ ನಡೆದಂತಹ ಕಾರ್ಯಕರ್ತರ ಸಭೆಯಲ್ಲಿ ನಾನು ಭಾಗವಹಿಸಿದ್ದೆ, ಅಲ್ಲಿ ಒಂದು ನೃತ್ಯ ನಡೆಯಿತು, ಅಥವಾ ನಂಗ ನಾಚು ಎನ್ನುವುದರ ಬಗ್ಗೆ ಬಹಳಷ್ಟು ಚರ್ಚೆ ರಾಜ್ಯದಾದ್ಯಂತ ನಡೆಯುತ್ತಿದೆ, ಅದರೆ ನಾನು ಈಗಾಗಲೇ ಸ್ಪಷ್ಟೀಕರಣವನ್ನು ಕೊಟ್ಟಿದ್ದೇನೆ, ಈ ಸದನದ ಮೂಲಕ ಮತ್ತೊಮ್ಮೆ ರಾಜ್ಯದ ಜನತೆಗೆ ತಿಳಿಸುವುದಕ್ಕೆ ಇಚ್ಛೆ ಪಡುತ್ತೇನೆ. ಕಾರ್ಯಕರ್ತರ ಸಭೆ ನಡೆದದ್ದು ನಿಜ. ಅದು ಮೂರನೇ ಸಭೆ. ಬಹಳ ದೊಡ್ಡ ಸಭೆ ಅಲ್ಲಿ ನಡೆಯಿತು. ಆದರೆ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ರಾಜ್ಯದಲ್ಲಿ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳು ಬೆಂಗಳೂರಿನಲ್ಲಿ ಮತ್ತು ನಾನಾ ಕಡೆ ನಡೆಯುತ್ತೇವೆ. ಬೆಂಗಳೂರಿನಲ್ಲಿ ವಿವಿಧ ವಾದ್ಯಗೋಷ್ಠಿಗಳ

ತಂಡಗಳು ಇವತ್ತಿನ ದಿವಸ ಸಿನಿಮಾ ಚಿತ್ರದ ಹಾಡುಗಳ ತುಣುಕುಗಳನ್ನು, ಅದು ಯಾವುದೇ ಇರಬಹುದು, ಡಾ|| ರಾಜ್‌ಕುಮಾರ್‌ರವರು ಹಾಡಿರತಕ್ಕಂತಹ " ಹುಟ್ಟಿದರೆ ಕನ್ನಡ ನಾಡಿನಲ್ಲಿ ಹುಟ್ಟಬೇಕು". ಎನ್ನುವಂತಹ ಒಂದು ಸಮೂಹ ಗೀತೆಯಿಂದ ಪ್ರಾರಂಭವಾದ ಈ ನೃತ್ಯ ಪ್ರದರ್ಶನಗಳು ಇವತ್ತು ಕೊನೆಯ ಹಂತದ ಉಪೇಂದ್ರನ ಗೀತೆಯವರೆಗೂ ಬಂದಿವೆ. ಇದಕ್ಕೆ ಇಗರತಕ್ಕಂದ್ದು ವಾಸ್ತವಾಂಶ ಆರ್ಕೆಸ್ಟ್ರಾದವರು ಮಾಡತಕ್ಕಂತಹ ಕಾರ್ಯವೇ ಹೊರತು, ಯಾರೇ ಕಾರ್ಯಕರ್ತರು ಅಥವಾ ಆರ್ಗನೈಸರ್ಸ್ ಬರುವುದಿಲ್ಲ. ಸಿನಿಮಾದಲ್ಲಿ ಯಾವ ರೀತಿ ಬಟ್ಟೆಗಳನ್ನು ತೊಟ್ಟಿರುತ್ತಾರೆ ಅದರ ಮಾದರಿಯಾಗಿ ಮಾಡಿದ್ದಾರೆಯೇ ಹೊರತು ಬೇರೇನಿಲ್ಲ. ಆದರೂ ಅದು ನಡೆದಂತಹ ಸಂದರ್ಭದಲ್ಲಿ ನಾನು ಇರಲಿಲ್ಲವೆಂದು ಈಗಲೂ ಹೇಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಇವರು ಸಮರ್ಥನೆ-ಮಾಡಿಕೊಳ್ಳುತ್ತಿದ್ದಾರೆ. ಇದು ನಾಚಿಕೇಗೇಡು. ಇನ್ನು ಇವರಿಗೆ ನಾಚಿಕೆ ಬರಲಿಲ್ಲ. ಇವರು ಇನ್ನು ಏಕೆ ಸಮರ್ಥನೆ ಮಾಡಿಕೊಳ್ಳುತ್ತಿದ್ದಾರೆಂಬುದು ನನಗೆ ಅರ್ಥವಾಗುವುದಿಲ್ಲ. ಈ ರೀತಿ ಸಮರ್ಥನೆ ಮಾಡುವುದರಿಂದ ರಾಜ್ಯಕ್ಕೆ ಯಾವ ಸಿಗ್ನಲ್ ಹೋಗಬಹುದು ?

ಗೊಂದಲ

ಶ್ರೀ ಹೆಚ್.ಎಂ.ರೇವಣ್ಣ : ಮಾನ್ಯ ಚನ್ನಿಗಪ್ಪನವರಿಗೆ ಸ್ವಲ್ಪ ತಿಳುವಳಿಕೆ ಬರಲಿ. ನಾನು ಅಲ್ಲಿ ಇದ್ದೆ ಎಂದು ಸಾಬೀತಾದರೆ, ಹೇಳಿ, ನಾನು ಹಿಂದೆ ಇದೇ ರೀತಿ ಆಪಾದನೆ ಆದಾಗ ರಾಜೀನಾಮೆಯನ್ನು ಕೊಟ್ಟಿರುವಂತಹ ವ್ಯಕ್ತಿ. ಮಾನ್ಯ ಚನ್ನಿಗಪ್ಪನವರು ಇದನ್ನು ಸ್ವಲ್ಪ ಚನ್ನಿಗಪ್ಪನವರು ಅರ್ಥ ಮಾಡಿಕೊಳ್ಳಲಿ. ಬರೀ ಇಲ್ಲಿ ಮಾತನಾಡುವುದಲ್ಲ.

ಗೊಂದಲ

ಅಧ್ಯಕ್ಷರು : ಮಾನ್ಯ ರೇವಣ್ಣನವರೆ, ತಾವು ವಿವರಣೆ ಕೊಟ್ಟು ಆಯಿತು, ದಯಮಾಡಿ ಕುಳಿತುಕೊಳ್ಳಿ.

ಶ್ರೀ ಡಿ.ವಿ.ಸದಾನಂದಗೌಡ : ಮಾನ್ಯ ಅಧ್ಯಕ್ಷರೇ, ಕಾಂಗ್ರೆಸ್ ಅಧ್ಯಕ್ಷರು ಇವರಿಗೆ ಶೋಕಾಸ್ ನೋಟಿಸ್ ಕೊಟ್ಟಿರುವುದು ನಿಜವಾ ಎಂದು ಹೇಳಲಿ.

ಅಧ್ಯಕ್ಷರು : ಕೊಟ್ಟಿಲ್ಲ ಪಾರ್ಟಿ ವಿಷಯವನ್ನು ಇಲ್ಲಿ ಏಕೆ ಮಾತನಾಡಬೇಕು ? ಮಾನ್ಯ ಪಾಟೀಲರೇ, ನೀವು ಮುಂದುವರೆಸದೆ ಇದ್ದರೆ ನಾನು ಬೇರೆಯವರನ್ನ ಕರೆಯುತ್ತೇನೆ. ಆ ವಿಷಯ ಇಲ್ಲಿಗೇ ಮುಕ್ತಾಯವಾಯಿತು.

ಗೊಂದಲ

Mr. Speaker : Mr. Chennigappa, that subject is over please take your seat.

ಶ್ರೀ ಎಸ್.ಎಸ್.ಪಾಟೀಲ್ :ಮಾನ್ಯ ಅಧ್ಯಕ್ಷರೇ, ನಾನು ವಿಷಯ ಎತ್ತಿದ ಮೇಲೆ ಅವರು ಸದನದಲ್ಲಿದ್ದ ಮೇಲೆ ಅವರು ಹೇಳುವುದು ಸರಿ ಉತ್ತರ ಅವರು ಹೇಳಬೇಕಾಗುತ್ತದೆ. ಅವರ ಮೇಲೆ ಆಪಾದನೆ ಇರುವಾಗ ಅವರು ಇಲ್ಲಿ ಹೇಳಿಕೆ ನೀಡುವುದು ಸಮಂಜಸವಾಗಿದೆ. ಆಸೆಂಬ್ಲಿಯಲ್ಲಿ ಕೂಡ ನಾನು ಇಲ್ಲವೆಂದು ಹೇಳಿದರೆ ಸದನಕ್ಕೆ ಗೌರವ ಬರುತ್ತದೆ. ಅವರು ಇಲ್ಲದಿದ್ದರೆ ಬಹಳ ಉತ್ತಮ. ಅದರೆ ಒಂದು ಅವರು ಸಮರ್ಥನೆ ಮಾಡಿದರು ಅದು ತಪ್ಪು.

ಅಧ್ಯಕ್ಷರು : ಆ ವಿಷಯ ಮುಗಿಯಿತು. ಈಗ ನೀವೇ 11 ಲಕ್ಷ ಮನೆಗಳನ್ನು ನಿರ್ಮಾಣ ಮಾಡಿಲ್ಲವೆಂದು ಹೇಳಿದಿರಲ್ಲ, ಅದರ ಬಗ್ಗೆ ಮಾತನ್ನು ಮುಂದುವರಿಸಿ.

ಶ್ರೀ ಎಸ್.ಎಸ್.ಪಾಟೀಲ್ : ಹೆಣ್ಣನ್ನು ಗೌರವಿಸುವ ಗೌರವಯುತ ದೇಶ ನಮ್ಮ ದೇಶ, ತಾಯಿ ಸ್ಥಾನವನ್ನು ಅಲಂಕರಿಸುವ ಹೆಣ್ಣಿಗೆ ಈ ದೇಶದಲ್ಲಿ ಗೌರವವಿದೆ. ಪೂಜ್ಯತೆ ಇದೆ. ಹೆಣ್ಣನ್ನು ದೇವಿ ಎಂದು ನಾವು ಪೂಜೆಯನ್ನು ಮಾಡುತ್ತೇವೆ. ಹೀಗಿರುವಾಗ ಆ ಹೆಣ್ಣಿನ ಮಾನಹಾನಿ ಆಗುತ್ತಿರುವಾಗ ಸುಮ್ಮನೇ ಕೂಡುವುದೇ ? ಇದು ನಮ್ಮ ಪ್ರಶ್ನೆ ಇರುವುದು.

ಅಧ್ಯಕ್ಷರು : ದಯವಿಟ್ಟು ಬೇಗ ಮುಗಿಸಿ. ಇಲ್ಲದಿದ್ದರೆ ನಾನು ಬೇರೆಯವರನ್ನು ಮಾತನಾಡಲು ಕರೆಯಬೇಕಾಗುತ್ತದೆ.

ಶ್ರೀ ಎಸ್.ಎಸ್.ಪಾಟೀಡಿಲ್ : ಇನ್ನು ಹನ್ನೊಂದು ಲಕ್ಷ ಮನೆಗಳು ಎಂದರು.

ಶ್ರೀ ಡಿ.ಬಿ.ಚಂದ್ರೇಗೌಡ : ಇವೊತ್ತು ಇಡೀ ದಿನ ನೀವೇ ಭಾಷಣ ಮಾಡುವುವವರಿದ್ದೀರೇನು ?

ಶ್ರೀ ಎಸ್.ಎಸ್.ಪಾಟೀಲ್ : ನಾನು ಆಗಲೇ ಅಧ್ಯಕ್ಷರನ್ನು ಈ ಬಗ್ಗೆ ಕೇಳಿಕೊಂಡಿದ್ದೇನೆ.

ಅಧ್ಯಕ್ಷರು : ಸ್ವಾಮಿ ನಾನು ಹೇಳಿದ್ದೇನು ? 25 ನಿಮಿಷ ಮಾತನಾಡಿ, ಅಲ್ಲಿಗೆ ನೀವು ಒಟ್ಟಾರೆ ಒಂದೂವರೆ ಗಂಟೆ ಮಾತನಾಡಿದ ಹಾಗಾಗುತ್ತದೆ ಎಂದೆ.

ಶ್ರೀ ಎಸ್.ಎಸ್.ಪಾಟೀಲ್ : ನೀವು ವಿಧಾನಸಭೆಯನ್ನು ಡಿಸಾಲ್ವ್ ಮಾಡುವುದಿದ್ದರೆ ಹೇಳಿ. ಈಗಲೇ ಮುಗಿಸಿಬಿಡುತ್ತೇನೆ. ಇವೊತ್ತು ಡಿಸಾಲ್ವ್ ಮಾಡುತ್ತೀರಾ ?

ಅಧ್ಯಕ್ಷರು : ನೋಡಿ, ಇನ್ನು ಎರಡು ನಿಮಿಷದಲ್ಲಿ ಭಾಷಣ ಮುಗಿಸುವುದಿದ್ದರೆ ಮುಗಿಸಿ. ಇಲ್ಲದಿದ್ದರೆ ನಾನು ಬೇರೆಯವರನ್ನು ಮಾತನಾಡಲು ಕರೆಯಬೇಕಾಗುತ್ತದೆ. ಚೆನ್ನಾಗಿ ಮಾತನಾಡುವವರು ಇನ್ನೂ ಬೇರೆಯವರೂ ಇದ್ದಾರೆ. ಅವರಿಗೂ ಅವಕಾಶ ಕೊಡಬೇಕು.

ಶ್ರೀ ಎಸ್.ಎಸ್.ಪಾಟೀಲ್ : ಮಾನ್ಯ ಅಧ್ಯಕ್ಷರೇ, ಎಲ್ಲರೂ ಮಾತನಾಡಲಿ. ಹೇಗಿದ್ದರೂ ಮುಖ್ಯಮಂತ್ರಿಗಳು ಸೋಮವಾರದವರೆಗೂ ಮುಂದುವರೆಸುತ್ತೇವೆಂದು ಹೇಳಿದ್ದಾರೆ. ಅಲ್ಲಿ ಪೇಪರ್ ನೋಡಿದರೆ ಆ ರೀತಿ ಇದೆ. ಇಲ್ಲಿ ನೋಡಿದರೆ ಮಾತನಾಡುವುದಕ್ಕೆ............

ಶ್ರೀ ಡಿ.ಬಿ.ಚಂದ್ರೇಗೌಡ : ಮಾನ್ಯ ಪಾಟೀಲರೇ, ನಮ್ಮ ಕಡೆ ಗಾದೆ ಇದೆ, ಅದು ನಿಮಗೆ ಅಪ್ಲೈ ಆಗುವುದಿಲ್ಲ. ನಮ್ಮಲ್ಲಿ ಒಂದು ಮಾತನ್ನು ಹೇಳುತ್ತಾರೆ. ಕೋಳಿ ಕೇಳಿ ಮಸಾಲಿ ಅರೆಯುವುದಿಲ್ಲವೆನ್ನುತ್ತಾರೆ ಅದು ನಿಮಗೆ ಗೊತ್ತಾಗುವುದಿಲ್ಲ ಆ ರೀತಿ ಡಿಸಾಲ್ವ್ ಮಾಡುತ್ತೀರಾ ಹೇಳಿ ಎಂದರೆ ಹೇಗೆ ? ನಿಮ್ಮನ್ನು ಕೇಳಿ ನಾವು ಡಿಸಾಲ್ವ್ ಮಾಡುವುದಕ್ಕಾಗುತ್ತದೆಯೆ ?

ಶ್ರೀ ಎಸ್.ಎಸ್.ಪಾಟೀಲ್ : ಮಾನ್ಯ ಶಾಸಕರುಗಳೆಲ್ಲರೂ ಕೂಡಿ ಮಾನ್ಯ ಮಂತ್ರಿಗಳ ಮೇಲೆ ಮಾನನಷ್ಟ ಮೊಕದ್ದಮ ಹಾಕಬೇಕಾಗುತ್ತದೆ. ಏಕೆಂದರೆ ನಮಗೆ ಕುರಿ ಎಂದು ಹೇಳಿದರು.

ಶ್ರೀ ಕರಡಿ ಸಂಗಣ್ಣ : ಅವರು ಹೇಳಿದ್ದು ಕೋಳಿ ಎಂದು.

ಶ್ರೀ ಎಸ್.ಎಸ್.ಪಾಟೀಲ್ : ಕೋಳಿ ಕುರಿ ಎಂದು ನಾನು ಆಗಲೇದ ಒಂದು ವಚನ ಹೇಳಿದೆ. ಆಗ ಅವರು ಇರಲಿಲ್ಲ, ಹೊರಸಿಕೊಂಡು ಹೋದ ನಾಯಿ ಮೊಲವನ್ನು ಹೇಗೆ ಹಿಡಿಯಬಲ್ಲದು ? ಎಂದು ಬಸವಣ್ಣನವರು ಹೇಳಿದ್ದಾರೆ. ಹಾಗೆ ನೀವು. ಕೊನೆಯಲ್ಲಿ ಈ ವಚನ ಹೇಳುತ್ತೇನೆ.

ಶ್ರೀ ಕುಡುವನಹಳ್ಳಿ ಶ್ರೀನಿವಾಸ ಗೌಡ : ಮಾನ್ಯ ಅಧ್ಯಕ್ಷರೇ, ಊಟದ ಟೈಂನಲ್ಲಿ ಕೋಳಿ ,ಕುರಿ ಎಂದು ಇವರು ಹೇಳಿದರೆ ನಮ್ಮ ಗತಿ ಏನು ಹೇಳಿ.

ಅಧ್ಯಕ್ಷರು : ಊಟ ಎರಡು ಗಂಟೆಗೆ; ಇನ್ನೂ ಪ್ರಾರಂಭವಾಗಿಲ್ಲ.

ಶ್ರೀ ಎಸ್.ಎಸ್.ಪಾಟೀಲ್ : ಈ ಬಜೆಟ್ ಜನತಾ ಫ್ಲ್ಯಾಟ್‌ಗಳ ಬಗ್ಗೆ ಜಾಗವನ್ನು ಖರೀದಿ ಮಾಡಲು ದುಡ್ಡು ಇಲ್ಲವಾಗಿದೆ. ನೀವು ಸುಮ್ಮನೇ ಇಲ್ಲಿಂದ ಹಣ ಬಿಡುಗಡೆ ಮಾಡುತ್ತೀರಿ. ಆದರೆ ಅಲ್ಲಿ ಮನೆಗಳು ಆಗುತ್ತಿಲ್ಲ. ಮನೆ ಕಟ್ಟುವುದಕ್ಕೆ ಜಾಗವಿಲ್ಲ. ಆ ಜಾಗ ಖರೀದಿಗೆ ಯಾವ ಡಿ.ಸಿ ಹತ್ತೀರವೂ ರೊಕ್ಕವಿಲ್ಲ. ಅದನ್ನು ತಾವು ಕಳುಹಿಸಿಕೊಡಬೇಕು. ಇದು ನನ್ನ ವಾದವಿರುವುದು.

ಶ್ರೀ ಎ.ಕೃಷ್ಣಪ್ಪ : ಸರ್ಕಾರ ಎಂದು ಹೇಳಿದರೆ ಕಬ್ಬಿಣದ ಪೆಟ್ಟಿಗೆಯಿಂದ ಹಣ ತೆಗೆದು ಖರ್ಚು ಮಾಡುವ ಸರ್ಕಾರ ಪ್ರಪಂಚದಲ್ಲಿ ಎಲ್ಲೂ ಇಲ್ಲ. ಹಣ ಬರುತ್ತಾ ಇರುತ್ತದೆ, ಹಾಗೆಯೇ ಹೋಗುತ್ತಾ ಇರುತ್ತದೆ. ಕೆರೆಗೆ ನೀರು ಬಂದ ಹಾಗೆ ತೋಟಕ್ಕೆ ನೀರು ಕಟ್ಟಿದ ಹಾಗೆ. ಇದು ನಿಮಗೆ ಗೊತ್ತಿದೆ. ಏಕೆಂದರೆ ಸರ್ಕಾರದಲ್ಲಿ ಹಿಂದೆ ನೀವು ಕೂಡ ಕೆಲಸ ಮಾಡಿದ್ದೀರಿ.

ಶ್ರೀ ಎಸ್.ಎಸ್.ಪಾಟೀಲ್ : ಈ ಬಜೆಟ್‌ನಲ್ಲಿ ಇಲ್ಲದ್ದನ್ನು ನೀವು ಹೇಳಿದ್ದೀರಿ.

ಶ್ರೀ ಎ.ಕೃಷ್ಣಪ್ಪ :ಇಲ್ಲದ್ದನ್ನು ಹೇಳಿಲ್ಲ. ನಡೆಸುವುದನ್ನು ಹೇಳಿದ್ದೇವೆ.

ಶ್ರೀ ಎಸ್.ಎಸ್.ಪಾಟೀಲ್ : ಆಯ್ಯೋ ಏನೇನೋ ಹೇಳಿದ್ದೀರಿ. ಯಾರ್‍ಯಾರಿಗೆ ಎಷ್ಟೆಷ್ಟು ಕೋಟಿ ರೂ.ಗಳನ್ನು ಕೊಟ್ಟಿದ್ದಾರೆ ಎಂಬುದನ್ನು ಹೇಳಲು ಅಧ್ಯಕ್ಷರು ನನಗೆ ಸಮಯಾವಕಾಶ ಕೊಟ್ಟರೆ ಅಷ್ಟನ್ನೂ ಹೇಳುತ್ತೇನೆ. ಇಂದಿರಾಜ್ಯೋತಿ...... ಹೀಗೆ ಹೇಳುತ್ತಾ ಹೋದರೆ........

ಅಧ್ಯಕ್ಷರು : ಚೆನ್ನಿಗಪ್ಪನವರೆ, ಮಾನ್ಯ ಪಾಟೀಲರು ಭಾಷಣ ನಿಲ್ಲಿಸುವುದಿಲ್ಲವೆಂದು ಕಾಣುತ್ತಿದೆ. ನೀವು ಎದ್ದು ಮಾತನಾಡಲು ಪ್ರಾರಂಭಿಸಿ. ಎಷ್ಟು ಬಾರಿ ಅವರಿಗೆ ನಾನು ರಿಕ್ವೆಸ್ಟ್ ಮಾಡಿಕೊಳ್ಳಲಿ ?

ಶ್ರೀ ಎಸ್.ಎಸ್.ಪಾಟೀಲ್ : ಮಾನ್ಯ ಅಧ್ಯಕ್ಷರೇ, ತಾವು ಈ ರೀತಿಯಾಗಿ ನನಗೆ ಕುಳಿತುಬಿಡಿ ಎಂದರೆ ನಾನು ಕುಳಿತುಕೊಳ್ಳುವುದಕ್ಕೆ ತಯಾರಿದ್ದೇನೆ. ನನಗೇನೂ ಮಾತಿನ ಚಪಲವಿಲ್ಲ, ನಾನು ಬಜೆಟ್ ಮಾತನಾಡಲು ಬಗ್ಗೆ ತಯಾರಿದ್ದೇನೆ. ನನಗೇನೂ ಪ್ರಶ್ನೆಯಿಲ್ಲ. ಇದೇ ಕೊನೆಯ ಅಧಿವೇಶನ. ನಾನೇನಾದರೂ ಹಾದಿ ಬಿಟ್ಟು ಮಾತನಾಡುತ್ತಿದ್ದರೆ ನನಗೆ ಹೇಳಿ. ನಾನು ಬಜೆಟ್ ಬಗ್ಗೆ ಮಾತ್ರ ಮಾತನಾಡುತ್ತಿದ್ದೇನೆ.

ಅಧ್ಯಕ್ಷರು : ಇಪ್ಪತ್ತೈದು ನಿಮಿಷಗಳ ಕಾಲ ತಮಗೆ ಮಾತನಾಡಲು ಸಮಯ ಕೊಟ್ಟಿದ್ದು. ಆದರೆ ತಾವು ಇದುವರೆಗೆ ಐವತ್ತು ನಿಮಿಷಗಳ ಕಾಲ ಮಾತನಾಡಿದ್ದೀರಿ.

ಶ್ರೀ ಎಸ್.ಎಸ್.ಪಾಟೀಲ್ : ಈಗತಾನೇ ಕುಡಿಯುವ ನೀರಿನ ಖಾತೆಯ ಮಂತ್ರಿಗಳು ಬಂದಿದ್ದಾರೆ. ಅವರು ಇಷ್ಟು ಹೊತ್ತು ಇರಲಿಲ್ಲ. ಈಗ ಕುಡಿಯುವ ನೀರಿನ ಬಗ್ಗೆ ನಾನು ಹೇಳಬೇಕು.

ಅಧ್ಯಕ್ಷರು : ಸ್ವಾಮಿ ಪಾಟೀಲರೇ, ವಿಷಯಗಳು ಮೂರು ದಿನಗಳ ಕಾಲ ಮಾತನಾಡುವಷ್ಟು ಇದೆ.

ಶ್ರೀ ಎಸ್.ಎಸ್.ಪಾಟೀಲ್ : ಆಸೆಂಬ್ಲಿ ಇರುವುದು ಏತಕ್ಕಾಗಿ ? ಅವರು ಮಂಡಿಸಿದ ಬಜಟ್‌ನ್ನು ಕೇಳಿಕೊಂಡು ನಾವು ಸುಮ್ಮನೇ ಹೋಗಬೇಕೇ ? ಅಧ್ಯಕ್ಷರೇ, ನೀವೇ ಹೇಳಿ.

ಅಧ್ಯಕ್ಷರು : ಅದು ನನಗೆ ಗೊತ್ತಿಲ್ಲ. ಅ ವಿಷಯ ಮಾತನಾಡಬೇಡಿ.

ಶ್ರೀ ಎಸ್.ಎಸ್.ಪಾಟೀಲ್ : ನೀವೇ ಹೇಳಿ ಅಧ್ಯಕ್ಷರೇ, ಎಂದು ನಾನು ಕೇಳಿದರೆ ತಾವೇ ಈ ರೀತಿ ಹೇಳಿದರೆ ನಾವೇನು ಮಾಡುವುದು ? ಈಗ ಕುಡಿಯುವ ನೀರಿನ ಖಾತೆಯ ಮಂತ್ರಿಗಳು ಬಂದರು, ಅದರ ಬಗ್ಗೆ ನಾನು ಹೇಳಬೇಕಾಗಿದೆ.

ಅಧ್ಯಕ್ಷರು : ಒಂದೊಂದು ಪಾಯಿಂಟ್ ಹೇಳುತ್ತಾ ಸರಸರನೆ ಮಾತನಾಡಿ ಮುಗಿಸಿ.

ಶ್ರೀ ಎಸ್.ಎಸ್.ಪಾಟೀಲ್ : ಆ ರೀತಿಯೇ ಮಾತನಾಡಿ ಮುಗಿಸುತ್ತೇನೆ. ಮುಗಿಸುವುದಿಲ್ಲ ಎಂದು ನಾನು ಹೇಳುವುದಿಲ್ಲ. ಈಗ ಸಮಾಜ ಕಲ್ಯಾಣ ಸಚಿವರು ಇಲ್ಲಿದ್ದಾರೆ. ಇವರಿಗೆ ನಾಲ್ಕು ವರ್ಷ ಎಸ್‌ಸಿ.ಎಸ್‌ಟಿ ಜನರು ಇವರ ಕಣ್ಣಿಗೇ ಕಾಣಲಿಲ್ಲ. ಎಲೆಕ್ಷನ್‌ಗೋಸ್ಕರ ಈಗ ಕಂಡುಬಿಟ್ಟಿದ್ದಾರೆ. ಪ್ರತಿ ವರ್ಷ ಹೇಳುತ್ತಾ ಬಂದಿರಿ. ಅವರಿಗೋಸ್ಕರ ಬೋರ್‌ವೆಲ್ ಹಾಕಬೇಕು, ಇನ್ನಷ್ಟು ಹೆಚ್ಚು ಮಾಡಿಕೊಡ್ರಿ ಕೃಷ್ಣಪ್ಪನವರೇ ಎಂದು ಕೇಳಿಕೊಂಡರೂ ಕೊಡಲಿಲ್ಲ. ಆದರೆ ಈ ವರ್ಷ ಒಮ್ಮೆಗೆ 50 ಸಾವಿರ ರೂ.ಗಳನ್ನು ಕೊಡುತ್ತಾರಂತೆ. ಅದನ್ನ ಕೊಡುತ್ತಾರೋ ಇಲ್ಲವೋ ಗೊತ್ತಿಲ್ಲ. 50 ಸಾವಿರ ರೂ.ಗಳನ್ನು ಕೊಡುತ್ತೇವೆ ಎಂದು ಹೇಳಿಬಿಡುವುದು, ಮುಂದೆ ಏನಾಗುತ್ತದೋ ದೇವರಿದ್ದಾನೆ. ಆದರೆ ಇವೊತ್ತು ಆ ರೀತಿ ಹೇಳಿಬಿಡೋಣ ಎಂದು ಹೇಳಿಬಿಟ್ಟಿದ್ದಾರೆ. ಆ ಜನರನ್ನು ಎಳೆದುಕೊಳ್ಳುವುದಕ್ಕಾಗಿ ಇವರು ಈ ರೀತಿ ಮಾಡತಕ್ಕಂಥ ಕೆಲಸವಾಗಿದೆ. 50 ಸಾವಿರ ರೂ.ಗಳನ್ನು ಕೊಡುವುದಕ್ಕೆ ನೀವು ಎಲ್ಲಿಂದ ದುಡ್ಡು ತರುತ್ತೀರಿ ? ಏನು ಮಾಡುತ್ತೀರಿ ? ನಾಲ್ಕು ವರ್ಷಗಳವರೆಗೆ ನೀವು ಏಕೆ ಇದನ್ನು ಮಾಡಲಿಲ್ಲ ? ಮಾನ್ಯ ಅಧ್ಯಕ್ಷರೇ, ನಾಲ್ಕು ವರ್ಷ ಇವರು ಮಾಡಲಿಲ್ಲ. ಈ ವರ್ಷ ಒಮ್ಮೆಗೆ 50 ಸಾವಿರ ರೂ.ಗಳನ್ನು ಕೊಡುತ್ತೇವೆಂದು ಹೇಳುತ್ತಿದ್ದಾರೆ. ಇದನ್ನು ಇವಾತ್ತೇ ಏಕೆ ಹೇಳಿದಿರಿ ? ಆಮೇಲೆ ಅದನ್ನೂ ಹೇಳಿಬಿಡುತ್ತೇನೆ. ಇವೊತ್ತು ಭೂಮಿಯಲ್ಲಿ ನೀರಿಲ್ಲ. ಬಹಳ ಎಚ್ಚರದಿಂದ ಇವನ್ನೆಲ್ಲಾ ನೀವು ಮಾಡಿ. ಇದರ ಬಗ್ಗೆಯೂ ಕೂಡ ನೋಡಿಕೊಂಡು ಎಚ್ಚರದಿಂದ ಹೇಳಬೇಕಾಗುತ್ತದೆ. ಸುಮ್ಮನೇ ಓಟಿಗೋಸ್ಕರ ಹೇಳುವುದಲ್ಲ. ಅಲ್ಲೆಲ್ಲಾ ಹೋಗಿ ನೋಡಿದರೆ ಹಿಂದೆ ಹಾಕಿದಂತ ಬೋರ್‌ವೆಲ್‌ಗಳೇ ಒಣಗಿಹೋಗಿಬಿಟ್ಟಿವೆ. ಹಿಂದೆ ನಾವಿದ್ದಾಗ ಅಂದರೆ ನಾಲ್ಕೈದು, ಎಂಟತ್ತು ವರ್ಷಗಳ ಹಿಂದೆ ಬೋರ್‌ವೆಲ್‌ಗಳನ್ನು ಏನು ಕೊರೆಯಲಾಗಿತ್ತೋ ಅವೆಲ್ಲವುಗಳೂ ಒಣಗಿಹೋಗಿವೆ. ಪುನಃ ನೀವು ಹತ್ತು ಸಾವಿರ ಯೋಜನೆಗಳನ್ನು ಎಲ್ಲಿ ಕೊರೆಯುತ್ತೀರಿ ? ಎಲ್ಲಿದೆ ಜಾಗ ನಿಮಗೆ ಸುಮ್ಮನೆ ಸುಳ್ಳು ಹೇಳುವುದು; ಕೊರೆಯುವುದಕ್ಕೆ ಜಾಗವೇ ಅಲ್ಲಿ ಇಲ್ಲ. ಒಂದು ವೇಳೆ ಕೊರೆದರೆ ಅವುಗಳೂ ಕೂಡ ಒಣಗಿ ಹೋಗುತ್ತವೆ. ಆದಕಾರಣ ದಯಮಾಡಿ ನೀವ ಸರ್ವೆ ಮಾಡಿಸಿ. ಇದೇನೋ ಒಳ್ಳೆಯ ಯೋಜನೆಯೇ ಆಗಿದೆ. ನಾನು ಇದಕ್ಕೆ ಸಪೋರ್ಟ್ ಮಾಡುತ್ತೇನೆ. ಆದರೆ ಸರ್ವೆ ಮಾಡಿಸಿ. ಇನ್ನೂ ಅವಶ್ಯಕತೆ ಇದೆ. ಬೇಕಾಗುತ್ತದೆ ಎಂದು ಕಂಡುಬಂದರೆ ಬೋರ್‌ವೆಲ್ ಕೊರೆಸಿ. ಆ ರೀತಿ ಮಾಡದಿದ್ದರೆ, ಆ ಕಡೆ ಅವನು ಕೊರೆಸಿದ್ದು ಈ ಕಡೆ ಇವನು ಕೊರೆಸಿದ್ದು ಕೂಡ ಒಣಗಿಹೋಗುತ್ತದೆ. ಮೊದಲು ಪಂಪ್‌ಸೆಟ್ ಏನಾದರೂ ಕೂರಿಸಿಕೊಂಡರೆ ಕೆ.ಇ.ಬಿ. ಯವರಿಗೆ ಏಳೂವರೆ ವರ್ಷಗಳ ಕಾಲ ಮಿನಿಮಮ್ ಚಾರ್ಜ್ ಕಟ್ಟಬೇಕಾಗುತ್ತದೆ. ಮಗ್ಗಲಿದವನಮ ಆದ್ದರಿಂದ ಒಂದು ಸಾವಿರ ಫೂಟ್ ಮೇಲೆ ಹೊಡೆದರೆ ಅವನೂ ಇವನೂ ಕೂಡಿಯೇ ಒಣಗಿ ಹೋಗುತ್ತಾರೆ. ಹೀಗಾಗಿ ಆದಕಾರಣ ಈ ಬಗ್ಗೆ ಸರ್ವೆ ಮಾಡಿಸಿ ತದನಂತರ ಮುಂದುವರೆಯಿರಿ. ಬೋರ್‌ವೆಲ್ ಕೊರೆಸುವುದಕ್ಕೆ ನನ್ನದೇನೂ ವಿರೋಧವಿಲ್ಲ. ನಾನು ಬಹಳ ಸಂತೋಷಪಡುತ್ತೇನೆ. ಇದು ಒಳ್ಳೆಯ ಯೋಜನೆ. ಇನ್ನು ಕುಡಿಯುವ ನೀರಿನ ಯೋಜನೆಗೆ ರೊಕ್ಕ ಕಡಿಮೆ ಮಾಡಿದ್ದಾರೆ. ಕುಡಿಯುವ ನೀರಿನ ಮಂತ್ರಿಗಳು ಬಜೆಟನ್ನು ನೋಡಿದ್ದಾರೆಯೇ ? ಬಜೆಟ್ ಮಂಡಿಸಿ [illegible]

ಕಳೆದ ವರ್ಷಕ್ಕಿಂತ ಕುಡಿಯುವ ನೀರಿನ ಯೋಜನೆಗೆ 400 ಕೋಟಿ ರೂಪಾಯಿಗಳು ಕಡಿಮೆಯಾಗಿದೆ. ಹೀಗಾದರೆ ಜನರಿಗೆ ನೀರನ್ನು ನೀವು ಎಲ್ಲಿಂದ ಕೊಡುತ್ತೀರಿ ? ಸುಮ್ಮನೆ ಇವರು ಯೋಜನೆ ಬಗ್ಗೆ ಹೇಳುತ್ತಾರೆ. ಆದರೆ ಯಾವ ಡಿ.ಸಿ. ಹತ್ತಿರವೂ ರೊಕ್ಕವಿಲ್ಲವಾಗಿದೆ. ಸುಮ್ಮನೆ ಇವರು ಇಲ್ಲಿಂದ ಒಂದು ಆರ್ಡರ್‌ನ್ನು ಕಳುಹಿಸಿರುತ್ತಾರೆ. ಕುಡಿಯುವ ನೀರಿನ ಯೋಜನೆಗೆ ಮುಂದಿನ ವರ್ಷ 400 ಕೋಟಿ ರೂಪಾಯಿ ಕಡಿಮೆಯಾಗುತ್ತದೆ. ಮಂತ್ರಿಗಳು ಅದನ್ನು ತೆಗೆದು ನೋಡಬೇಕು. ಆದ್ದರಿಂದ ತಾವು ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿ ಇದರಲ್ಲಿ ಸ್ವಲ್ಪ ಬದಲಾವಣೆ ಮಾಡಿಸಿ. ಏಕೆಂದರೆ ಎಲ್ಲಿಗೆ ಹೋದರೂ ಕುಡಿಯುವುದಕ್ಕೆ ನೀರಿಲ್ಲ. ನಿಮ್ಮ ರಾಣಿಬೆನ್ನೂರು ಹಾಗೂ ಮುಂಡರಗಿಯಲ್ಲಿ ಅದೇ ಪರಿಸ್ಥಿತಿ ಇದೆ. ಆದರೆ ಈ ಬಜೆಟ್‌ನಲ್ಲಿ ಇವರು ಕುಡಿಯುವ ನೀರಿನ ಯೋಜನೆಗೆ ಆದ್ಯತೆಯನ್ನು ಕೊಟ್ಟಿಲ್ಲ. ಈ ಎಲ್ಲಾ ಕಾರಣಗಳ ಹಿನ್ನಲೆಯಲ್ಲಿ...... ಅಧ್ಯಕ್ಷರೇ, ತಾವು ಬಿಲ್ ಮಾಡುತ್ತಿದ್ದೀರಿ, ಬೇಗ ಮುಗಿಸುತ್ತೇನೆ. ಇವರಿಗೆ ಎಷ್ಟು ಹೇಳಿದರೂ ಅಷ್ಟೇ ಆಗಿದೆ.

ಅಧ್ಯಕ್ಷರು : ಕಡೆಯಲ್ಲಿ ಒಂದು ವಚನ ಹೇಳಿ ಮುಗಿಸಿಬಿಡಿ.

ಶ್ರೀ ಎಸ್.ಎಸ್.ಪಾಟೀಲ್ : ಹೇಳುತ್ತೇನೆ. ಆದರೆ 'ಎನ್ಮಾಡೋದು. ಒಮ್ಮೊಮ್ಮೆ ತಾವು ಸಿಟ್ಟಿಗೆದ್ದು ಬೇರೆಯವರನ್ನು ಮಾತನಾಡಲು ಕರೆದುಬಿಡುತ್ತೀರಿ.

ಶ್ರೀ ಎಸ್.ಎಸ್.ಪಾಟೀಲ್ : ಹಾಗೇನಿಲ್ಲ. ನೀವು ವಚನ ಹೇಳಿಯೇ ಮುಗಿಸಿ. ಏಕೆಂದರೆ ವಚನವನ್ನು ಬಹಳ ಚೆನ್ನಾಗಿ ಹೇಳುತ್ತೀರಿ. ಕೇಳುವುದಕ್ಕೂ ಚೆನ್ನಾಗಿರುತ್ತದೆ.

ಶ್ರೀ ಎಸ್.ಎಸ್.ಪಾಟೀಲ್ : ನಾನು ಹೇಳುತ್ತಿರುವುದರಿಂದಲೆ ಸದನದಲ್ಲಿ ವಚನಗಳು ಬರುತ್ತಿರುವುದು. ಯಾವ ಸಂದರ್ಭದಲ್ಲಿ ಎಂದರೆ ಈ ಬಜೆಟ್‌ನ ಸಂದರ್ಭದಲ್ಲಿ. ಇದು ಒಳ್ಳೆಯ ಸೂಚನೆ. ಬಜೆಟ್ ಭಾಷಣದಲ್ಲಿ ವಚನ ಬರಬೇಕು. ನಾನು ನಿಜವಾಗಿ ಇದನ್ನು ಹೇಳುತ್ತಿದ್ದೇನೆ. ನಮ್ಮ ಡಿ.ವಿ.ಜಿ. ಯವರು, ಕುವೆಂಪುರವರು, ಇವರೆಲ್ಲರದ್ದೂ ಕೂಡ ಬರಬೇಕಾಗುತ್ತದೆ. ನಾನು ಬರಬಾರದು ಎಂದು ಹೇಳಲಿಲ್ಲ. ಇವೆಲ್ಲಾ ಬರಬೇಕು. ಬಹಳ ಸಂತೋಷವಾಗುತ್ತದೆ. ನಾನು ಹಿಂದೆ ಕೂಡ ಹೇಳಿದ್ದೇನೆ. ವಿಧಾನಸಭೆ, ವಿಧಾನ ಪರಿಷತ್ತು, ಲೋಕಸಭೆಗಳು ಅನುಭವ ಮಂಟಪಗಳಾಗಬೇಕು. ಇದನ್ನು ನಾನು ಹತ್ತು ಬಾರಿ ಹೇಳುತ್ತೇನೆ. ಇಲ್ಲಿ ನಡೆಯತಕ್ಕಂಥ ಚರ್ಚೆಗಳು ಬಹಳ ವಿಶಾಲವಾಗಿ ವ್ಯಾಪಕವಾಗಿ ನಡೆಯಬೇಕು. ಮಾನ್ಯ ಖರ್ಗೆಯವರು ಸಮಾಜದಲ್ಲಿ ಕ್ರಾಂತಿಯ ಬಗ್ಗೆ ಬಹಳ ಒಳ್ಳೆಯ ಪ್ರಾಮಾಣಿಕವಾದ ಮಾತನ್ನು ಹೇಳಿದರು. ಬಸವಣ್ಣನವರು ಯಾವುದೇ ಒಂದು ಸೀಮಿತ ವರ್ಗಕ್ಕೆ ಸೇರಿದವರಲ್ಲ. ಇಡೀ ತುಳಿಯಲ್ಪಟ್ಟಂಥ ಸಮಾಜದಲ್ಲಿ ಸಮಾನತೆಯನ್ನು ತಂದು ಬೆಳೆಸಿದಂಥವರು ಅವರು. ಅಂಥವನ್ನೆಲ್ಲಾ ನಾವು ಅನುಕರಣೆ ಮಾಡಿಕೊಳ್ಳಬೇಕಾಗುತ್ತದೆ. ಸುಮ್ಮನೇ ಯಾವುದೋ ಕಾಯಿದೆ ಮಾಡಿ ಕೇಸ್ ಹಾಕಿ ಆಟ್ರಾ ಸಿಟಿ ಕೇಸ್ ಹಾಕಿದರೆ ಅದು ಎಂದೂ ಮುಗಿಯುವುದಿಲ್ಲ. ಅದು ಮುಗಿಯದ ಕಥೆ. ಬಸವಣ್ಣನವರು ಕಂಡಂಥ ಸಮಾಜವನ್ನು ನಾವು ಕಾಣಬೇಕಾಗುತ್ತದೆ. ಅವರು ತೋರಿಸಿದ ದಾರಿಯಲ್ಲಿ ನಾವೆಲ್ಲರೂ ನಡೆಯುವುದಕ್ಕೆ ಪ್ರಯತ್ನ ಮಾಡಿದರೆ ಮಾತ್ರ ಎಲ್ಲರಿಗೂ ಇಂದು ಸಾಮಾಜಿಕ ನ್ಯಾಯವನ್ನು ಒದಗಿಸಿದಂತಾಗುತ್ತದೆ. ಸಮಾಜ ಕಲ್ಯಾಣ ಸಚಿವರಿಗೆ ಈ ಮಾತನ್ನು ಹೇಳುತ್ತಿದ್ದೇನೆ. ಬರೇ ಆಕ್ಟ್ ಮಾಡಿ ಕೇಸ್ ಹಾಕಿ ಅವರನ್ನು ಒಳಗೆ ಹಾಕಿ ಕೇಸ್ ನಡೆಸಿ ಎನ್ನುತ್ತಾ ಹೋದರೆ ಮತ್ತೆ ಊರಿನಲ್ಲಿ ಘರ್ಷಣೆಗಳು ನಡೆಯುತ್ತವೆ. ಆ ರೀತಿ ಆಗಬಾರದು. ಬಸವಣ್ಣನವರು ಕಂಡಂಥ ಸಮಾಜವನ್ನು ನಾವು ಕಾಣುವುದಕ್ಕೆ ಪ್ರಯತ್ನ ಮಾಡಬೇಕೇ ವಿನ: ಅದನ್ನು ಮಾಡದಿದ್ದರೆ ಖಂಡಿತವಾಗಿಯೂ ಇವೊತ್ತು ಶಾಂತಿ, ನೆಮ್ಮದಿ ಸಿಗುವುದಿಲ್ಲ ಎನ್ನುವ

ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಇನ್ನೂ ಅಂಗನವಾಡಿ ಟೀಚರ್‌ಗಳಿಗೆ ಪ್ರಮೋಶನ್ ನೀಡಿದ್ದಾರೆ. ಈಗ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆಯವರು ಇಲ್ಲಿ ಇಲ್ಲ. ಅಂಗನವಾಡಿ ಟೀಚರ್‌ಗಳಿಗೆ ಬಡ್ತಿ ಕೊಟ್ಟಿದ್ದಾರೆ. ಅವರು 15 ವರ್ಷ, 20 ವರ್ಷ ಸರ್ವೀಸ್ ಮಾಡಿರುತ್ತಾರೆ. ಇಲ್ಲಿ ಸದನದಲ್ಲಿ ಅಲ್ಪಸಂಖ್ಯಾತ ಹೆಣ್ಣು ಮಕ್ಕಳಿಗೆ ನಾವು ಒಳ್ಳೆಯದನ್ನು ಮಾಡುತ್ತೇವೆ. ಹಾಗೆ ಮಾಡುತ್ತೇವೆ, ಹೀಗೆ ಮಾಡುತ್ತೇವೆ ಎಂದು ಹೇಳುತ್ತೀರಿ. ಬಡ್ತಿ ಕೊಡುವುದಕ್ಕೆ ಅಲ್ಲೇನು ಮಾಡಿದ್ದಾರೆ ಎಂದರೆ ಒಂದು ಪರೀಕ್ಷೆಯನ್ನು ಇಟ್ಟಿದ್ದಾರೆ. ಏನೇ ಇದ್ದರೂ ಕೂಡ ಅಲ್ಪಸಂಖ್ಯಾತ ಹೆಣ್ಣು ಮಕ್ಕಳಿಗೆ ಕನ್ನಡ ಭಾಷೆ ಜ್ಞಾನ ಸ್ವಲ್ಪ ಕಡಿಮೆಯೇ ಇರುತ್ತದೆ. ಕನ್ನಡ ಬರೆಯುತ್ತಾರೆ. ಆದರೆ ಪರೀಕ್ಷೆಯಲ್ಲಿ ಫೇಲ್ ಆಗಿದ್ದಾರೆ ಎಂಬು ಅವರನ್ನು ತೆಗೆದರು. 15 ವರ್ಷ, 20 ವರ್ಷ ಸರ್ವೀಸ್ ಮಾಡಿ ಎಲಿಜಬಲ್ ಇದ್ದಾರೆ ಎಂದು ಮೊದಲು ಲಿಸ್ಟ್ ಹಚ್ಚಿದ್ದರು. ಆದರೆ ಮುಂದೆ ಒಂದು ಟೆಸ್ಟ್ ಎಂದು ಮಾಡಿದಾಗ ಕೆಲವರು ಫೇಲ್ ಆಗಿದ್ದಾರೆ. ಕೆಲವರಿಗೆ ಕನ್ನಡ ಸ್ವಲ್ಪ ಚೆನ್ನಾಗಿ ಬರೆಯುವುದಕ್ಕೆ ಬರುತ್ತಿರಲ್ಲಿಲ್ಲ. ಅಂಥವರನ್ನು ತೆಗೆದುಹಾಕಿದ್ದಾರೆ. ಅವರು 15 ರಿಂದ 20 ವರ್ಷ ಸರ್ವೀಸ್ ಮಾಡಿದ್ದರೂ ಟೆಸ್ಟ್‌ನಲ್ಲಿ ಫೇಲ್ ಆದರೂ ಎಂದು ತೆಗೆದು ಹಾಕಿದ್ದಾರೆ. ಅಂಥವರನ್ನು ಲಿಸ್ಟ್‌ನಲ್ಲಿ ಸೇರಿಸಬೇಕೆಂದು ಹೇಳಬಯಸುತ್ತೇನೆ. ಮಾನ್ಯ ಅಧ್ಯಕ್ಷರೇ, ಅವ್ವಾರವರು ಈಗ ಬಂದರು ನೋಡಿ. ಅವರೇನಾದರೂ ರಾಜೀನಾಮೆ ಕೊಟ್ಟು ಬಂದರೋ ಅಥವಾ ಹಾಗೆಯೇ ಬಂದರೋ ಗೊತ್ತಿಲ್ಲ. ಇವರು ಮಹಿಳೆಯರ ಕಲ್ಯಾಣವನ್ನು ಮಾಡುವವರು, ಮಹಿಳೆಯರ ಕುಣಿತ ನಾಗಮಂಗಲದಲ್ಲಿ ನಡೆದಿದೆ. ಮತ್ತೆ ಶಿಡ್ಲಘಟ್ಟದಲ್ಲಿ ಆಗಿದೆ. ಇನ್ನೊಂದು ವಿಚಾರವೆಂದರೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಸೂಪರ್‌ವೈಸರ್‌ನ್ನು 'ಏನು ನೇಮಕ ಮಾಡಿಕೊಳ್ಳಲು ಹೊರಟಿದ್ದೀರಿ ಅದರಲ್ಲಿ ಟೆಸ್ಟ್ ಎಂದು ಮಾಡಿ 15 ರಿಂದ 20 ವರ್ಷ ಸರ್ವೀಸ್ ಮಾಡಿರುವ ಮುಸ್ಲಿಂ ಮಹಿಳೆಯರನ್ನು ತೆಗೆದು ಹಾಕುವುದಕ್ಕೆ ಹೊರಟಿದ್ದೀರಿ. ಅವರಿಗೆ ಸ್ವಲ್ಪ ಕನ್ನಡ ಚೆನ್ನಾಗಿ ಬರದಿರಬಹುದು. ಶ್ರೀಮತಿ ಫಜಲ್‌ರವರು ಕೂಡ ಮಂತ್ರಿಗಳಾಗಿದ್ದಾರೆ. ಅವರಿಗೆ ನಿಮ್ಮ ಹಾಗೆ ಕನ್ನಡ ಬರುತ್ತದೆಯೆ ? ಬರುವುದಕ್ಕೆ ಸಾಧ್ಯವಿಲ್ಲ. ದಯವಿಟ್ಟು ನನ್ನ ಮನವಿಯನ್ನು ಕನ್ಸಿಡರ್ ಮಾಡಬೇಕು.

ಅಧ್ಯಕ್ಷರು : ಪಾಟೀಲರೇ, ನಾನು ಆಗಿನಿಂದ ನೋಡುತ್ತಿದ್ದೇನೆ. ಮಾತಾಡಿದ್ದೇನೇ ಮಾತನಾಡುತ್ತಿದ್ದೀರಿ. ಆ ವಿಷಯವನ್ನು ಈಗ ಮೂರನೇ ಬಾರಿ ಹೇಳುತ್ತಿದ್ದೀರಿ.

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೇ, ಈಗ ಮಹಿಳೆಯರ ಬಗ್ಗೆ ಪಾಪ ಅವರು ಬಹಳ ಆತಂಕಗೊಂಡು ಕರುಣೆಯಿಂದ

12.20 ಪಿ.ಎಂ.

ಮಾತನಾಡುತ್ತಿದ್ದಾರೆ. ಈ ನೃತ್ಯಗಳು ಇದಕ್ಕೆಲ್ಲಾ ರಾಜೀನಾಮೆ ಕೊಡಬೇಕೆಂದು ಹೇಳುತ್ತಿದ್ದಾರೆ. ದಿನನಿತ್ಯ ಹೊಸ ಹೊಸ ಸಿನಿಮಾದಲ್ಲಿ ನೋಡಿದರೆ ಗಂಡಸರಿಗೆ ಪೂರ್ತಿ ಡ್ರೆಸ್ ಹಾಕಿರುತ್ತಾರೆ, ಆದರೆ ಹೆಣ್ಣುಮಕ್ಕಳಿಗೆ ಅರೆಬೆತ್ತಲೆ ಕುಣಿಸುತ್ತಾರೆ. ಅದರ ಬಗ್ಗೆ ಒಬ್ಬ ಗಂಡಸರು ಚಕಾರ ಎತ್ತುವುದಿಲ್ಲ. ಮತ್ತೆ ಈ ರಾಜ್ಯದಲ್ಲಿ ಬೇರೆ ಬೇರೆ ಕಡೆ ಹೆಣ್ಣುಮಕ್ಕಳ ಬೆತ್ತಲ ಮೆರವಣಿಗೆ ಆಯಿತು. ಅದು ಬಳ್ಳಾರಿಯಲ್ಲಿ ಇರಬಹುದು. ಆಗ ತಾವು ಏಕೆ ಧ್ವನಿ ಎತ್ತಲಿಲ್ಲ ? ಹೇಳಿ, ನೀವು ಮಾತನಾಡುವುದು ತಪ್ಪು ಎಂದು ಹೇಳುವುದಿಲ್ಲ. ಇದಕೋಸ್ಕರ ನಮ್ಮನ್ನು ರಾಜೀನಾಮೆ ಕೊಡಿ ಎಂದು ಏಕೆ ಕೇಳುತ್ತೀರಿ ?

ಶ್ರೀ ಎಸ್.ಎಸ್.ಪಾಟೀಲ್ : ನೋಡಿ ಸಮರ್ಥನೆ ಹೇಗೆ ಮಾಡಿಕೊಳ್ಳುತ್ತಾರೆ.

ಶ್ರೀಮತಿ ಮೋಟಮ್ಮ : ಇದು ಸಮರ್ಥನೆ ಪ್ರಶ್ನೆ ಅಲ್ಲ.

ಅಧ್ಯಕ್ಷರು : ಮೊನ್ನೆ ದಿವಸವೇ ಪ್ರೊಟೆಸ್ಟ್ ಮಾಡಿದ್ದಾರೆ.

ಶ್ರೀಮತಿ ಮೋಟಮ್ಮ : ಎಲ್ಲಾ ಸಂದರ್ಭದಲ್ಲಿ ಅರೆಬೆತ್ತಲೆ ಇರಬಹುದು. ಯಾವುದೇ ಇರಬಹುದು, ಅದನ್ನು ಪ್ರತಿಯೊಬ್ಬ ಗಂಡಸರು ಕೂಡ ಇದು ಸರಿಯಲ್ಲವೆಂದು ವಿರೋಧ ಮಾಡಬೇಕು. ಆದರೆ ಸಿನಿಮಾದಲ್ಲಿ ನೋಡಿಕೊಂಡು ಕೂತಿರುತ್ತೀರಿ. ಊರಿನಲ್ಲೆ ಬೆತ್ತಲೆ ಮೆರವಣಿಗೆ ಆದರೆ ಚಿತ್ರದುರ್ಗದಲ್ಲಿ. ರಾಯಚೂರಿನಲ್ಲಿ ಒಬ್ಬ ಟೀಚರ್ ಮಾಡಿದರು. ಆ ಟೀಚರ್ ಅನ್ನು ಕೆಲಸದಿಂದ ತೆಗೆಯಿರಿ ಎಂದು ಯಾರೂ ಕೂಡ ಸೆಷನ್‌ರೀನ ಮಾತನಾಡಲಿಲ್ಲ.

ಶ್ರೀ ಎಸ್.ಎಸ್.ಪಾಟೀಲ್ : ಈ ದೇಶದ ಪ್ರಧಾನಿಯಾಗಿ ಲಾಲ್ ಬಹದ್ದೂರ್ ಶಾಸ್ತ್ರಿಯವರು ಇದ್ದರು. ಅವರು ಮಾದರಿ ಪ್ರಧಾನಿಯಾಗಿ ಹೋದರು. ಅವರು ರೈಲ್ವೆ ಸಚಿವರಾಗಿದ್ದರು. ಆಗ ಒಂದು ಸಣ್ಣ ಆಕ್ಸಿಡೆಂಟ್ ಆಯಿತು ಅವರು ತಕ್ಷಣ ರಾಜಿನಾಮೆ ಕೊಟ್ಟರು. ನೀವು ಒಬ್ಬ ಮಹಿಳಾ ಅಭಿವೃದ್ಧಿ ಸಚಿವರಾಗಿ, ಮಹಿಳೆಯರಿಗೆ ಅವಮಾನವಾಗುತ್ತಿರುವುದು ಟಿ.ವಿ ಯಲ್ಲಿ ಪ್ರತಿದಿವಸ ಬರುತ್ತಿದೆ. ಇದನ್ನು ನೋಡಿ ನಿಮಗೆ ಸಹಿಸಿಕೊಳ್ಳುವುದಕಾ ಆಯಿತಾ ? ನೀವು ನೈತಿಕ ಹೊಣೆ ಹೊತ್ತು ರಾಜೀನಾಮೆ ಕೊಡಲೇಬೇಕಾಗಿತ್ತು.

ಶ್ರೀಮತಿ ಮೋಟಮ್ಮ : ನನಗೆ ಸಂಬಂಧಪಟ್ಟಿದ್ದು ಎಂದು ನಾನು ಹೇಳುತ್ತಿಲ್ಲ. ಹಾಗಾದರೆ ಆರ್ಕೆಸ್ಟ್ರಾದಲ್ಲಿ ಡ್ಯಾನ್ಸ್ ಮಾಡಿಸುವುದಕ್ಕೆ 'ಏಕೆ ಒಪ್ಪಿಕೊಳ್ಳುತ್ತೀರಾ ? ಅದನ್ನು ಮೊದಲು ನೀವು ಹೇಳಿ.

ಅಧ್ಯಕ್ಷರು : ತಾವು ಮುಗಿಸುತ್ತೀರೋ ಇಲ್ಲವೋ ಹೇಳಿ ಪಾಟೀಲರೆ.

ಶ್ರೀ ಶ್ರೀನಿವಾಸ ಗೌಡ ಕುದುವನಹಳ್ಳಿ : ಇವರು ಕ್ಯಾಬರೆ ಕೂಡ ನೋಡಿಲ್ಲ. ಸುಮ್ಮನೆ ಕ್ಯಾಬರೆ ಮೇಲೆ ಮಾತನಾಡುತ್ತಾರೆ.

ಅಧ್ಯಕ್ಷರು : ಚೆನ್ನಿಗಪ್ಪನವರೆ, ತಾವು ಪ್ರಾರಂಭ ಮಾಡಿ. ನೀವು ಪ್ರಾರಂಭ ಮಾಡದೆ ಇದ್ದರೆ ನಿಮ್ಮ ಪಾರ್ಟಿಗೆ ಚಾನ್ಸ್ ಹೊರಟು ಹೋಗುತ್ತದೆ. ಇನ್ನೊಂದು ರೌಂಡ್ ಬರಬೇಕಾದರೆ 2–3 ಗಂಟೆ ಆಗುತ್ತದೆ.

ಶ್ರೀ ಎಸ್.ಎಸ್.ಪಾಟೀಲ್ : ಮಾನ್ಯ ಅಧ್ಯಕ್ಷರೆ, ಬಸವಣ್ಣನವರು ಒಂದು ಕಡೆ ಹೇಳುತ್ತಾರೆ, ಹೊಡೆಸಿಕೊಂಡು ಹೋದ ನಾಯಿ ಮೊಲವನ್ನೇನು ಹಿಡಿಯಬಲ್ಲದಯ್ಯಾ ಎಂದು ಈ ರಾಜ್ಯದ ಜನ ಇದು ಬೇಟೆ ನಾಯಿ ಎಂದು ತಿಳಿದುಕೊಂಡರು. ಇದನ್ನು ಬಹಳ ಚೆನ್ನಾಗಿ ಹಿಡಿಯಬಹುದು. ಮುಂದೆ ನಡೆಯಬಹುದು ಎಂಬುದು ಇವರ ಭಾವನೆ. ಆದರೆ ಇದು ಹೊರಿಸಿಕೊಂಡು ಹೋದ ನಾಯಿಯಾಗಿದೆ. ನಿನ್ನೆ ನಾನು ಹೇಳಿದೆ, ಅಕ್ಷರ ದಾಸೋಹದಲ್ಲಿ ಅನ್ನವನ್ನು ನೀಡುವುದರ ಬಗ್ಗೆ ಹೇಳಿದ್ದಾರಲ್ಲಾ, 'ವಿದ್ಯೆ ಹೇಳದ ಗುರು, ಬುದ್ಧಿ ಹೇಳದ ತಂದೆ, ಬಿದ್ದರೂ ಎದ್ದು ಬಂದು ನೋಡದ ತಾಯಿ. ಇವು ಮೂರ ಶುದ್ಧ ವೈರಿಗಳು ಸರ್ವಜ್ಞ ಎಂದು ಹೇಳುತ್ತಾರೆ. ಹಾಗೆ ಆ ಶಿಕ್ಷಕರು ವಿದ್ಯೆಯ ಹೇಳುವುದಿಲ್ಲ, ಬರಿ ಅನ್ನ ಮಾಡುವ ಕೆಲಸವೇ ಆಗಿದೆ. ಅಕ್ಷರ ದಾಸೋಹ ಎಂದರೆ ಅಕ್ಷರ ಜ್ಞಾನ ಬರಬೇಕಾಗುತ್ತದೆ. ಬರೀ ಅನ್ನ ಹಾಕಿದರೆ ಅಲ್ಲ, ಅಕ್ಷರ ಇಲ್ಲ. ಶಿಕ್ಷಕರಿಗೆ ಆ ಕಡೆ ಗಮನ ಇಲ್ಲ. ಅದನ್ನು ಮಾಡಬೇಕಾಗುತ್ತದೆ. ಇನ್ನು ಇವರ ಬಜೆಟ್ ಬಗ್ಗೆ ಹೇಳುವುದಾದರೆ,

ಬಚ್ಚಲ ನೀರು ತಿಳಿ ಇದ್ದರೇನು
ಸಲ್ಲದ ಹೊನ್ನು ಮತ್ತೆ ಎಲ್ಲಿದ್ದರೆ ಏನು
ಆಕಾಶದ ಮಾವಿನ ಫಲವೆಂದರೆ ಏನು

ಕೊಯ್ಯುವುದಿಲ್ಲ ಮೆಲ್ಲಲಿಲ್ಲ,
ಕೂಡಲ ಸಂಗನ ಶರಣರ
ಅನುಭವ ಇಲ್ಲದವರು
ಎಲ್ಲಿದ್ದರೇನು, ಎಂತಾದರೇನು ?

ಆಕಾಶದ ಮಾವಿನ ಫಲ ಕೊಯ್ಯುವುದಕ್ಕೆ ಆಗುವುದಿಲ್ಲ, ತಿನ್ನುವುದಕ್ಕೆ ಆಗುವುದಿಲ್ಲ, ಅಂತಹ ಒಂದು ಬಜೆಟ್ ಅನ್ನು ಇವರು ಮಂಡಿಸಿದ್ದಾರೆ. ಆ ಕಾರಣದಿಂದ ನಿಜವಾಗಿಯೂ ಇದನ್ನು ಬದಲಾವಣೆ ಮಾಡಿ ಪುನಃ ಬಜೆಟನ್ನು ಮಂಡಿಸಬೇಕು. ನಾವು ಹೇಳಿದ ಕೆಲವು ಮಾತುಗಳನ್ನು ಉಳಿಸಿಕೊಳ್ಳಬೇಕೆಂದು ಹೇಳಿ ಇವರು ಮಂಡಿಸಿದಂತಹ ಬಜೆಟ್ ಅನ್ನು ವಿರೋಧಿಸಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ತಮ್ಮಣ್ಣನವರೆ, ತಾವು ಮಾತನಾಡುತ್ತೇನೆಂದು ಹೆಸರು ಕಳುಹಿಸಿದ್ದೀರಿ. ಮಾತಾನಾಡುವುದಾದರೆ ಹತ್ತು ನಿಮಿಷ ಮಾತನಾಡಿ.

†ಶ್ರೀ ಡಿ.ಸಿ.ತಮ್ಮಣ್ಣ(ಕಿರುಗಾವಲು) : ಮಾನ್ಯ ಅಧ್ಯಕ್ಷರೆ, 2004–05ನೇ ಸಾಲಿನ ಆಯವ್ಯಯದ ಬಗ್ಗೆ ಮಾತನಾಡುವುದಕ್ಕೆ ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಅರ್ಪಿಸಿ ನಾನು ಕೆಲವೇ ವಿಚಾರಗಳ ಬಗ್ಗೆ ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ನಾನು ಮುಖ್ಯವಾಗಿ ಕುಡಿಯುವ ನೀರು, ನೀರಾವರಿ, ಕೈಗಾರಿಕೆ ಹಾಗೂ ವ್ಯವಸಾಯ ಈ ವಿಷಯಗಳ ಬಗ್ಗೆ ನನಗೆ ತಿಳಿದಂತಹ ಕೆಲವು ಮಾಹಿತಿಗಳನ್ನು ಈ ಸಭೆಯ ಮುಂದೆ ಇಡಲು ಇಚ್ಛೆಪಡುತ್ತೇನೆ. ಕುಡಿಯುವ ನೀರಿನ ಬಗ್ಗೆ ಈಗಾಗಲೇ ಅನೇಕ ವಿರೋಧ ಪಕ್ಷದ ಹಿರಿಯ ಸದಸ್ಯರು ಸದನದ ಗಮನವನ್ನು ಸೆಳೆದು, ಸತತವಾಗಿ ನಾಲ್ಕು ವರ್ಷಗಳಿಂದ ಈ ಕರ್ನಾಟಕದಲ್ಲಿ ಹಾಗೂ ರಾಷ್ಟ್ರದಲ್ಲಿ ಉದ್ಭವಿಸಿರುವಂತಹ ಬರಗಾಲದ ಪರಿಸ್ಥಿತಿಯಲ್ಲಿ ನೀರಿನ ಸದ್ಬಳಕೆ ಹಾಗೂ ನೀರಿನ ಸಂಗ್ರಹಣೆ ಬಗ್ಗೆ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ನಮ್ಮ ಸರ್ಕಾರ ಇದನ್ನು ಅರಿತು ಈಗಾಗಲೇ ನೀರಿನ ಸದ್ಬಳಕೆ ಬಗ್ಗೆ, ಅದು ಹೈಡ್ರೋ ಫಾಕ್ಟರಿಗೆ ಇರಬಹುದು ಅಥವಾ ನೀರಿನ ಸಂಗ್ರಹಣೆ ಮಾಡುವುದಕ್ಕೆ ಚೆಕ್ ಡ್ಯಾಮ್‌ಗಳನ್ನು ನಿರ್ಮಾಣ ಮಾಡುವಂತಾದ್ದು ಇರಬಹುದು, ಇದರ ಬಗ್ಗೆ ಕ್ರಮಗಳನ್ನು ತೆಗೆದುಕೊಂಡು 115 ಕೋಟಿ ರೂಪಾಯಿಗಳನ್ನು ಈಗಾಗಲೇ ಅದಕ್ಕೆ ಮೀಸಲಿಟ್ಟಿದೆ.

(ಶ್ರೀ ಯು.ಆರ್. ಸಭಾಪತಿಯವರು ಅಧ್ಯಕ್ಷ ಪೀಠವನ್ನಲಂಕರಿಸಿದ್ದಾರೆ)

ವಿಶ್ವ ಬ್ಯಾಂಕ್ ಯೋಜನೆಯಡಿಯಲ್ಲಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕೆರೆಗಳ ಹೂಳೆತ್ತುವಂತಹ ಕಾರ್ಯಕ್ರಮವನ್ನೂ ಕೂಡ ಹಮ್ಮಿಕೊಂಡಿದೆ. ನೀರು ಮನುಷ್ಯನಿಗೆ ಬಹಳ ಮುಖ್ಯವಾಗಿ ಬೇಕಾದಂತಹ ವಸ್ತು. ಆಹಾರ ಇಲ್ಲದೆ ಇದ್ದರೂ ಕೂಡ ಮನುಷ್ಯ ಒಂದು ವಾರ ಜೀವನ ಮಾಡಬಹುದು, ಆದರೆ ನೀರು ಇಲ್ಲದೆ ಜೀವನ ಮಾಡುವುದಕ್ಕೆ ಆಗುವುದಿಲ್ಲ. ಕಳೆದ 30 ವರ್ಷಗಳಿಂದ ನಾವು ರಾಜ್ಯದಲ್ಲಿ ನೋಡಿದರೆ ಮಳೆಯ ಪ್ರಮಾಣ ಬರು ಬರುತ್ತಾ ಕಡಿಮೆಯಾಗುತ್ತಿದೆ. ಈ ಪ್ರಮಾಣದ ಮುಂದಿನ ದಿವಸಗಳಲ್ಲಿ ಜಾಸ್ತಿಯಾಗುತ್ತದೆಂದು ನಾವು ಭಾವಿಸುವುದಕ್ಕಾಗುವುದಿಲ್ಲ. ಇದರ ಬಗ್ಗೆ ನಾವು ಸದನದಲ್ಲಿ ಚಿಂತನೆ ಮಾಡಬೇಕಾಗಿದೆ. ಮುಂದಿನ ದಿನಗಳಲ್ಲಿ ಈ ರಾಜ್ಯದಲ್ಲಿ ಕುಡಿಯುವ ನೀರಿನ ಬವಣೆ ಹಾಗೂ ನೀರಾವರಿ ಸೌಕರ್ಯವನ್ನು ನಾವು ಹೆಚ್ಚಿಸಬೇಕಾದರೆ ಈ ಅಮೂಲ್ಯವಾದ ನೀರನ್ನು ಹೇಗೆ ಶೇಖರಣೆ ಮಾಡಬೇಕು, ಹೇಗೆ ಮಿತವಾಗಿ ಬಳಸಿಕೊಳ್ಳಬೇಕು

(†ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಮತ್ತು ಭಾಷಣವನ್ನು ಪುರಸ್ಕರಿಸಿಲ್ಲವೆಂದು ಸೂಚಿಸುತ್ತದೆ)

ಎನ್ನುವದನ್ನು ಕೂಡ ಸದನದಲ್ಲಿ ಚಿಂತನೆ ಮಾಡಬೇಕಾಗಿ ಇದಕ್ಕೆಲ್ಲಾ ಬರೀ ಹಣದ ಸಹಾಯ ಒದಗಿಸಿದರೆ ಅಷ್ಟೇ ಸಾಲದು. ಇರುವಂತಾದ್ದನ್ನು ಉಳಿಸಿಕೊಂಡು ಅದನ್ನು ಸದ್ಬಳಕೆ ಮಾಡುವಂತಹ ದಿಸೆಯಲ್ಲಿ ಎಲ್ಲಾ ಸದಸ್ಯರೂ ಕೂಡ ಚಿಂತನೆ ಮಾಡಬೇಕಾಗಿದೆ. ಈ ನೀರಿನ ಬವಣೆ ಜನಸಂಖ್ಯೆಯ ಹೆಚ್ಚಳ ಆದಂತೆ ಕೂಡ ಔದ್ಯೋಗಿಕ ಪ್ರಗತಿ ಆದಹಾಗೆ ನೀರಿನ ಬಳಕೆ ಪ್ರಮಾಣ ಕೂಡ ಹೆಚ್ಚುತ್ತದೆ. ಆದರೆ ಮಳೆಯ ಪ್ರಮಾಣ ಕಡಿಮೆ ಆಗುತ್ತಿರುವುದಕ್ಕೆ ಕಾರಣ ನಾವು ಪರಿಸರದ ಮೇಲೆ ಮಾಡಿದಂತಹ ದೌರ್ಜನ್ಯ. ಪ್ರಪಂಚದಲ್ಲಿ ಭೂಮಿಯ ಮೇಲೆ 66 ಪರ್ಸೆಂಟ್ ಇದ್ದಂತಹ ಅರಣ್ಯ ಪ್ರದೇಶವನ್ನು ನಾಶ ಮಾಡಿ ಅದನ್ನು 11 ಪರ್ಸೆಂಟ್‌ಗೆ ಇಳಿಸಿದ್ದೇವೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಇವತ್ತಿನ ದಿವಸ ತೆಗೆದು ಕೊಂಡರೆ 22 ಪರ್ಸೆಂಟ್‌ನಿಂದ ಇನ್ನೂ ಕಡಿಮೆ ಪ್ರಮಾಣಕ್ಕೆ ಬಂದಿದೆ. ಪ್ರಪಂಚದಲ್ಲಿ ಸಿಗುವಂತಹ ನೀರಿನ ಶೇಕಡವಾರು ಪ್ರಮಾಣದಲ್ಲಿ 97 ಭಾಗ ಸಮುದ್ರದಲ್ಲಿ ಇದೆ. ಇನ್ನು ಉಳಿದಂತಹ ಮೂರು ಭಾಗದಲ್ಲಿ ಒಂದು ಭಾಗ ಕುಡಿಯುವುದಕ್ಕೆ ಹಾಗೂ ಎರಡು ಭಾಗ ನೀರಾವರಿ ಮತ್ತು ಔದ್ಯೋಗಿಕರಣಕ್ಕೆ ಉಪಯೋಗವಾಗುತ್ತಿದೆ. ಕೇವಲ ಮೂರು ಭಾಗದಲ್ಲಿ ಸಿಗುವ ನೀರನ್ನು ಸರಿಯಾಗಿ ಕೂಡ ಉಪಯೋಗ ಮಾಡದೆ ಇದ್ದರೆ ಮುಂದಿನ ದಿವಸದಲ್ಲಿ ರಾಷ್ಟ್ರ ಹಾಗೂ ರಾಜ್ಯದಲ್ಲಿ ತೀವ್ರವಾಗಿ ನೀರಿನ ಕೊರತೆಯನ್ನು ಅನುಭವಿಸಬೇಕಾಗುತ್ತದೆ. ಇದನ್ನು ಹೇಳುತ್ತಾ ಈ ನೀರಿನ ಸದ್ಬಳಕೆ ಮಾಡಿಕೊಳ್ಳಬೇಕಾದರೆ ಈಗ ಲಭ್ಯವಿರುವ ನೀರನ್ನು ಹೇಗೆ ಸಂಗ್ರಹ ಮಾಡಬೇಕು ? ಅಗತ್ಯವಿರುವಂತಹ ನೀರನ್ನು ಹೇಗೆ ಉಪಯೋಗ ಮಾಡಿಕೊಳ್ಳಬೇಕು ಎನ್ನುವುದರ ಬಗ್ಗೆ ನಾವೆಲ್ಲರೂ ಚಿಂತನೆ ಮಾಡಬೇಕಾಗಿದೆ. ಚೀನಾ ದೇಶಕ್ಕೆ ನಾನು ಎರಡು ಸಲ ಹೋಗುವಂತಹ ಅವಕಾಶ ಸಿಕ್ಕಿತ್ತು. ಅದರೆ ಅಲ್ಲಿ ಯಾವುದೇ ಒಂದು ವ್ಯವಸಾಯದ ಭೂಮಿಯಲ್ಲಿ ಐವತ್ತು ಎಕರೆ ಇದ್ದರೆ ಒಂದು ಕೊಳವನ್ನು ಅಲ್ಲಿ ನಿರ್ಮಾಣ ಮಾಡಿರುತ್ತಾರೆ. ಆ ಕೊಳದಿಂದ ಭೂಮಿಗೆ ನೀರನ್ನು ಇಳಿಸಿಕೊಳ್ಳುವಂತಹ ವ್ಯವಸ್ಥೆಯನ್ನು ಮಾಡಿದ್ದಾರೆ. ಆದರೆ ನಮ್ಮಲ್ಲಿ ಅಂತಹ ವ್ಯವಸ್ಥೆ ಇವತ್ತು ಎಲ್ಲಿಯಾ ಕೂಡ ನೋಡುವುದಕ್ಕೆ ಸಾಧ್ಯವಿಲ್ಲ. ಹಳ್ಳಗಳಿಗೆ ಒಡ್ಡುಗಳನ್ನು ನಿರ್ಮಾಣ ಮಾಡುವುದು, ನೀರನ್ನು ಶೇಖರಣೆ ಮಾಡುವುದು, ಇಂತಹ ಪದ್ಧತಿಗಳನ್ನು ನಾವು ಬೆಳೆಸಿಕೊಂಡು ಕುಡಿಯುವ ನೀರಿಗೆ ಮತ್ತು ನೀರಾವರಿಗೆ ಹೆಚ್ಚಿನ ಸೌಕರ್ಯವನ್ನು ನಾವು ಮುಂದಿನ ದಿವಸಗಳಲ್ಲಿ ಒದಗಿಸಿಕೊಳ್ಳಬೇಕಾಗಿದೆ. ಇವತ್ತಿನ ದಿವಸ ಹಳ್ಳಿಗಳಲ್ಲಿ ಬೇರೆ ಕಡೆಯಿಂದ ಕುಡಿಯುವ ನೀರನ್ನು ತಂದು ವ್ಯವಸ್ಥೆ ಮಾಡಬೇಕಾದಂತಹ ಪದ್ಧತಿಯನ್ನು ನಾವು ಮಾಡಬೇಕಾಗುತ್ತದೆ. ನಮ್ಮ ಮಂಡ್ಯ ಜಿಲ್ಲೆಯಲ್ಲಿ ವ್ಯವಸಾಯ ಪದ್ಧತಿಯನ್ನು ಅನುಸರಿಸುತ್ತಾ ಇದ್ದರೂ ಕೂಡ ನೀರಾವರಿ ಇರುವಂತಹ ಪ್ರದೇಶದಲ್ಲಿ ಕೂಡ ಕುಡಿಯುವ ನೀರು ನಮಗೆ ಲಭ್ಯವಾಗುತ್ತಿಲ್ಲ. 1980ರ ದಶಕದಲ್ಲಿ ಕೊಳವೆ ಬಾವಿಯಲ್ಲಿ 150 ರಿಂದ 200 ಅಡಿಗೆ ಸಿಗುತ್ತಿದ್ದ ನೀರು ಇವತ್ತಿನ ದಿವಸ 400 ರಿಂದ 600 ಅಡಿಗೆ ಹೋಗಿಬಿಟ್ಟಿದೆ. ಆದರೆ ನಮ್ಮ ಜಿಲ್ಲೆಯಲ್ಲಿ 60 ವರ್ಷದಿಂದ ಸತತವಾಗಿ ನಾವೇನು ರಸಗೊಬ್ಬರಗಳನ್ನು ಗದ್ದೆಗಳಲ್ಲಿ ಸುರಿದಿದ್ದೇವೆ ಅದರ ಪರಿಣಾಮದಿಂದಾಗಿ ಶೇಕಡ 60 ಭಾಗ ಕೊಳವೆ ಬಾವಿಗಳಲ್ಲಿ ನೀರು ಶುದ್ಧವಾಗಿಲ್ಲ. ಒಂದಲ್ಲ ಒಂದು ಲವಣಾಂಶಗಳು ಜಾಸ್ತಿ ಇವೆ. ಒಂದರಲ್ಲಿ ಪೊಟ್ಯಾಷ್ ಜಾಸ್ತಿ ಇದ್ದರೆ, ಇನ್ನೊಂದರಲ್ಲಿ ಸಲ್ಫೇಡ್ ಜಾಸ್ತಿ ಇರುತ್ತದೆ. ಮತ್ತೊಂದರಲ್ಲಿ ಕ್ಲೋರೈಡ್ ಜಾಸ್ತಿ ಇರುತ್ತದೆ. ಹೀಗಾಗಿ ಕೊಳವೆ ಬಾವಿಗಳಲ್ಲಿ ಸಿಗುವಂತಹ ನೀರು ಕೂಡ ಶುದ್ಧವಾಗಿಲ್ಲ, ಎಲ್ಲೆಲ್ಲಿ ನೀರಾವರಿ ಪ್ರದೇಶಗಳು ಹೆಚ್ಚಿಗೆ ಇವೆಯೋ, ಎಲ್ಲೆಲ್ಲೀ 20–30ವರ್ಷಗಳಿಂದ ಸತತವಾಗಿ ಜಮೀನುಗಳಲ್ಲಿ ರಸಗೊಬ್ಬರವನ್ನು ಸುರಿದಿದ್ದಾರೋ, ಅಂತಹ ಪ್ರದೇಶಗಳಲ್ಲಿ ಸಿಗುವಂತಹ ಕೊಳವೆ ಬಾವಿಗಳ ನೀರು ಶುದ್ಧವಾಗಿಲ್ಲ. ನಾನು ಶಾಸಕನಾದ ಬಳಿಕ ಕಳೆದ ನಾಲ್ಕುವರೆ ವರ್ಷಗಳಿಂದ

ಪರೀಕ್ಷೆ ಮಾಡಿ ನೋಡಿದ ಮೇಲೆ ಶೇ.60ರಷ್ಟು ಕೊಳವೆ ಬಾವಿಗಳಲ್ಲಿ ಸಿಗುವಂತಹ ನೀರು ಶುದ್ಧವಾಗಿಲ್ಲ. ಆದುದರಿಂದ ನಾವು ಇವತ್ತಿನ ದಿವಸಗಳಲ್ಲಿ ಬರೀ ಕೊಳವೆ ಬಾವಿಗಳ ಮೂಲಕ ಹಳ್ಳಿಗಾಡಿನ ಪ್ರದೇಶಗಳಿಗೆ ಕುಡಿಯುವ ನೀರನ್ನು ಕೊಡುತ್ತೇವೆಂದು ಹೇಳಿದರೆ, ಇದು ಮೂರ್ಖತನವಾಗುತ್ತದೆಂದು ನಾನು ಭಾವಿಸಿಕೊಂಡಿದ್ದೇನೆ. ಆದುದರಿಂದ ಶಾಶ್ವತವಾದಂತಹ ಕುಡಿಯುವ ನೀರಿನ ವ್ಯವಸ್ಥೆ ಹಳ್ಳಿಗಾಡಿನ ಪ್ರದೇಶಗಳಿಗೆ ಆಗಬೇಕು, ನಾವು ಪಟ್ಟಣ ಪ್ರದೇಶಗಳಿಗೆ ಹೇಗೆ ಶುದ್ಧವಾದಂತಹ ನೀರನ್ನು ಸರಬರಾಜು ಮಾಡುತ್ತೇವೆಯೋ, ಅದೇ ರೀತಿಯಲ್ಲಿ ಎಲ್ಲೆಲ್ಲಿ ಶಾಶ್ವತವಾದಂತಹ ನದಿಗಳ ಮೂಲಗಳಿವೆಯೋ, ಅಥವಾ ಕೆರೆಗಳ ಮೂಲವಿದೆಯೋ, ಅಂಥ ಕಡೆಗಳಲ್ಲಿ 10–20 ಹಳ್ಳಿಗಳನ್ನು ಸೇರಿಸಿ ಶಾಶ್ವತವಾದಂತಹ ಕುಡಿಯುವ ನೀರಿನ ವ್ಯವಸ್ಥೆಯಾಗಬೇಕು, ಇದು ಆದರೆ ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಮುಂದಿನ ದಿವಸಗಳಲ್ಲಿ ಪರಿಹಾರವಾಗುತ್ತದೆಂದು ನಾನು ಭಾವಿಸಿಕೊಂಡಿದ್ದೇನೆ. ಇನ್ನು ಮದ್ದೂರು ಪಟ್ಟಣಕ್ಕೆ ನೀರು ಸರಬರಾಜು ಮಾಡುವ ನೀರು ಸರಬರಾಜು ಯೋಜನೆಯಡಿಯಲ್ಲಿ ನನ್ನ ಕ್ಷೇತ್ರದ 42 ಹಳ್ಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಲಾಗಿದೆ. ಅದಕ್ಕೆ ಇನ್‌ಶೀಯಲ್ ಕಾಸ್ಟ್ ಜಾಸ್ತಿಯಾದರೂ ಕೂಡ ಇದು 60 ವರ್ಷಗಳ ಯೋಜನೆಯಾಗಿದೆ, ಈ ಯೋಜನೆಯಲ್ಲಿ ಮುಂದಿನ ದಿವಸಗಳಲ್ಲಿ ಶಾಶ್ವತವಾಗಿ ಅಲ್ಲಿನ ಜನರಿಗೆ ಕುಡಿಯುವ ನೀರು ಸಿಗುತ್ತದೆ. ಆದರೆ ನಾವು ಇಲ್ಲಿ ಎಷ್ಟೇ ಕೊಳವೆ ಬಾವಿಗಳನ್ನು ತೆಗೆಸಿದರೂ ಕೂಡ ಪ್ರಯೋಜನವಾಗುವುದಿಲ್ಲ ಏಕೆಂದರೆ ನಾವು ಈಗ ಒಂದು ಕೊಳವೆ ಬಾವಿಯನ್ನು ತೆಗೆಸಿ, ಮತ್ತೆ ಎರಡು ತಿಂಗಳು ಬಿಟ್ಟು ಅಲ್ಲಿ ಹೋದರೆ, ಆ ಗ್ರಾಮದ ಜನರು ನೀರಿನ ಕೊರತೆ ಇದೆಯೆಂದು ದೂರು ಹೇಳುತ್ತಾರೆ, ನಾವು ಆಗ ಎರಡು ತಿಂಗಳ ಹಿಂದೆ ಎರಡು ಕೊಳವೆ ಬಾವಿಗಳನ್ನು ತೆಗೆಸಿದ್ದೇವೆಂದು ಹೇಳಿದರೆ, ಅವರು ಅದರಲ್ಲಿ ಒಂದು ಡ್ರೈ ಆಗಿದೆಯೆಂದು ಹೇಳುತ್ತಾರೆ, ಇನ್ನೊಂದರಲ್ಲಿ ಪಂಪ್‌ಸೆಟ್ ಕೆಟ್ಟುಹೋಗಿದೆಯೆಂದು ಹೇಳುತ್ತಾರೆ. ಹೀಗೆ ಸರ್ಕಾರ ವ್ಯವಸ್ಥೆಗೆ ಏನು ಪ್ರತಿವರ್ಷವೂ ಗ್ರಾಮಾಂತರ ಪ್ರದೇಶಗಳಿಗೆ ಕುಡಿಯುವ ರಿಕವರಿಂಗ್ ಎಕ್ಸ್‌ಪೆಂಡಿಚರ್ ಏನು ಮಾಡುತ್ತಿದೆಯೋ, ಅದನ್ನು ಲೆಕ್ಕ ಹಾಕಿಕೊಂಡರೆ ಸುಮಾರು 400 ರಿಂದ 450 ಕೋಟಿ ರೂಪಾಯಿಗಳನ್ನು ಪ್ರತಿವರ್ಷ ನಾವು ಖರ್ಚು ಮಾಡುತ್ತಿದ್ದೇವೆ, ಆದುದರಿಂದ ನಾವು ರಿಕವರಿಂಗ್ ಎಕ್ಸ್‌ಪೆಂಡಿಚರ್ ಅನ್ನು ಕಡಿಮೆ ಮಾಡಿ, ಆದಷ್ಟು ಎಲ್ಲಿ ನದಿ ಮೂಲವಿದೆಯೋ, ಎಲ್ಲಿ ದೊಡ್ಡ ದೊಡ್ಡ ಕೆರೆಗಳ ಮೂಲಗಳು ಇವೆಯೋ, ಅಲ್ಲಿಂದ ಗ್ರಾಮಾಂತರ ಪ್ರದೇಶಗಳಿಗೆ ಶಾಶ್ವತವಾದಂತಹ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿದರೆ, ಮುಂದಿನ ದಿವಸಗಳಲ್ಲಿ ಅನುಕೂಲವಾಗುತ್ತದೆ, ಮತ್ತು ಸರ್ಕಾರಕ್ಕೂ ಕೂಡ ಮುಂದಿನ ವರ್ಷಗಳಲ್ಲಿ   ರಿಕವರಿಂಗ್ ಎಕ್ಸ್‌ಪೆಂಡಿಚರ್ ಕಡಿಮೆಯಾಗುತ್ತದೆ ಈ ದಿಶೆಯಲ್ಲಿ ಸರ್ಕಾರ ಚಿಂತನೆ ಮಾಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಮನವಿಯನ್ನು ಮಾಡುತ್ತೇನೆ. ಇನ್ನು ನಾವೆಲ್ಲರೂ ಕೂಡ ರಾಜಸ್ಥಾನದಲ್ಲಿ ಶ್ರೀ ರಾಜೇಂದ್ರ ಸಿಂಗರವರು ಮಾಡಿದಂತಹ ಕಾರ್ಯವನ್ನು ಭಾರತ ದೇಶ ಮಾತ್ರವಲ್ಲ, ಇಡೀ ಪ್ರಪಂಚ ಅದನ್ನು ಗಮನಿಸಿದೆ. ಅವರಿಗೆ ಜೋಸೆಫಜಾನ್ ಪ್ರಶಸ್ತಿಯನ್ನು ಕೂಡ ಕೊಟ್ಟಿದ್ದಾರೆ. ಅಂಥ ಮರಳುಗಾಡಿನಲ್ಲಿ ನೀರನ್ನು ಹೇಗೆ ಶೇಖರಣೆ ಮಾಡಬಹುದೆಂಬ ಬಗ್ಗೆ ಒಬ್ಬ ವ್ಯಕ್ತಿ, ತೋರಿಸಿದ್ದಾರೆ, ಇಂತಹ ಕೆಲಸ ಈಗ ನಮ್ಮಲ್ಲೂ ಕೂಡ ಆಗಬೇಕಾಗಿದೆ. ಎಲ್ಲೆಲ್ಲಿ ಹಳ್ಳಗಳು, ಕೊಳ್ಳಗಳೂ ಇವೆಯೋ, ಅಲ್ಲಿ ಒಡ್ಡುಗಳನ್ನು ನಿರ್ಮಾಣ ಮಾಡಬೇಕಾಗಿದೆ, ಜಲ ಸಂಗ್ರಹಣೆ ಮಾಡಬೇಕಾಗಿದೆ. ಈ ದಿಶೆಯಲ್ಲಿ ನಾವು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗಿದೆ. ನೀರು ಸಂಗ್ರಹಣ ಕಾರ್ಯವನ್ನು ಒಂದು ಚಳುವಳಿ ರೂಪದಲಿ ತೆಗೆದುಕೊಳ್ಳಬೇಕೆಂದು ನಮ್ಮ ಮಾಜಿ ರಾಷ್ಟ್ರ ಪತಿಯವರಾದ ಶ್ರೀ ಕೆ.ಆರ್.

ನಾರಾಯಣರವರು ದಿ:26.1.2002ರಲ್ಲಿ ಮಾಡಿದಂತಹ ಭಾಷಣದಲ್ಲಿ ಅವರು ಏನು ಹೇಳುತ್ತಾರೆಂದರೆ ಸಮುದಾಯದ ಗಣ್ಯರು. ಚುನಾಯಿತ ಪ್ರತಿನಿಧಿಗಳು, ಆಡಳಿತ ನಿರ್ವಾಹಣೆಯ ಸಹಕಾರದೊಂದಿಗೆ, ಅಂದರೆ ಸಮಾಜದ ಗಣ್ಯರು, ಮತ್ತು ಚುನಾಯಿತ ಪ್ರತಿನಿಧಿಗಳು ಮತ್ತು ಸರ್ಕಾರದಲ್ಲಿ ಆಡಳಿತ ನಡೆಸುವಂತಹ ಅಧಿಕಾರಿಗಳ ಸಹಯೋಗದೊಂದಿಗೆ, ಇಂತಹರ ಯೋಜನೆಗಳನ್ನು ಯಶಸ್ವಿಗೊಳಿಸಬೇಕು. ಇದರ ಹೊಣೆಗಾರಿಕೆಯನ್ನು ನಾವು ಕಾಣುತ್ತಿಲ್ಲವೆಂದು ಅವರು ವಿಷಾದದಿಂದ ಹೇಳುತ್ತಾರೆ. ಮುಂದಿನ ಮನುಷ್ಯನ ಭವಿಷ್ಯ, ನೀರಿನ ನಿರ್ವಹಣೆಯ ಮೇಲೆ ಅವಲಂಬಿತವಾಗಿದೆ. ಎಂಬುದನ್ನು ನಾವ್ಯಾರು ಕೂಡ ಮರೆಯಬಾರದು. ಆದುದರಿಂದ ಕೊಳವೆ ಬಾವಿಗಳ ಮೇಲೆ ಅವಲಂಬಿತವಾಗುವುದನ್ನು ನಾವು ಕಡಿಮೆ ಮಾಡಬೇಕು. ಮಾನ್ಯ ಎಸ್.ಎಸ್. ಪಾಟೀಲರ್‌ರವರು ಮಾತನಾಡುವಂತಹ ಸಂದರ್ಭದಲ್ಲಿ, ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಮುಂದಿನ ಐದು ವರ್ಷಗಳಲ್ಲಿ ಐವತ್ತು ಸಾವಿರ ಕೊಳವೆ ಬಾವಿಗಳನ್ನು ತೆಗೆಯುತ್ತೇವೆಂದು ಹೇಳಿದರು. ಒಂದು ಕಡೆ ಕುಡಿಯುವ ನೀರಿಗೆ ಕೊಳವೆ ಬಾವಿಗಳನ್ನು ತೆಗೆಯಬಾರದೆಂದು ಗ್ರಾಮೀಣಾಭಿವೃದ್ಧಿ ಇಲಾಖೆಯವರು ಹೇಳುತ್ತಿರುವಾಗ, ಮುಂದಿನ ದಿವಸಗಳಲ್ಲಿ ನಾವು ಹೆಚ್ಚು ಹೆಚ್ಚು ಕೊಳವೆ ಬಾವಿಗಳನ್ನು ತೆಗೆದಾಗ, ಅಂತರ್ ಜಲ ಕುಸಿಯುತ್ತಾ ಹೋಗುತ್ತದೆ. ಆದುದರಿಂದ ಮುಂದಿನ ದಿವಸಗಳಲ್ಲಿ ಹೆಚ್ಚು ಹೆಚ್ಚು ಕೊಳವೆ ಬಾವಿಗಳನ್ನು ತೆಗೆಯುವುದನ್ನು ನಾವು ನಿಲ್ಲಿಸಬೇಕು, ಮತ್ತು ಜಲ ಸಂಗ್ರಹಣೆಗೆ ಹೆಚ್ಚಿನ ಒತ್ತು ಕೊಡಬೇಕು, ಅದೇ ಹಣವನ್ನು ಜಲ ಸಂಗ್ರಹಣಾ ಕಾರ್ಯಕ್ಕೆ ಉಪಯೋಗ ಮಾಡಿದರೆ ಮುಂದಿನ ದಿವಸಗಳಲ್ಲಿ, ರಾಜ್ಯದ ಜನತೆಗೆ ಅನುಕೂಲವಾಗುತ್ತದೆಂದು ನಾನು ಭಾವಿಸಿಕೊಂಡಿದ್ದೇನೆ. ಇನ್ನು ನೀರಾವರಿ ಬಗ್ಗೆ ಹೇಳುವುದಾದರೆ, ಇಲ್ಲಿಯವರೆಗೆ ಉತ್ತರ ಕರ್ನಾಟಕದಲ್ಲಿ ಕೃಷ್ಣ ನದಿ ಕೊಳ್ಳ ಇರಬಹುದು, ತುಂಗಾಭದ್ರ ಅಚ್ಚುಕಟ್ಟು ಪ್ರದೇಶವಿರಬಹುದು, ನಮ್ಮ ಸರ್ಕಾರಗಳು ಒಟ್ಟು ಹದಿನಾಲ್ಕು ಸಾವಿರ ಕೋಟಿ ರೂಪಾಯಿಗಳನ್ನು ವಿನಿಯೋಗ ಮಾಡಿದೆ. ಆದರೆ ನಮ್ಮ ಸರ್ಕಾರ ಬಂದಮೇಲೆ 1999ರಿಂದೀಚೆಗೆ ನೀರಾವರಿಗೋಸ್ಕರ ಉತ್ತರ ಕರ್ನಾಟಕ ಪ್ರದೇಶಕ್ಕೆ ಏಳೂವರೆ ಸಾವಿರ ಕೋಟಿ ರೂಪಾಯಿಗಳನ್ನು ವಿನಿಯೋಗ ಮಾಡಿದೆ. ಆದರೆ ನಮ್ಮ ಸರ್ಕಾರ ಬರುವುದಕ್ಕೆ ಮೊದಲು, ಹಿಂದಿನ 35 ವರ್ಷಗಳಲ್ಲಿ ವಿನಿಯೋಗ ಮಾಡಿರುವಂತಹ ಹಣ 6,500 ಕೋಟಿ ರೂಪಾಯಿಗಳು, ಮಾನ್ಯ ಎಸ್.ಎಸ್.ಪಾಟೀಲರವರು ಮಾತನಾಡುವಂತಹ ಸಂದರ್ಬದಲ್ಲಿ ನಮ್ಮ ಸರ್ಕಾರ ಆಡಳಿತ ಮಾಡುವಂತಹ ಅವಧಿಯಲ್ಲಿ ನಾವು ಖರ್ಚು ಮಾಡಿದ್ದೇವೆ, ನೀವು ಏನು ಮಾಡಿದ್ದೀರಿ ಎಂದರು. ಮಾನ್ಯ ಹಿರಿಯ ಸದಸ್ಯರು ಸದನದಲ್ಲಿ ಮಾಹಿತಿಯನ್ನು ಕೊಡುವಂತಹ ಸಂದರ್ಭದಲ್ಲಿ ಈ ಅಂಕಿ ಅಂಶಗಳನ್ನು ಗಮನಿಸಿಕೊಳ್ಳಬೇಕು. ಇಲ್ಲಿ ನಮ್ಮ ಸರ್ಕಾರದ ಸಾಧನೆಯನ್ನು ಗಮನಿಸಿದರೆ, ಅವರು ಇಲ್ಲಿ ಏನು ಹೇಳಿಕೆಯನ್ನು ಕೊಟ್ಟಿದ್ದಾರೆ, ಅದು ಸರಿಯಾದ ಹೇಳಿಕೆ ಅಲ್ಲವೆಂದು ನಾನು ಈ ಸದನದ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಎಸ್.ಎಸ್.ಪಾಟೀಲ್ : ತಾವು ಈಗ ಹೇಳಿದಂತಹ ಆರೂವರೆ ಸಾವಿರ ಕೋಟಿ ರೂಪಾಯಿಗಳು 35 ವರ್ಷಗಳಲ್ಲಿ ವಿನಿಯೋಗವಾಗಿದೆಯೋ ಅಥವಾ 5 ವರ್ಷಗಳಲ್ಲಿ ವಿನಿಯೋಗವಾಗಿದೆಯೋ ಎಂಬುದನ್ನು ತಾವು ಹೇಳಬೇಕು. ನೀವು ಸುಮ್ಮನೆ 35 ವರ್ಷಗಳಲ್ಲಿ ವಿನಿಯೋಗಿದೆಯೆಂದು ಹೇಳಬೇಡಿ. ಆ ಆರೂವರೆ ಸಾವಿರ ಕೋಟಿ ರೂಪಾಯಿಗಳು, 5 ವರ್ಷಗಳಲ್ಲಿ ವಿನಿಯೋಗವಾಗಿದೆ. ಆದರೆ ಹಿಂದೆ 35 ವರ್ಷಗಳಲ್ಲಿ ಬರೀ 500 ಕೋಟಿ ರೂಪಾಯಿಗಳು ವಿನಿಯೋಗ ಆಗಿದೆ. ಅದನ್ನು ತಾವು ನೋಡಬೇಕಾಗುತ್ತದೆ.

ಶ್ರೀ ಡಿ.ಸಿ.ತಮ್ಮಣ್ಣ : ಕಳೆದ 35 ವರ್ಷಗಳಲ್ಲಿ ವಿನಿಯೋಗ ಮಾಡಿದ್ದು ಆರೂವರೆ ಸಾವಿರ ಕೋಟಿ ರೂಪಾಯಿಗಳು, ನಿಮ್ಮ ಸರ್ಕಾರದ ಅವಧಿಯಲ್ಲಿ ಖರ್ಚು ಮಾಡಿರುವಂಥಾದ್ದು ನನಗೆ ತಿಳಿದಿರುವ ಪ್ರಕಾರ ಮೂರು ಸಾವಿರ ಕೋಟಿ ರೂಪಾಯಿಗಳಿಂದ ಮೂರುವರೆ ಸಾವಿರ ಕೋಟಿ ರೂಪಾಯಿಗಳು. ನಮ್ಮ ಸರ್ಕಾರ ಖರ್ಚು ಮಾಡಿರುವಂತಹ ಹಣ ಏಳೂವರೆ ಸಾವಿರ ಕೋಟಿ ರೂಪಾಯಿಗಳು, ಆದುದರಿಂದ ನೀವು ಮಾಡಿರುವಂತಹ ಆಪಾದನೆಯಲ್ಲಿ ಹುರುಳಿಲ್ಲವೆಂದು ನಾನು ಧೈರ್ಯವಾಗಿ ಹೇಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇದಕ್ಕೆ ಉತ್ತರವಿಲ್ಲ.

ಶ್ರೀ ಎಸ್.ಎಸ್.ಪಾಟೀಲ್ : ಉತ್ತರವಿಲ್ಲವೆಂಬ ಪ್ರಶ್ನೆಯಿಲ್ಲ ಆ ಯೋಜನೆಗಳು ಎಷ್ಟು ವರ್ಷಗಳಿಂದ ಸರ್ಕಾರದಿಂದ ಇದ್ದವು ? ಇಲ್ಲಿ ಕಾಂಗ್ರೆಸ್ ಸರ್ಕಾರ ಆಳಿದ್ದು ಎಷ್ಟು ವರ್ಷ ? ಆಮೇಲೆ ನಮ್ಮ ಸರ್ಕಾರ ಬಂದಿದ್ದು ಎಷ್ಟು ವರ್ಷ ? ಆ ನಾಲ್ಕು ವರ್ಷಗಳಲ್ಲಿ ಮೂರುವರೆ ಸಾವಿರ, ನಾಲ್ಕು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ, ಆ ಯೋಜನೆಗಳನ್ನು ಮುಗಿಯುವ ಹಂತಕ್ಕೆ ತಂದಂಥವರು ಯಾರು ? ನೀವು ಪ್ರಾರಂಭವನ್ನೇ ಮಾಡಿರಲಿಲ್ಲ. ಅಮೇಲೆ ನೀವು ಅವನ್ನು ಮುಂದೆ ಮುಗಿಸಿದ್ದೀರಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಎಲ್ಲಾ ಪ್ರಾಜೆಕ್ಟ್‌ಗಳಿಗೂ ಬುನಾದಿಯನ್ನು ಹಾಕಿದಂಥವರೇ ನಾವು. ನೀವು ಏನು ಹೇಳುತ್ತಿದ್ದೀರೆಂದರೆ ಎಲ್ಲಾ ನಿಮ್ಮಿಂದಲೇ ಅಯಿತು ಎಂದು ಹೇಳುತ್ತೀರಿ. ಲಗ್ನವಾದ ಮರುದಿವಸವೇ ಮಗು ಹುಟ್ಟಿತು ಅದು ನಮ್ಮದೇ ಎಂದು ಹೇಳುವಂಥವರು ನೀವು !

ಶ್ರೀ ಎಸ್.ಎಸ್.ಪಾಟೀಲ್ : ನೀವು ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಅನ್ನು ಮಾಡಿದ್ದೀರಾ ?

ಶ್ರೀ ಡಿ.ಸಿ.ತಮ್ಮಣ್ಣ : ಮಾನ್ಯ ಛೇರ್ಮನವರೇ, ಸ್ವಾತಂತ್ರ್ಯ ಪೂರ್ವದಲ್ಲಿ ಇದ್ದಂತಹ ಸುಮಾರು 40,000ಕ್ಕೂ ಹೆಚ್ಚು ಕೆರೆಗಳಲ್ಲಿ 10,000ಕ್ಕೂ ಹೆಚ್ಚು ಕೆರೆಗಳನ್ನು ಮಾನವರು ನಾಶ ಮಾಡಿದರು. ಅಂದರೆ ಸ್ವಂತಕ್ಕೆ ಕೃಷಿಗೆಂದು ಉಪಯೋಗಿಸಿಕೊಂಡು ಉಳಿದಂತಹ 30,000 ಕೆರೆಗಳು ಕೂಡ ನಿರ್ಲಕ್ಷ್ಯದಲ್ಲಿ ಇದ್ದವು, ಆದರೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಇಂತಹ ದುರ್ದಿನಗಳು ಮುಂದೆ ಬರುತ್ತವೆಂದು ತಿಳಿದು ಮಾನ್ಯ ಮುಖ್ಯಮಂತ್ರಿಗಳು ಕೆರೆಗಳ ಹೂಳು ಎತ್ತುವಂತಹ ಕಾರ್ಯಕ್ರಮವನ್ನು ಹಾಕಿಕೊಂಡರು. ಇವತ್ತಿನ ದಿವಸ ವಿಶ್ವಬ್ಯಾಂಕಿನ ಯೋಜನೆಯಡಿಯಲ್ಲಿರಬಹುದು, ಸರ್ಕಾರದ ಸಂಪನ್ಮೂಲದಿಂದ ಇರಬಹುದು, ಅನೇಕ ಕೆರೆಗಳ ಹೂಳೂ ಎತ್ತುವಂತಹ ಕಾರ್ಯಕ್ರಮವನ್ನು ನಮ್ಮ ಸರ್ಕಾರ ಹಮ್ಮಿಕೊಂಡಿದೆ. ಇಂಥ ಕಾರ್ಯಕ್ರಮಗಳು ಇನ್ನು ಹೆಚ್ಚು ಹೆಚ್ಚಾಗಿ ಮುಂದಿನ ದಿವಸಗಳಲ್ಲಿ ನಡೆಯಬೇಕಾಗಿದೆ. ಇಂತಹ ಯೋಜನಗಳು ಹಿಂದಿನ ಸರ್ಕಾರಗಳಲ್ಲಿ ಎತಕ್ಕೆ ಹೊಳೆದಿರಲಿಲ್ಲ ? ಈ ಕೆರೆಗಳು ಅಮೂಲ್ಯವಾದವು ಇವುಗಳನ್ನು ಉಳಿಸಿಕೊಳ್ಳಬೇಕು. ಇವು ನಮ್ಮ ಜೀವನದ ಜೀವನಾಡಿಗಳೆಂಬುದು ಹಿಂದಿನ ಸರ್ಕಾರಗಳಿಗೆ ಎತಕ್ಕೆ ಹೊಳೆದಿರಲಿಲ್ಲ ಇದರ ಬಗ್ಗೆ ಯಾರು ? ಒಳ್ಳೆಯ ಮಾತುಗಳನ್ನಾಡುವುದಕ್ಕೆ ಇಷ್ಟಪಡುವುದಿಲ್ಲ. ಆದರೆ ಏನಾದರೂ ಸರಿಯಾಗಿ ಕೆಲಸವಾಗಿಲ್ಲವೆಂದು ಇದರ ಬಗ್ಗೆ ಟೀಕೆ ಮಾಡುವುದರಲ್ಲೇ ಕಾಲಕಳೆಯುತ್ತೇವೆಯೆ ಹೊರತು ಇಂತಹ ಕಾರ್ಯಕ್ರಮಗಳ ಬಗ್ಗೆ ಚಿಂತನೆ ಮಾಡುವ ಚಿಂತನಾ ಚಾವಡಿ ಈ ಸದನವಾಗಬೇಕು. ಶ್ರೀಮತಿ ಎಸ್.ಎಸ್.ಪಾಟೀಲರು ಹೇಳಿದಂತೆ, ಈ ಸದನ ರಾಜ್ಯದ ಹಿತದೃಷ್ಟಿಯಿಂದ ಎಲ್ಲಾ ಸದಸ್ಯರು ಒಗ್ಗೂಡಿ ಚಿಂತನೆ ಮಾಡುವಂತಹ ಚಿಂತನೆಯ ಛಾವಡಿಯಾಗಬೇಕು. ಅದರ ಮೂಲಕ ರಾಜ್ಯದ ಅಭಿವೃದ್ಧಿ [illegible]

ಭಾವಿಸುತ್ತೇನೆ. ಮತ್ತೆ ರಸ್ತೆಗಳ ಅಭಿವೃದ್ಧಿಯ ಬಗ್ಗೆ ಹೇಳುವುದಾದರೆ, ನಮ್ಮ ಸರ್ಕಾರ ಈಗಾಗಲೇ ಸಾಕಷ್ಟು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಅನೇಕ ಯೋಜನೆಗಳಡಿಯಲ್ಲಿ ಅಂದರೆ ರಾಜ್ಯದಲ್ಲಿ ರಾಷ್ಟ್ರೀಯ ಹೆದ್ದಾರಿ ಇರಬಹುದು, ರಾಜ್ಯ ಹೆದ್ದಾರಿ ಇರಬಹುದು. ಗ್ರಾಮೀಣ ಮುಖ್ಯ ರಸ್ತೆಗಳಿರಬಹುದು, ಇದೆಲ್ಲದರ ಅಭಿವೃದ್ಧಿಗೆ ಸಾಕಷ್ಟು ಕಾರ್ಯಕ್ರಮವನ್ನು ಹಮ್ಮಿಕೊಂಡು ಈಗ ಹಣವನ್ನು ವ್ಯಯ ಮಾಡಲಾಗಿದೆ. ಇದರಿಂದ ಮುಂದೆ ದಿವಸಗಳಲ್ಲಿ ಈ ರಾಜ್ಯದಲ್ಲಿ ಮನುಷ್ಯನ ಹೃದಯಕ್ಕೆ ರಕ್ತವನ್ನು ಸಾಗಿಸುವಂತಹ ರಕ್ತನಾಳಗಳು ಎಷ್ಟು ಮುಖ್ಯವೋ ಹಾಗೆಯೇ ರಾಜ್ಯದ ಅಭಿವೃದ್ಧಿಗೆ ರಸ್ತೆಗಳ ಅಭಿವೃದ್ಧಿಯು ಕೂಡ ಅಷ್ಟೇ ಮುಖ್ಯವಾದುದು. ಈ ರಸ್ತೆಗಳ ಅಭಿವೃದ್ಧಿಯಾಗದೆ ಇದ್ದರೆ ರಾಜ್ಯದ ಅಭಿವೃದ್ಧಿ ಖಂಡಿತವಾಗಿಯು ಆಗುವುದಿಲ್ಲ. ಈ ರಾಜ್ಯದಲ್ಲಿ ಸುಮಾರು ಒಂದು ಲಕ್ಷದ ಐವತ್ತು ಸಾವಿರ ಕಿ.ಮೀ. ರಸ್ತೆಗಳಿವೆ. ರಾಷ್ಟ್ರೀಯ ಹೆದ್ದಾರಿ 3728 ಕಿ.ಮೀ. ಇದ್ದರೆ ರಾಜ್ಯದ ಹೆದ್ದಾರಿ ಒಂಭತ್ತು ಸಾವಿರದ ಎಂಟುನೂರು ಚಿಲ್ಲರೆ ಕಿ.ಮೀ. ಇದೆ. ಗ್ರಾಮೀಣ ರಸ್ತೆಗಳು ಸೇರಿ ಒಂದು ಲಕ್ಷದ ಐವತ್ತು ನಾಲ್ಕು ಸಾವಿರ ಕಿ.ಮೀ. ರಸ್ತೆಗಳಿವೆ. ಈ ರಾಜ್ಯದ ರಸ್ತೆಗಳ ಅಭಿವೃದ್ಧಿಯಾದ ಮೇಲೆ ನಾವು 'ಏನು ಇಂಧನದ ಮೇಲೆ ಹಣವನ್ನು ಸುರಿಯುತ್ತಿದ್ದೇವು, ಅದು ಉಳಿತಾಯವಾಗುತ್ತಿದೆ. ಈ ಇಂಧನ ಉಳಿತಾಯ ಒಂದರಿಂದಲೇ ವರ್ಷಕ್ಕೆ ಸುಮಾರು 8000 ಕೋಟಿ ರೂಪಾಯಿಗಳನ್ನು ಉಳಿತಾಯ ಮಾಡಬಹುದೆನ್ನುವುದು ನನ್ನ ಲೆಕ್ಕಾಚಾರ. ನಮ್ಮ ಕರ್ನಾಟಕ ರಾಜ್ಯದಲ್ಲಿ ನಲವತ್ತೊಂದುವರೆ ಲಕ್ಷ ವಾಹನಗಳಿವೆ. ಮೂವತ್ತು ಲಕ್ಷ ದ್ವಿಚಕ್ರ ಮತ್ತು ತ್ರಿಚಕ್ರವಾಹನಗಳಿವೆ, ಲಾರಿ ಬಸ್ಸು ಮುಂತಾದ ದೊಡ್ಡ ವಾಹನಗಳು ಹನ್ನೊಂದುವರೆ ಲಕ್ಷ ಇವೆ. ಮೂವತ್ತು ಲಕ್ಷ ವಾಹನಗಳಿಂದ ಒಂದು ದಿವಸಕ್ಕೆ ಅರ್ಧ ಲೀಟರ್ ಪೆಟ್ರೋಲ್ ಉಳಿತಾಯವಾದರೂ ಕೂಡ ಒಂದು ವರ್ಷಕ್ಕೆ 810 ಕೋಟಿಯಷ್ಟು ರೂ ಹಣ ರಾಜ್ಯಕ್ಕೆ ಉಳಿತಾಯವಾಗುತ್ತದೆ. ಯಾರು ಇಂಧನದ ಮೇಲೆ ಖರ್ಚು ಮಾಡುತ್ತಿದ್ದರೋ ಅವರಿಗೆ ಆ ಹಣ ಉಳಿತಾಯವಾಗುತ್ತದೆ. ಕೇಂದ್ರ ಸರ್ಕಾರದ ಬೊಕ್ಕಸಕ್ಕೆ ವಿದೇಶಿಯವಿನಿಮಯ ಉಳಿತಾಯವಾಗುತ್ತದೆ. ಭಾರೀ ವಾಹನಗಳಿಂದ ಒಂದು ದಿವಸಕ್ಕೆ ಐದು ಲೀಟರ್ ಇಂಧನ ಉಳಿತಾಯವಾದರೂ ಅದು ಎಷ್ಟೋ ಕೋಟಿ ರೂಪಾಯಿ ಹಣ ಉಳಿತಾಯವಾಗುತ್ತದೆ. ನನ್ನ ಕ್ಷೇತ್ರದಲ್ಲಿ ನಾನು ಸಿಆರ್‌ಎಫ್. ಯೋಜನೆಯಡಿಯಲ್ಲಿ, ಕೇಂದ್ರ ರಸ್ತೆ ಅಭಿವೃದ್ಧಿ ನಿಧಿ ಯೋಜನೆಯಡಿಯಲ್ಲಿ Inter state economic fund, ಯೋಜನೆ ಅಡಿಯಲ್ಲಿ ಸುಮಾರು 23 ಕೋಟಿ ರೂಪಾಯಿಗಳ ವೆಚ್ಚದಲ್ಲಿ ರಸ್ತೆಗಳನ್ನು ಅಭಿವೃದ್ಧಿ ಮಾಡಿದ ಮೇಲೆ, ಆ ಜನಗಳ ಅಭಿಪ್ರಾಯವನ್ನು ಕೇಳಿದರೆ ಗೊತ್ತಾಗುತ್ತದೆ. ಹಿಂದೆ ಒಂದೂವರೆ ಗಂಟೆಯಲ್ಲಿ ಪ್ರಯಾಣ ಮಾಡುತ್ತಿದ್ದಂತಹ ದೂರವನ್ನು ಇವತ್ತಿನ ದಿವಸ ನಲವತ್ತೈದು ನಿಮಿಷದಲ್ಲಿ ಕ್ರಮಿಸುತ್ತಿದ್ದಾರೆ, ಮತ್ತೆ ಸಂಜೆ ಹೋದ ಮೇಲೆ ಡ್ರೈವರ್‌ಗಳು, ಕಂಡಕ್ಟರ್‌ಗಳು ರಿಪೇರಿ ಮೇಲೆ ಕಳೆಯುತ್ತಿದ್ದ ಕಾಲದಲ್ಲಿ ಆರಾಮವಾಗಿ ನಿದ್ರೆ ಮಾಡಿ ಮುಂದಿನ ದಿವಸಗಳಲ್ಲಿ ಸುಖಪ್ರಯಾಣ ಮಾಡುವಂತಹ ಒಂದು ವ್ಯವಸ್ಥೆ ಈಗ ಆಗಿದೆ ಇದೆಲ್ಲವನ್ನೂ ನಾವು ನೋಡಿದರೆ ಇಂದನದ ಉಳಿತಾಯದಿಂದ ಸುಮಾರು ಒಂದು ರಾಜ್ಯದಲ್ಲಿ 8000 ಕೋಟಿ ರೂ. ಉಳಿತಾಯವಾದರೆ ಇಡೀ ರಾಷ್ಟ್ರದಲ್ಲಿ ಇಂಧನದ ಮೇಲೆ ಆಗುವ ಖರ್ಚಿನಲ್ಲಿ ಎಷ್ಟು ಉಳಿತಾಯ ಮಾಡಬಹುದೆನ್ನವುದನ್ನು ನಾವು ಯೋಚನೆ ಮಾಡಬೇಕು. ಈ ದಿಶೆಯಲ್ಲಿ ಕೇಂದ್ರ ಸರ್ಕಾರ ಹಮ್ಮಿಕೊಂಡಿರುವ Golden Quadrilateral Triangle ಯೋಜನೆ ಏನಿದೆ ಇದು ನಿಜವಾಗಿಯೂ ಸ್ವಾಗತಾರ್ಹವಾದ ವಿಚಾರ. ಇದು ರಾಷ್ಟ್ರದ ಅಭಿವೃದ್ಧಿಗೆ ಪೂರಕವಾದುದು ರಾಜ್ಯದಲ್ಲಿ ಈಗಿರುವ ರಸ್ತೆಗಳನ್ನು ಅಭಿವೃದ್ಧಿ ಮಾಡಿದರೆ, ಮುಂದಿನ ದಿವಸಗಳಲ್ಲಿ

ರಸ್ತೆಗಳ ರಿಪೇರಿಗೆ ಸಂಬಂಧಿಸಿದಂತೆ ರಿಕರಿಂಗ್ ವೆಚ್ಚವನ್ನು ಪ್ರತಿವರ್ಷ ಏನು ಮಾಡುತ್ತಿದ್ದೇವೆ, ಅದು ಉಳಿತಾಯವಾಗಿ ಮುಂದಿನ ಅಭಿವೃದ್ಧಿ ಕಾರ್ಯಗಳಿಗೆ ಉಪಯೋಗ ಮಾಡುವ ಒಂದು ಯೋಜನೆಯನ್ನು ನಾವು ಮುಂದೆ ಇಟ್ಟುಕೊಳ್ಳಬಹುದು. ಈ ದಿಶೆಯಲ್ಲಿ ಅಭಿವೃದ್ಧಿಗೆ ಮಾನ್ಯ ಮಂತ್ರಿಗಳಾದ ಶ್ರೀ ಧರ್ಮಸಿಂಗ್‌ರವರ ನೇತೃತ್ವದಲ್ಲಿ ನಮ್ಮ ಸರ್ಕಾರ ಕೈಗೊಂಡಿರುವ ಕ್ರಮದಿಂದ ಕರ್ನಾಟಕ ರಾಜ್ಯದಲ್ಲಿ ಕಳೆದ ಇಪ್ಪತ್ತೈದು ವರ್ಷಗಳಲ್ಲಿ ರಸ್ತೆಗಳ ವಿಚಾರದಲ್ಲಿ ಏನು ಅಭಿವೃದ್ಧಿಯನ್ನು ಸಾಧಿಸಿಲ್ಲವೋ ಅದನ್ನು ನಾಲ್ಕು ವರ್ಷಗಳಲ್ಲಿ ಸಾಧಿಸಿದೆ, ಇದನ್ನು ಈ ಸದನದಲ್ಲಿ ಬಹಳ ಹೆಮ್ಮೆಯಿಂದ ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಇನ್ನು ಪ್ರಾಥಮಿಕ ವಿದ್ಯಾಭ್ಯಾಸದ ಬಗ್ಗೆ ಹೇಳುವುದಾದರೆ ಮಾನ್ಯ ಎಸ್.ಎಸ್. ಪಾಟೀಲರು ಬರೀ ಅಕ್ಷರ ದಾಸೋಹದ ಬಗ್ಗೆ ಮಾತನಾಡಿದರು. ಆದರೆ ನಾನು ಶಾಸಕನಾದ ಮೇಲೆ ಕ್ಷೇತ್ರದ 151 ಹಳ್ಳಿಗಳಿಗೂ ಭೇಟಿ ಕೊಟ್ಟು ನೋಡಿದಾಗ, ನಾನು ಐವತ್ತು ವರ್ಷಗಳ ಹಿಂದೆ ಓದುವಾಗ ಆರ್‌ಸಿಸಿ ಬಿಲ್ಡಿಂಗ್‌ನಲ್ಲಿ, ಮಣೆಯ ಮೇಲೆ ಕುಳಿತು ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದೆ. ಆದರೆ ನಾನು ನೋಡಿದಂತಹ ಸ್ಥಿತಿಯಲ್ಲಿ ಅದು ಬಹಳ ದುಸ್ಥಿತಿಯಲ್ಲಿತ್ತು ತಾಲ್ಲೂಕು, ಜಿಲ್ಲಾ ಪಂಚಾಯಿತಿಗಳು ಬಂದ ಮೇಲೆ ಮಂಗಳೂರು ಹೆಂಚಿನ ಮನೆ, ಕಂಟ್ರಿವುಡ್ ಹಾಕಿ ಕಟ್ಟಿದಂತಹ ಮನೆಗಳಲ್ಲಿ ಮಳೆಗಾಲದಲ್ಲಿ ನೀರುಸೋರಿ, ಮಕ್ಕಳು ಮಳೆಗಾಲದಲ್ಲಿ ಸರಿಯಾಗಿ ಕುಳಿತು ಓದುವಂತಹ ವ್ಯವಸ್ಥೆ ಇಲ್ಲದಂತಹ ಶಾಲೆಗಳನ್ನು ನಾನು ಮಂಡ್ಯ ಜಿಲ್ಲೆಯಲ್ಲಿ ನೋಡಿದ್ದೇನೆ. ಇದೇ ಪರಿಸ್ಥಿತಿ ರಾಜ್ಯದ ಬೇರೆಡೆಗಳಲ್ಲೂ ಇತ್ತು. ನಮ್ಮ ಸರ್ಕಾರ ಬಂದಮೇಲೆ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಒತ್ತುಕೊಡಬೇಕೆಂದು, 21,000 ಹೊಸ ಶಾಲಾ ಕೊಠಡಿಗಳನ್ನು ಕಟ್ಟಿಸುವುದು 35,000 ಕೊಠಡಿಗಳನ್ನು ರಿಪೇರಿ ಮಾಡುವುದು, ಈ ಕಾರ್ಯಕ್ರಮಗಳಿಗೆ ಸುಮಾರು 150 ಕೋಟಿ ರೂ.ಗಳಿಗೂ ಹೆಚ್ಚು ಹಣವನ್ನು ಈ ಸರ್ಕಾರ ವ್ಯಯ ಮಾಡಿದೆ. ಇದು ನಿಜವಾಗಿಯೂ ಉತ್ತಮವಾದ ಕಾರ್ಯಕ್ರಮ, ಇಂತಹ ಕಾರ್ಯಕ್ರಮಗಳ ಬಗ್ಗೆ ಹಿಂದೆ ಏತಕ್ಕೆ ಯೋಚನೆ ಮಾಡಿರಲಿಲ್ಲ ? ನಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಒತ್ತುಕೊಡಬೇಕು, ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಒತ್ತು ಕೊಡಬೇಕು ಎನ್ನುವ ಸಣ್ಣ ವಿಚಾರ ಕೂಡ ಹಿಂದಿನ ಸರ್ಕಾರದ ಗಮನಕ್ಕೆ ಬಂದಿರಲಿಲ್ಲ. ಆದರೆ ನಮ್ಮ ಸರ್ಕಾರ ಈ ದಿಶೆಯಲ್ಲಿ ಹೆಚ್ಚಿನ ಒತ್ತುಕೊಟ್ಟಿದೆ. 345 ಹೊಸ ಪ್ರೌಢಶಾಲೆಗಳನ್ನು ತೆರೆದು ಹಳ್ಳಿಗಾಡಿನ ಮಕ್ಕಳಿಗೆ ತಂದೆತಾಯಿಗಳ ಕಣ್ಣಳತೆಯಲ್ಲಿ ವಿದ್ಯಾಭ್ಯಾಸ ಮಾಡುವ ಸೌಕರ್ಯವನ್ನು ನಮ್ಮ ಸರ್ಕಾರ ಮಾಡಿದೆ. ಈ ದಿಶೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಒತ್ತನ್ನು ಈ ಸರ್ಕಾರ ಕೊಟ್ಟಿದೆ ಎಂದು ನಾನಾದರೂ ಭಾವಿಸಿಕೊಂಡಿದ್ದೇನೆ. ಇನ್ನು ಮಾಲಿನ್ಯದ ಬಗ್ಗೆ ಹೇಳುವುದಾದರೆ, ಇರುವಂತಹ ನಲವತ್ತೊಂದುವರೆ ಲಕ್ಷ ವಾಹನಗಳಲ್ಲಿ ಬೆಂಗಳೂರು ನಗರ ಒಂದರಲ್ಲೇ ಹದಿನೆಂಟುವರೆ ಲಕ್ಷವಾಹನಗಳಿವೆ. ಈ ಹದಿನೆಂಟುವರೆ ಲಕ್ಷ ವಾಹನಗಳಲ್ಲಿ ಪ್ರತಿದಿವಸ ಬಿಡುವಂತಹ ಹೊಗೆಯಿಂದ ಮುಂದಿನ ದಿವಸಗಳಲ್ಲಿ ಬೆಂಗಳೂರು ನಗರದಲ್ಲಿ ವಾಸ ಮಾಡುವಂತಹ ಜನರಿಗೆ ಬಹಳ ಕಷ್ಟವಾಗಿ ಪರಿಣಮಿಸುತ್ತದೆಂದು ನಾನು ಭಾವಿಸಿದ್ದೇನೆ. ಈಗಾಗಲೇ. ಈ ದಿಶೆಯಲ್ಲಿ ಸರ್ಕಾರ ಮುನ್ನೆಚ್ಚರಿಕೆ ವಹಿಸಿ ಈ ಮಾಲಿನ್ಯ ನಿಯಂತ್ರಣದ ಬಗ್ಗೆ ಕಾರ್ಯಕ್ರಮ ಹಮ್ಮಿಕೊಳ್ಳದೆ ಇದ್ದರೆ ಇದರಿಂದ ಮುಂದಿನ ದಿವಸಗಳಲ್ಲಿ ಹೆಚ್ಚಿನ ದುರಂತ ಸಂಭವಿಸುವಂತಹ ಸಂಭವವು ಕೂಡ ಇದೆ. ಆದುದರಿಂದ ನಮ್ಮ ಸರ್ಕಾರ ಇದನ್ನು ಮನಗಂಡ ಈ ಮೆಟ್ರೋ ರೈಲ್ವೆ ವ್ಯವಸ್ಥೆಯನ್ನು ಈ ಬೆಂಗಳೂರು ನಗರದಲ್ಲಿ ತರಬೇಕೆಂದು ಪ್ರಯತ್ನ ಮಾಡಿದೆ. ಇದು ನಿಜವಾಗಿಯೂ ಸ್ವಾಗತಾರ್ಹವಾದ ವಿಚಾರ. ಈ ಯೋಜನೆಯನ್ನು ಆದಷ್ಟು ಬೇಗ ಪೂರ್ಣಗೊಳಿಸಬೇಕು, ಈ ಬೆಂಗಳೂರು ನಗರದಲ್ಲಾಗುತ್ತಿರುವ ಮಾಲಿನ್ಯಕ್ಕೆ ಕಡಿವಾಣ

ಹಾಕಬೇಕೆಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನೂ ಕೃಷಿಗೆ ಸಂಬಂಧಿಸಿದಂತೆ ಈಗಾಗಲೇ ನಮ್ಮ 200 ಕೋಟಿ ರೂ.ಗಳ ಆವರ್ತ ನಿಧಿಯನ್ನು ಒದಗಿಸಿದೆ. ಕಿಸಾನ್ ಕ್ರೆಡಿಟ್ ಕಾರ್ಡ್

12.50 ಪಿ.ಎಂ.

ಯೋಜನೆಯನ್ನು ಜಾರಿಗೆ ತಂದಿದೆ. ನಮ್ಮ ಸರ್ಕಾರ ರೈತರಿಗೆ ಅನೇಕ ಸೌಲಭ್ಯಗಳನ್ನು ಒದಗಿಸಿ ಕೊಡುತ್ತಿದೆ. ಇಷ್ಟಾದರೂ ಕೂಡ ವಿರೋಧ ಪಕ್ಷದವರು ಕೃಷಿಗೆ ಏನೂ ಮಾಡಿಲ್ಲವೆಂದು ಬೊಬ್ಬೆ ಹೊಡೆಯುತ್ತಿದ್ದಾರೆ. ಇದು ನಿಜವಾದ ವಿಚಾರ ಅಲ್ಲ. ಈಗ ಯಾರೇ ಒಳ್ಳೆಯ ಕೆಲಸ ಮಾಡಲಿ ಅದನ್ನು ಮೆಚ್ಚಬೇಕಾದದ್ದು ಎಲ್ಲರ ಕರ್ತವ್ಯ ಇದನ್ನು ನಾನು ಈ ಸದನದ ಗಮನಕ್ಕೆ ತರಬಯಸುತ್ತಿದ್ದೇನೆ. ಮತ್ತೊಂದು ಪ್ರಮುಖವಾದಂಥ ವಿಚಾರವೇನೆಂದರೆ, ನಮ್ಮ ಮಣ್ಣಿನ ಫಲವತ್ತತೆ ಕುಸಿದು ಇಳುವರಿ ಪ್ರಮಾಣ ದಿನೇ ದಿನೇ ಕಡಿಮೆಯಾಗುತ್ತಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಭಾರತ ಮತ್ತು ಚೈನಾ ಈ ಎರಡು ದೇಶಗಳು ಕೂಡ ಸರಿಸುಮಾರು 50 ಮಿಲಿಯನ್ ಟನ್ ಆಹಾರಧಾನ್ಯಗಳನ್ನು ಉತ್ಪಾದನೆ ಮಾಡುತ್ತಿದ್ದವು. ಇವತ್ತಿನ ದಿವಸ ಭಾರತ ಸರ್ಕಾರ 2 ಸಾವಿರ ಮಿಲಿಯನ್ ಟನ್ ತಲುಪಿದರೆ ಚೈನಾ ದೇಶ ಈಗಾಗಲೇ 5000 ಮಿಲಿಯನ್ ಟನ್‌ಗೆ ತಲುಪಿದೆ. ಇಷ್ಟು ಇಳುವರಿ ಕಡಿಮೆಯಾಗಿದೆ. ನಾವು ಮಣ್ಣಿನ ಫಲವತ್ತತೆಯನ್ನು ಉಳಿಸಿಕೊಳ್ಳದೇ ಹೋದರೆ, ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸಲು ಸಾವಯವ ಗೊಬ್ಬರಗಳನ್ನು ಉಪಯೋಗಿಸುವ ವಿಧಾನದ ಬಗ್ಗೆ ನಾವು ರೈತರಿಗೆ ತಿಳಿ ಹೇಳದೇ ಇದ್ದರೆ, ಮುಂದಿನ ದಿವಸಗಳಲ್ಲಿ ನಮ್ಮ ನೆಲ ಜಲ ಏನಿದೆ ಇದನ್ನು ನಾವು ಕಳೆದುಕೊಳ್ಳಬೇಕಾದಂಥ ಪ್ರಮೇಯ ಬರುತ್ತದೆಂದು ನಾನಾದರೂ ತಿಳಿದುಕೊಂಡಿದ್ದೇನೆ. ಬರೀ ನೆಲ ಜಲ ಉಳಿಸಿಕೊಳ್ಳುವುದೆಂದು ಹೇಳಿದರೆ ಬರೀ ಪಾಕಿಸ್ತಾನ ಮತ್ತು ಚೀನಾ ದೇಶದ ಬಾರ್ಡರ್‌ನಲ್ಲಿ ಇವತ್ತು ನಮ್ಮ ನೆಲವನ್ನು ಜಲವನ್ನು ಉಳಿಸಿಕೊಳ್ಳುವುದೆಂದು ಅರ್ಥವಲ್ಲ. ನಾವು ನಿಂತಿರುವ ನೆಲವೇ ಕುಸಿಯುತ್ತಿದೆ. ನಾವು ನಿಂತಿರುವ ನೆಲದಲ್ಲಿರುವಂಥ ನೀರು ಪಾತಾಳಕ್ಕೆ ಹೋಗಿದೆ. ಆಕಾಶದಲ್ಲಿರುವಂಥ ಮಳೆ ಆಕಾಶವನ್ನೇ ಸೇರಿಕೊಂಡು ಹೋಗಿದೆ. ಹೀಗಾಗಿ ಭೂಮಿಯ ಮಣ್ಣಿನ ಫಲವತ್ತತೆ ಕಡಿಮೆಯಾಗಿ ನಾವು ಇರುವಂಥ ಅಮೂಲ್ಯವಾದ ಭೂಮಿಯನ್ನೇ ಕಳೆದುಕೊಳ್ಳುತ್ತಿದ್ದೇವೆ. ಶೇಕಡ 75ರಷ್ಟು ಭಾಗದ ಜನ ಅದು ಕರ್ನಾಟಕ ರಾಜ್ಯದಲ್ಲಿರಬಹುದು. ಭಾರತ ದೇಶದಲ್ಲಿರಬಹುದು, ಕೃಷಿಯನ್ನೇ ಅವಲಂಬಿಸಿಕೊಂಡಿರತಕ್ಕಂಥ ಜನ, ಈ ಅಮೂಲ್ಯವಾದ ಭೂಮಿಯನ್ನು ನಾವು ಕಳೆದುಕೊಂಡರೆ ಮುಂದಿನ ದಿವಸಗಳಲ್ಲಿ ಭಾರತ ದೇಶದಲ್ಲಿ ನಮಗೆ ಖಂಡಿತವಾಗಿಯೂ ಕಷ್ಟವಾಗುತ್ತದೆ. ಆಹಾರದಲ್ಲಿ ಸ್ವಾವಲಂಬನೆಯನ್ನು ಸಾಧಿಸಿದ್ದರೂ ಕೂಡ ಮುಂದಿನ ಫಲವತ್ತತೆಯನ್ನು ಉಳಿಸಿಕೊಳ್ಳಬೇಕೆನ್ನುವ ದಿಶೆಯಲ್ಲಿ ಮಾನ್ಯ ರಾಷ್ಟ್ರಾಧ್ಯಕ್ಷರಾದ ಶ್ರೀ ಎ.ಪಿ.ಜೆ. ಅಬ್ದುಲ್ ಕಲಾಂರವರು " ಎರಡನೇ ಹಸಿರು ಕ್ರಾಂತಿಯಾಗಬೇಕು" ಎಂದು ಇದನ್ನು ಕಂಡೇ ಅವರು ದೇಶಕ್ಕೆ ಕರೆ ಕೊಟ್ಟಿದ್ದಾರೆ. ಈ ದೇಶದಲ್ಲಿ ಎರಡನೇ Agricultural Revoluation ಆಗಬೇಕಾಗಿದೆ. ಅಂದರೆ ನಾವು ಮಣ್ಣಿನ ಫಲವತ್ತತೆಯನ್ನು ಉಳಿಸಿಕೊಳ್ಳಬೇಕಾಗಿದೆ. ಭಾರತ ದೇಶದಲ್ಲಿ ಒಂದು ಹೆಕ್ಟೇರ್‌ಗೆ ಎರಡು ಟನ್ ನಾವು ಆಹಾರಧಾನ್ಯ ಬೆಳೆದರೆ ಚೀನಾ ದೇಶ 5 ಟನ್ ಆಹಾರಧಾನ್ಯ ಬೆಳೆಯುತ್ತದೆ. ಇದರಿಂದ ಮುಂದಿನ ದಿವಸಗಳಲ್ಲಿ ನಾವು ಭೂಮಿಯ ಫಲವತ್ತತೆಯನ್ನು ಉಳಿಸಿಕೊಂಡು ಹೆಚ್ಚು ಆಹಾರಧಾನ್ಯವನ್ನು ಬೆಳೆಯುವಂಥ ದಿಶೆಯಲ್ಲಿ ರೈತರಿಗೆ ಮಾಹಿತಿಗಳನ್ನು ಕೊಡುವಂಥ ಕೇಂದ್ರಗಳನ್ನು ನಾವು ತೆರೆಯಬೇಕಾಗಿದೆ. ಅದರ ಮೂಲಕ ರೈತರಿಗೆ ಹೆಚ್ಚಿನ ಮಾಹಿತಿಯನ್ನು ಕೊಡಬೇಕಾಗಿದೆ. ಕ್ರಿಸ್ತಪೂರ್ವ 1022 AD ನಲ್ಲಿ ತಮಿಳು ಕವಿ ತಿರುವಳ್ಳವರ್‌ರವರು ಏನು ಹೇಳುತ್ತಾರೆಂದರೆ "

They alone live who live by tilling the soil and all others but following their grain and eat only the bread of dependers ". ಯಾವ ರೈತ ಈ ದೇಶದ ಜನರಿಗೆ ಅನ್ನ ಕೊಡುತ್ತಾನೋ ಯಾವನು ಕಷ್ಟಪಟ್ಟು ಭೂಮಿಯಲ್ಲಿ ದುಡಿಯುತ್ತಾನೋ ಅವನು ಮಾತ್ರ ಬದುಕುವುದಕ್ಕೆ ಸಾಧ್ಯವಾಗುತ್ತದೆ. ಬೇರೆಯಾವರೆಲ್ಲರೂ ಕೂಡ ಅವನು ಕೊಡುವ ಅನ್ನದ ಮೇಲೆ ಡಿಫೆಂಡ್ ಆಗಬೇಕಾಗುತ್ತದೆ. ಕ್ರಿಸ್ತಪೂರ್ವ 1022ರಲ್ಲಿಯೇ ತಿರುವಳ್ಳಿವರ್ ಏನು ಹೇಳಿದ್ದಾರೆ ಇದು ಹಿಂದೆಯೂ ಸತ್ಯ, ಇವತ್ತಿಗೂ ಸತ್ಯ ಇದು ಮುಂದಕ್ಕೆ ಕೂಡ ಸತ್ಯ. ಈ ದಿಶೆಯಲ್ಲಿ ನಾವು ಈ ಅಮೂಲ್ಯವಾದ ಭೂಮಿಯನ್ನು ಉಳಿಸಿಕೊಳ್ಳುವಂಥ ದಿಶೆಯಲ್ಲಿ ಗಮನವನ್ನು ಕೊಡಬೇಕಾಗಿದೆ, ಮಾಜಿ ರಾಷ್ಟ್ರಪತಿಗಳಾಗಿದ್ದಂಥ ಶ್ರೀ ಕೆ.ಆರ್.ನಾರಾಯಣ್‌ರವರು ಹೇಳಿದಂಥ ಅನಿಸಿಕೆಯಂತೆ 'ನಾವೆಲ್ಲರೂ ಸಮುದಾಯದ ಗಣ್ಯರು ಮತ್ತು ರಾಜಕೀಯ ಚುನಾಯಿತ ಪ್ರತಿನಿಧಿಗಳು ಮತ್ತೆ ಅಧಿಕಾರವನ್ನು ನಡೆಸುವಂಥ ಅಧಿಕಾರಿಗಳು ಎಲ್ಲರೂ ಒಟ್ಟಾಗಿ ಕಲೆತು ಈ ಸಮಸ್ಯೆಗೆ ಪರಿಹಾರವನ್ನು ಮುಂದಿನ ದಿವಸಗಳಲ್ಲಿ ನಾವೆಲ್ಲರೂ ಕಂಡುಹಿಡಿಯಬೇಕಾಗಿದೆ'. ಇಂಥ ಸದನಗಳಲ್ಲಿ ಚಿಂತನೆ ಮಾಡಿ ರಾಜ್ಯದ ಅಭಿವೃದ್ಧಿಗೆ ನಮ್ಮ ಕಾಣಿಕೆಯನ್ನು ಸಲ್ಲಿಸಬೇಕಾಗಿದೆ. ಇನ್ನೂ ಮಾನ್ಯ ಎಸ್.ಎಸ್.ಪಾಟೀಲರು ಮಾತನಾಡುತ್ತಾ ಗ್ರಾಮೀಣಾಭಿವೃದ್ಧಿ ಬಗ್ಗೆ ಹೆಚ್ಚು ಒತ್ತು ಕೊಡಬೇಕು. ಅದನ್ನು ಕೊಟ್ಟಿಲ್ಲವೆಂದು ಹೇಳಿದ್ದಾರೆ. ನಮ್ಮ ಸರ್ಕಾರ ಬಂದಮೇಲೆ ಗ್ರಾಮೀಣ ಪ್ರದೇಶಗಳಲ್ಲಿ ಹಳ್ಳಿಗಾಡಿನ ಅಭಿವೃದ್ಧಿಗೋಸ್ಕರ 'ಸ್ವಚ್ಛ ಗ್ರಾಮ' ಎನ್ನುವ ಒಂದು ವಿನೂತನವಾದ ಯೋಜನೆಯನ್ನು ತಂದು ಅನೇಕ ಗ್ರಾಮಗಳಲ್ಲಿ ಇವತ್ತಿನ ದಿವಸ ಒಳ್ಳೆಯ ಕಾರ್ಯಕ್ರಮ ನಡೆಯುತ್ತಿದೆ. ಆದರೆ ಯಾವ ಮಟ್ಟದಲ್ಲಿ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿ ಆಗಬೇಕಾಗಿತ್ತೋ ಹಳ್ಳಿಗಾಡುಗಳ ಅಭಿವೃದ್ಧಿ ಆಗಬೇಕಾಗಿತ್ತೋ ಅದು ಆಗಿಲ್ಲ, ಅದಕ್ಕೆ ಇನ್ನೂ ಹೆಚ್ಚಿನ ಒತ್ತನ್ನು ಕೊಡಬೇಕೆನ್ನುವುದಕ್ಕೆ ಧ್ವನಿಗೂಡಿಸುವುದರಲ್ಲಿ ನಾನೂ ಕೂಡ ಒಬ್ಬನಾಗಿದ್ದೇನೆ. ಮಾನ್ಯ ಪಾಟೀಲರು ಮಾತನಾಡುತ್ತಾ ಬಚ್ಚಲು ನೀರು ಯಾವುದಕ್ಕೂ ಉಪಯೋಗಕ್ಕೆ ಬರುವುದಿಲ್ಲವೆಂದು ಬಸವಣ್ಣನವರ ವಚನವನ್ನು ಹೇಳಿದರು. ಆದರೆ ಸರ್ಕಾರ ಮಾಡಿದಂಥ ಒಳ್ಳೆಯ ಕಾರ್ಯಕ್ರಮಗಳು ಪಾಪ ಅವರ ಕಣ್ಣಿಗೆ ಬಿದ್ದಿಲ್ಲವೆಂದು ಕಾಣುತ್ತದೆ. ಸರ್ಕಾರ ಮಾಡಿದ್ದೆಲ್ಲವೂ ಕೂಡ ಬಚ್ಚಲ ನೀರಿನ ರೀತಿ ವ್ಯರ್ಥವಾಗಿದೆ ಎನ್ನುವ ಅರ್ಥದಲ್ಲಿ ಅವರು ಹೇಳಿದರು. ಅದಕ್ಕೆ ನಾನೂ ಕೂಡ ಬಸವಣ್ಣನವರ ಒಂದು ವಚನದ ಮೂಲಕ ಅವರಿಗೆ ಉತ್ತರವನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ.

" ಮಾರಿ ಮಸಣಿ ಎಂಬುದು ಬೇರಿಲ್ಲ ಕಾಣಿರೋ. ಮಾರಿ ಎಂಬುದೇನು ?
ಕಂಗಳು ತಪ್ಪಿ ನೋಡಿದರೆ ಮಾರಿ.
ನಾಲಿಗೆ ತಪ್ಪಿ ನುಡಿದರೆ ಮಾರಿ."

ಆದ್ದರಿಂದ ನಾವು ನೋಡಿದ್ದನ್ನು ಸತ್ಯವನ್ನು ಎಂದು ಹೇಳದೇ ಇದ್ದರೆ ಅದೇ ಮಾರಿ, ನಾವು ಸತ್ಯವನ್ನು ಈ ನಾಲಿಗೆ ಮೂಲಕ ನುಡಿಯದೇ ಇದ್ದರೆ ಅದೇ ಮಾರಿ. ಆದ್ದರಿಂದ ಸತ್ಯವನ್ನು ಸತ್ಯ, ನೋಡಿದ್ದನ್ನು, ಅದು ಸರಿಯಾಗಿದ್ದರೆ ಅದನ್ನು ನಾವು ಹೇಳುವಂಥ ಭಾವನೆಯನ್ನು ನಾವು ಬೆಳೆಸಿಕೊಳ್ಳಬೇಕು. ಈ ನಾಲ್ಕೂವರೆ ವರ್ಷದಲ್ಲಿ ನಮ್ಮ ಸರ್ಕಾರ ಅನೇಕ ಸಾಧನೆಗಳನ್ನು ಮಾಡಿ ತೋರಿಸಿದೆ. ಈ ಸರ್ಕಾರದ ಸಾಧನೆ ಸಾಧಾರಣವಾದದೇನೂ ಅಲ್ಲ. ಇದನ್ನು ಒಳ್ಳೆಯದೆಂದು ಒಳ್ಳೆಯ ಕಣ್ಣಿನಿಂದ ನೋಡಿದ ಮೇಲೆ ಕಿವಿಯಿಂದ ಕೇಳಿದ ಮೇಲೆ ನಾಲಗೆಯಿಂದ ಮಾತನಾಡುವುದನ್ನಾದರೂ ನಾವು ಕಲಿಯಬೇಕೆಂದು ಈ ವಚನದ ಮೂಲಕ ಹೇಳುತ್ತಾ, ಈ ಸದನದಲ್ಲಿ ಕಳೆದ ನಾಲ್ಕೂವರೆ ವರ್ಷಗಳಿಂದ

ನಾವು ಅನೇಕ ವಿಷಯಗಳಲ್ಲಿ ಭಾಗವಹಿಸದೇ ಇದ್ದರೂ ಕೂಡ ನಾನು ಅದನ್ನು ಗಮನಿಸಿದ್ದೇನೆ. ಆದರೆ ರಾಜ್ಯದ ಅಭಿವೃದ್ಧಿ ಬಗ್ಗೆ ಚಿಂತನೆ ಮಾಡುವಂಥ ಒಂದು ಮಂಥನ ಇಲ್ಲಿ ಆಗಲಿಲ್ಲ. ಬರೀ ವಿಷಯಕ್ಕೆ ಬಾರದಂಥ ವಿಷಯಗಳನ್ನು ಚರ್ಚೆ ಮಾಡುತ್ತಾ ಕಾಲಕಳೆಯುವುದರಲ್ಲಿಯೇ ನಾವು ನಮ್ಮ ಸಮಯವನ್ನು ವ್ಯರ್ಥ ಮಾಡಿದ್ದೇವೆಂದು ನಾನಾದರೂ ಭಾವಿಸಿಕೊಂಡಿದ್ದೇನೆ. ಈ ಬಗ್ಗೆ ಈ ಸದನದಲ್ಲಿ ಹೆಚ್ಚಿನ ಚಿಂತನೆ ನಡೆಯಬೇಕು. ಯಾವುದೇ ಒಂದು ಸರ್ಕಾರ ಇರಲಿ. ಕುರ್ಚಿ ಮೇಲೆ ಕಣ್ಣಿಟ್ಟು ಕೆಲಸ ಮಾಡುವುದಕ್ಕಿಂತ ರಾಜ್ಯದ ಅಭಿವೃದ್ಧಿಯ ಬಗ್ಗೆ ಚಿಂತನೆ ಮಾಡಿ ಅದರ ಬಗ್ಗೆ ನಾವೆಲ್ಲರೂ ಒಗ್ಗಟ್ಟಾಗಿ ನಮ್ಮ ತಲೆಗಳನ್ನೆಲ್ಲಾ ಒಗ್ಗೂಡಿಸಿ ನಾವು ಚಿಂತನೆ ಮಾಡಿದರೆ ಈ ರಾಜ್ಯದ ರಾಷ್ಟ್ರದ ಅಭಿವೃದ್ಧಿಯಾಗುತ್ತದೆಂದು ನಾನಾದರೂ ಭಾವಿಸಿಕೊಂಡಿದ್ದೇನೆ. ಯಾರು ಯಾವುದೇ ಒಳ್ಳೆಯ ಕೆಲಸವನ್ನು ಮಾಡಿದರೂ ಸಹ ಮೆಚ್ಚುವಂಥ ಮನೋಭಾವನೆಯನ್ನು ನಾವು ಬೆಳೆಸಿಕೊಳ್ಳಬೇಕು. ತಪ್ಪಿದರೆ ತಪ್ಪು ಎಂದು ಹೇಳಿ ಅದಕ್ಕೆ ಸೂಕ್ತವಾದಂಥ ಪರಿಹಾರವನ್ನೂ ಸಹ ನಾವು ಕೊಡಬೇಕು. ತಪ್ಪು ಮಾಡಿದ್ದೀರಿ ರಾಜೀನಾಮೆ ಕೊಡಿ ಎಂದು ಬಾವಿನಲ್ಲಿ ಕುಳಿತು ಗಲಾಟೆ ಮಾಡಿ ಸಮಯವನ್ನು ವ್ಯರ್ಥಮಾಡುವುದರಲ್ಲಿಯೇ ಕಾಲ ಕಳೆದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಆದ್ದರಿಂದ ವಿರೋಧ ಪಕ್ಷದವರು ಎಷ್ಟೇ ಟೀಕೆ ಮಾಡಿದರೂ ಕೂಡ–

"ಬೇವಿನ ಬೀಜವ ಬಿತ್ತಿ
ಬೆಲ್ಲದ ಕಟ್ಟೆಯ ಕಟ್ಟಿ
ಆಕಳ ಹಾಲನೆರೆದು
ಜೇನು ತುಪ್ಪವ ಹೊಯ್ದರೆ
ಸಿಹಿಯಾಗಬಲ್ಲುದೆ ಕಹಿಯಹುದಲ್ಲದೆ ? "

ಆದ್ದರಿಂದ ನಾವು ಎಷ್ಟೇ ಒಳ್ಳೆಯ ಕೆಲಸವನ್ನು ಮಾಡಿದರೂ ಕೂಡ ಅದನ್ನು ಮೆಚ್ಚದೇ ಇರತಕ್ಕಂಥವರಿಗೆ ಏನು ಮಾಡಿದರೂ ಸಹ ಮೆಚ್ಚಿಸುವುದಕ್ಕೆ ಆಗುವುದಿಲ್ಲ. ಆದರೆ ರಾಜ್ಯದ ಹಿತದೃಷ್ಟಿಯಿಂದ ನಮ್ಮ ಸರ್ಕಾರ ಏನು ಕೆಲಸ ಮಾಡುತ್ತಿದೆ ಅದರಲ್ಲಿ ಇನ್ನಷ್ಟು ಕೆಲಸ ಮಾಡಬೇಕು. ಈ ದಿಶೆಯಲ್ಲಿ ಚುನಾಯಿತ ಪ್ರತಿನಿಧಿಗಳಾದ ನಾವೂ ಕೂಡ ಹೆಚ್ಚಿನ ಆಸ್ಥೆಯನ್ನು ವಹಿಸಬೇಕೆಂದು ಹೇಳುತ್ತಾ, ಇವತ್ತಿನ ದಿವಸ ಆಯವ್ಯಯದ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಂಥ ತಮಗೆ ಧನ್ಯವಾದಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ.ಚೆನ್ನಿಗಪ್ಪ(ಕೊರಟಗೆರೆ) : ಮಾನ್ಯ ಛೇರ್ಮನ್‌ರವರೇ, ಮಾನ್ಯ ಮುಖ್ಯಮಂತ್ರಿಗಳು ಈ ರಾಜ್ಯಕ್ಕೆ ಸಮರ್ಪಣೆ ಮಾಡಿದಂಥ 2004–05ನೇ ಸಾಲಿನ ಬಜೆಟ್‌ನಲ್ಲಿ:– ಅನೇಕ ವಿಚಾರಗಳನ್ನು ಬಹಳ ಸೊಗಸಾಗಿ ಮುದ್ರಿಸಿ ಸದನದ ಮುಂದೆ ಮಂಡನೆ ಮಾಡಿದ್ದಾರೆ. ಆದರೆ ಇದರ ಒಳಗಡೆ ಏನಿದೆ ಎಂದು ನೋಡಿದಾಗ, ಅಭಿವೃದ್ಧಿ ಕೇವಲ 10 ಪರ್ಸೆಂಟ್ ಆದರೆ ಹೇಳಿಕೆ ಮಾತ್ರ 100ಕ್ಕೆ 100 ಪರ್ಸೆಂಟ್ ಇದೆ. ಉದಾಹರಣೆಗೆ ಹೇಳುವುದಾದರೆ ಕೃಷಿ, ಕರ್ನಾಟಕ ರಾಜ್ಯದಲ್ಲಿ ನೂರಕ್ಕೆ ಎಪ್ಪತ್ತು ಜನರು ಏನು ವ್ಯವಸಾಯ ಮಾಡುತ್ತಾರೆ, ಅವರಿಗೆ ಎಷ್ಟು ಕೋಟಿ ರೂಪಾಯಿಗಳನ್ನು ನಿಗದಿ ಮಾಡಿದ್ದೇವೆ, ಯಾವ್ಯಾವ ಭಾಗದಲ್ಲಿ ಎಷ್ಟೆಷ್ಟು ನಿಗದಿ ಮಾಡಿದ್ದೇವೆ, ಯಾವ್ಯಾವ ಹಂತದಲ್ಲಿ ಎಷ್ಟು ನಿಗದಿ ಮಾಡಿದ್ದೇವೆ ಎನ್ನುವ ಮಾತನ್ನು ಹೇಳದೆ ಕೃಷಿಕರಿಗೆ ಬೆಳೆವಿಮೆ ಕೊಡುತ್ತೇವೆಂದು ಹೇಳಿದ್ದಾರೆ. ಅದರಲ್ಲಿ ನೂರಕ್ಕೆ ನೂರು ಎಲ್ಲವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಇದನ್ನು ನೋಡಿದರೆ ಕೇಂದ್ರದವರು ಕೊಟ್ಟಿಲ್ಲ ನಾವು ಕೊಡುತ್ತೇವೆ, ಆದರೆ ಅವರಿಂದ ಬಂದ ಮೇಲೆ ನಾವು ಕೊಡುತ್ತೇವೆ

ಎನ್ನುವ ಮಾತನ್ನು ಹೇಳಿ ಹೊಟ್ಟೆಯ ಮೇಲೆ ತಣ್ಣೀರು ಬಟ್ಟೆ ಹಾಕುವಂಥ ಕೆಲಸವನ್ನು ಮಾಡಿ, ಈ ಸರ್ಕಾರದವರು ಈ ರಾಜ್ಯದ ಜನತೆಗಾಗಿ ಮಾಡಿರತಕ್ಕಂಥ ಉತ್ತಮವಾದಂಥ ಸಾಧನೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇ ರೀತಿಯಲ್ಲಿ ನುಸಿರೋಗ ಒಂದು ತೆಂಗಿನ ಬೆಳೆ ಲಾಸ್ ಆದಾಗ ನಾವು ಎಲ್ಲರೂ ಸೇರಿಕೊಂಡು ರೈತರಿಗೆ ಪರಿಹಾರ ಕೊಡಿ ಎಂದು ಕೇಳಿಕೊಂಡೆವು. ದಯಮಾಡಿ ರೈತರನ್ನು ನೀವು ಉಳಿಸಬೇಕೆಂದು ಕೇಳಿದೆವು. ಆಗ ಮರಕ್ಕೆ 200, 300, 500 ರೂ.ಗಳನ್ನು ಫಿಕ್ಸ್ ಮಾಡುತ್ತೇವೆಂದು ಹೇಳಿ ಅದನ್ನು ಅಂದಾಜು ಮಾಡುವುದಕ್ಕೆ ಹೋದರು. ಅದರ ಬಗ್ಗೆ ಇಲ್ಲಿ ಒಂದು ಮಾತೂ ಹೇಳಿಲ್ಲ. ನಾವು ಪರಿಹಾರ ಕೊಡುತ್ತೇವೆ, ತೆಂಗಿನ ಮರ ಲಾಸ್ ಆದರೂ ಪರಿಹಾರ ಕೊಡುತ್ತೇವೆ ಎನ್ನುವ ಮಾತನ್ನು ಹೇಳಿಲ್ಲ. ಮಾರುಕಟ್ಟೆ ಬಗ್ಗೆ ಹೇಳುವುದಾದರೆ, ರೈತರು ಬೆಳೆದಂಥ ಬೆಳೆಗೆ ಅಲ್ಲಿ ಬೆಲೆ ಇಲ್ಲ. ಇವತ್ತು ಅವರೇನಾದರೂ ಆಕಸ್ಮಾತ್ ಚೆನ್ನಾಗಿ ಬೆಳೆಕೊಂಡು ಮಾರುಕಟ್ಟೆಗೆ ಬಂದರು ಅಂದರೆ ಅಲ್ಲಿ ದಲ್ಲಾಳಿಗಳ ಕಾಟ. ಅದರ ಬಗ್ಗೆ ದಲ್ಲಾಳಿಗಳನ್ನು ದೂರ ಮಾಡಿ ನಾವು ಯಾವ ರೀತಿ ರೇಟ್ ಫಿಕ್ಸ್ ಮಾಡುತ್ತೇವೆ, ಅವರ ಆರ್ಥಿಕ ಪರಿಸ್ಥಿತಿ ಎಷ್ಟರಮಟ್ಟಿಗೆ ಸುಧಾರಣೆ ಮಾಡುತ್ತೇವೆ ಎನ್ನುವ ಬಗ್ಗೆ ಕೂಡ ಇದರಲ್ಲಿ ಒಂದೇ ಒಂದು ಮಾತನ್ನು ಹೇಳಿಲ್ಲ. ಇವತ್ತು ಎಲ್ಲೋ ಕೆಲವು ರೈತರ ಮಕ್ಕಳಿಗೆ ಅಪಾಯಿಂಟ್ ಆಗಿರಬಹುದು, ಉದ್ಯೋಗ ದೊರಕಿರಬಹುದು. ಆದರೆ ಇವತ್ತು ಅನೇಕ ಮಂದಿ ರೈತರ ಮಕ್ಕಳು, ಬಿ.ಎ, ಬಿಎಸ್ಸಿ, ಬಿ.ಇ. ಮಾಡಿದ್ದಾರೆ, ರೈತರ ಮಕ್ಕಳು ಇವತ್ತು ಮನೆತುಂಬಾ ಏನೂ ಕೆಲಸ ಇಲ್ಲದೇ ಇದ್ದಾರೆ ಅವರಿಗೆ ಸರಿಯಾದ ಕರೆಂಟು ಇಲ್ಲ. ಸರಿಯಾದ ರೇಟ್ ಇಲ್ಲ. ಸರಿಯಾದ ಸಾರಿಗೆ ಇಲ್ಲ, ಅವರು ಬೆಳೆದಂಥ ಬೆಳೆಗೆ ಸರಿಯಾದ ಬೆಲೆ ಇಲ್ಲ. ಮಾರ್ಕೆಟ್ ಇಂಟರ್‌ವೆನಷನ್ ಇಲ್ಲ. ಅಥವಾ ಬೆಳೆ ಏನಾದರೂ ಲಾಸ್ ಆಯಿತು ಎಂದರೆ ವಿಮೆ ಅದೂ ಇಲ್ಲ. ಎಲ್ಲಾ ಪಂಗನಾಮ ಇಲ್ಲಿ ಈ ಪುಸ್ತಕವನ್ನು ನೋಡಿದರೆ ಬರೀ ಹೇಳಿದ್ದಾರೆ, ಅಷ್ಟು ಬಿಟ್ಟರೆ ರೈತರಿಗೆ ಸಿಕ್ಕಿರುವುದು ಬರೀ ಜೀರೋ. ಆದರೆ ಹೇಳಿಕೆ ಮಾತ್ರ ಈ ಆಯವ್ಯಯದಲ್ಲಿ ರೈತರ ಸಬಲೀಕರಣ, ಆಧುನೀಕರಣ, ತಂತ್ರಗಾರಿಕೆ, ಎಲ್ಲವನ್ನೂ ಮಂತ್ರದ ಮಾತಿನಲ್ಲಿ ಹೊಟ್ಟೆ ತುಂಬಿಸುವುದು ಬಿಟ್ಟರೆ, ಪ್ರಾಕ್ಟಿಕಲ್ಲಾಗಿ 10 ಪರ್ಸೆಂಟ್ ರೈತರಿಗೆ ಸಹಾಯವಾಗಿಲ್ಲ. ಅದೇ ರೀತಿಯಾಗಿ ಬಡವರಿಗೆ, ಕೂಲಿಕಾರರಿಗೆ, ಕಾರ್ಮಿಕರಿಗೆ ಕೊಡತಕ್ಕಂಥ ಹಳದಿ ಕಾರ್ಡ್‌ಗಳು. ಸುಮಾರು 66 ಲಕ್ಷ ಹಳದಿ ಕಾರ್ಡ್‌ಗಳನ್ನು ಏನು ನಮ್ಮ ಸರ್ಕಾರದವರು ಕೊಟ್ಟಿದ್ದಾರೋ ಅವುಗಳು ಕಂಟಿನ್ಯೂ ಆಗಲಿಲ್ಲ, ಎಲ್ಲಾ ಶಾಸಕರುಗಳಿಗೂ, ಯಾವ ಹಳ್ಳಿಗಳಿಗೆ ಹೋದರೂ ನಮಗೆ ಕಾರ್ಡು ಕೊಡಿ, ಕಾರ್ಡು ಕೊಡಿ, ಎಂದು ಕೇಳುತ್ತಾರೆ. ಶಾಸಕರು ಯಾವ ಹಳ್ಳಿಗೂ ಹೋಗಲಿ ನಮಗೆ ಕಾರ್ಡು ಕೊಡಿಸಿ ಎಂದು ಕೇಳುತ್ತಾರೆ. ಮೊನ್ನೆ ರಂಜಾನ್ ಹಬ್ಬದಲ್ಲಿ ಸಮಯದಲ್ಲಿ ಅಂದರೆ ಹೋದ ತಿಂಗಳಲ್ಲಿ ನಾವು ಎಲ್ಲರೂ ಗ್ರಾಮ ಸಭೆಗೆ ಹೋದರೆ, ಸ್ವಾಮಿ ನಮಗೆ ಕಾರ್ಡು ಕೊಟ್ಟಿಲ್ಲ, ಎಲ್ಲಿಗೆ ಹೋಗುತ್ತೀರಿ, ಹಸಿರು ಕಾರ್ಡಿಗೂ ರೇಷನ್ ಕೊಟ್ಟಿಲ್ಲ, ಹಳದಿ ಕಾರ್ಡಿಗೂ ಕೊಟ್ಟಿಲ್ಲ ನಾವು ಸಾಯಬೇಕಾ ಎಂದು ಕೇಳಿದರು. ಈ ದೇಶದಲ್ಲಿ ಬಡತನ ರೇಖೆಯನ್ನು ಸಂಪೂರ್ಣವಾಗಿ ನಾವು ನಿರ್ಮೂಲನೆ ಮಾಡುತ್ತೇವೆಂದು ಈ ಪುಸ್ತಕದಲ್ಲಿ ಹೇಳಿಕೊಂಡಿದ್ದಾರೆ. ಆದರೆ ಅಲ್ಲಿ ಹೋದರೆ 20 ಪರ್ಸೆಂಟ್ ಜನರಿಗೆ ಕೂಡ ಸೌಲಭ್ಯ ಸಿಕ್ಕಿಲ್ಲ. ಒಬ್ಬರಿಗೆ 10 ಕೆ.ಜಿ. ಅಕ್ಕಿ ಕೊಡುತ್ತಾರೆ, ಮತ್ತೊಬ್ಬರಿಗೆ 13 ಕೆ.ಜಿ. ಕೊಡುತ್ತಾರೆ. ಇಬ್ಬರನ್ನು ಡಿವೈಡ್ ಮಾಡಿದ್ದಾರೆ. ಒಂದು ಕಾರ್ಡು ತಲುಪಿಲ್ಲ. ಇಲ್ಲಿ 28 ಲಕ್ಷ ಕಾರ್ಡುಗಳೂ ಎಂದು ಹೇಳುತ್ತಾರೆ, ನಮ್ಮ ತಾಲ್ಲೂಕಿನಲ್ಲಿ ಇನ್ನೂ 8–9 ಲಕ್ಷ ಸಾಲದು ಬರುತ್ತದೆ, ನೀವು ಅಷ್ಟು ಕೂಡ ಕೊಡಲಿಲ್ಲ. ನಮ್ಮ ಸರ್ಕಾರ ಇದ್ದಾಗ 66 ಲಕ್ಷ ಕಾರ್ಡುಗಳನ್ನು ಕೊಟ್ಟು ಎಷ್ಟರಮಟ್ಟಿಗೆ [illegible]

ಅಗ ಮಾನ್ಯ ಸಿದ್ದರಾಮಯ್ಯನವರು ಹಣಕಾಸಿನ ಸಚಿವರು ಆಗಿದ್ದರು, ಮಾನ್ಯ ಜೆ.ಹೆಚ್.ಪಟೇಲ್ ಅವರು ಮುಖ್ಯಮಂತ್ರಿಗಳಾಗಿದರು, ಮಾನ್ಯ ದೇವೇಗೌಡರವರು ಆಗ ಮುಖ್ಯಮಂತ್ರಿಗಳು ಹಾಗೂ ಪ್ರಧಾನ ಮಂತ್ರಿಗಳು ಆಗಿದ್ದರು. ಅವತ್ತು 240 ಕೋಟಿ ರೂಪಾಯಿಗಳ ಸಬ್ಸಿಡಿ ಕೊಟ್ಟು ಪ್ರತಿಯೊಬ್ಬ ಬಡವರಿಗೆ ಕಾರ್ಡು ಕೊಡುವಂಥ ಕೆಲಸವನ್ನು ನಮ್ಮ ಸರ್ಕಾರ ಮಾಡಿತ್ತು. ಇಲ್ಲಿ ಹೇಳುತ್ತಾರೆ. ನಾಳೆ ಕೊಡುತ್ತೇವೆ, ಎಲ್ಲದಕ್ಕೂ ಯೋಜನೆ ಮಾಡಿದ್ದೇವೆ, ಎಲ್ಲವನ್ನೂ ಯೋಜನೆಯಲ್ಲಿ ಅಳವಡಿಸಿದ್ದೇವೆ, ಕೋಟಿ ಕೋಟಿ ರೂಪಾಯಿಗಳನ್ನು ಬಡವರಿಗೋಸ್ಕರ ಕೊಡುತ್ತೇವೆ ಎಂದು ಹೇಳಿದ್ದಾರೆ. ಇವತ್ತು ಸ್ಲಮ್ ಏರಿಯಾದಲ್ಲಿ ಬಡವರು ಊಟ ಇಲ್ಲದೇ ಅನೇಕ ಜನರು ಇನ್ನು ಇವತ್ತು ಅದೇ ಗೋಣಿ ತಟ್ಟು ಕಟ್ಟಿಕೊಂಡು ಅದೇ ಮನೆಯಲ್ಲಿ ವಾಸಮಾಡತಕ್ಕಂಥ ಅವರಿಗೆ ಸುಖ ಸಿಗದಿರತಕ್ಕಂಥ ಸಂದಿಗ್ದ ಪರಿಸ್ಥಿತಿ ಇದೆ. ಈ ಸರ್ಕಾರ ಈ ಬಜೆಟ್‌ನಲ್ಲಿ ಕೊಟ್ಟಿರುವ ಆರ್ಥಿಕ ಆಶ್ವಾಸನೆ ಏನಿದೆ ಅದು " ಹೊಟ್ಟೆಗೆ ಹಿಟ್ಟಿಲ್ಲ ಜುಟ್ಟಿಗೆ ಮಲ್ಲಿಗೆ ಹೂವು " ಎನ್ನುವ ಹಾಗೆ ಈ ಒಂದು ಬಜೆಟ್‌ನಲ್ಲಿ ಅನೇಕ ಹೇಳಿಕೆಗಳನ್ನು ಕೊಟ್ಟಿರುವುದು ಬಿಟ್ಟರೆ ಯಾವುದೇ ಕಾರ್ಯ ಸಾಧ್ಯವಾಗಿಲ್ಲ. ಅದೇ ರೀತಿಯಾಗಿ ನವಗ್ರಾಮ ಯೋಜನೆ ಎಂದು ಮಾಡಿ, ಆ ಯೋಜನೆಯ ಅಡಿಯಲ್ಲಿ ಸೈಟ್‌ಗಳನ್ನು ಕೊಂಡು ಕೊಳ್ಳುವುದಕ್ಕೆ ಹೋದರು, ಜಮೀನು ಕೊಟ್ಟಂಥವರಿಗೆ ಹಣವಿಲ್ಲ. ಜಮೀನು ಕೊಟ್ಟರೂ ಹಣ ಬಿಡುಗಡೆ ಮಾಡಬೇಕಾದರೆ, ಇವತ್ತಿಲ್ಲ, ನಾಳೆ ಇಲ್ಲ, ಎಂದು ಹೇಳಿ ಕೊನೆಗೆ ಜಮೀನು ಕೊಡುವುದಿಲ್ಲವೆಂದು ಸೈಟ್ ಮಾಡುವುದಕ್ಕೆ ಆಗಲಿಲ್ಲ. ಏಕೆಂದರೆ, ಇವತ್ತು 20 ಪರ್ಸೆಂಟ್ ಹಣ ಬಂದಿಲ್ಲ., ಅರ್ಧಂಬರ್ಧ ಬುನಾದಿ ಹಾಕಿಕೊಂಡು ಜನರು ಬೆಳಿಗ್ಗೆ ಎದ್ದರೆ ಒಂದು ಆಫೀಸ್‌ನಿಂದ ಮತ್ತೊಂದು ಆಫೀಸ್‌ಗೆ ತಿರುಗುವುದು ಸಿ.ಇ.ಓ. ಆಫೀಸ್‌ಗೆ ತಿರುಗುವುದು, ಎಂಎಲ್‌ಎ ಮನೆ ಹತ್ತಿರ ತಿರುಗುವುದು, ಈ ಮಟ್ಟದಲ್ಲಿ ಜನರ ಸಂಕಷ್ಟ ಇದೆ. ಆದರೆ ನಾವು ಎಲ್ಲರಿಗೂ ಸೂರು ಕೊಡುತ್ತೇವೆ, 11 ಲಕ್ಷ ಮನೆಗಳನ್ನು ನಿರ್ಮಾಣಮಾಡುತ್ತೇವೆ, 8 ಲಕ್ಷ ಸಾಧನೆ ಮಾಡಿದ್ದೇವೆಂದು ಹೇಳಿದ್ದಾರೆ, 8 ಲಕ್ಷ ಮನೆಗಳಿಗೆ ಹಣವನ್ನು ಬಿಡುಗಡೆ ಮಾಡಿದ್ದಾರೆ ಎನ್ನುವ ಒಂದು ಸಣ್ಣ ಮಾತನ್ನು ಇದರಲ್ಲಿ ಹೇಳಿಲ್ಲ. ಎಂಟೂವರೆ ಲಕ್ಷ ಮನೆಗಳು ಎಂದು ಹೇಳಿದ್ದಾರೆ. ಎಲ್ಲಿ ಎಷ್ಟು ಹಣ ಬಿಡುಗಡೆ ಮಾಡಿದ್ದೇವೆ ಎನ್ನುವ ಮಾತನ್ನು ಹೇಳಿಲ್ಲ. ಅಂದರೆ ಈ ಒಂದು ಆಯವ್ಯಯ ಕನ್‌ಫ್ಯೂಷನ್, ಜನರ ಮನಸ್ಸಿನಲ್ಲಿ ಕನ್‌ಫ್ಯೂಷನ್ ಹುಟ್ಟಬೇಕು, ಮಾತಿನಲ್ಲಿ ಮಾತ್ರ ಸಂತೋಷವಾಗುತ್ತದೆ, ಇದನ್ನು ಓದಿದಾಗ ಸಂತೋಷವಾಗುತ್ತದೆ. ಇದನ್ನು ಹೋಗಿ ನೋಡಿದಾಗ ಅಷ್ಟೇ ಸಂತೋಷವಾಗುತ್ತದೆ. ಆ ರೀತಿ ತಮ್ಮ ಹೇಳಿಕೆಯನ್ನು ಈ ಬಜೆಟ್‌ನಲ್ಲಿ ಮಂಡಿಸಿದ್ದಾರೆ, ಆದರೆ ಇನ್ನು ಮುಂದೆ ಆಶ್ರಯ ಮತ್ತು ಅಂಬೇಡ್ಕರ್ ಮನೆಗಳು, ಇಂದಿರ ಆವಾಸ್ ಮನೆಗಳು, ಕಟ್ಟಿರುವಂಥ ಮನೆಗಳಿಗೆ ಇವತ್ತು ವಿದ್ಯುಚ್ಛಕ್ತಿಯನ್ನು ಕೊಟ್ಟರು, ಅದರೆ ಅವುಗಳಿಗೆಲ್ಲಾ ಇವತ್ತು ಮೀಟರನ್ನು ಅಳವಡಿಸುತ್ತಿದ್ದಾರೆ. ಮೊನ್ನೆ ಹೋದರೆ ಅವರು ಹೇಳುತ್ತಾರೆ, ಸ್ವಾಮಿ ಎಲ್ಲಾ ಮೀಟರ್ ಹಾಕುತ್ತಾರೆ, ನಾವು ಒಂದು ಲೈಟ್ ಹಾಕಿಕೊಂಡಿದ್ದೇವೆ, ಭಾಗ್ಯಜ್ಯೋತಿ ಎಂದು ಕುಟೀರಜ್ಯೋತಿಯನ್ನು ಕೊಡಿಸಿಬಿಟ್ಟೀರಿ, ಏಕೆ ಹಾಕಿದಿರಿ ? ಎಲ್ಲವನ್ನೂ ಕಿತ್ತು ಹಾಕಿ ನಮಗೆ ಇವತ್ತು ಮೀಟರ್ ಹಾಕುತ್ತಾರೆಂದು ಹೇಳುತ್ತಾರೆ. ಇವರು ಹೇಳುತ್ತಾರೆ, ಬಡವರಿಗೆ ಹೊಟ್ಟೆ ತುಂಬಾ ಊಟ ಕೊಡುತ್ತೇವೆ, ಓದುವ ಮಕ್ಕಳಿಗೆ ಅವರ ಮನೆಗೆ ಫ್ರೀಯಾಗಿ ಬೆಳಕು ಕೊಟ್ಟಿದ್ದೇವೆ, ಎಲ್ಲಿದೆ ಸ್ವಾಮಿ ಬೆಳಕು ? ಕತ್ತಲೆ ಮಾಡಿದ್ದಾರೆ, ಕಡುಬಡವರ ಜೀವನವನ್ನು ಕತ್ತಲು ಮಾಡಿದ್ದಾರೆ, ಕೋಟ್ಯಂತರ ರೂಪಾಯಿ ಸೇರುವ ಕಡೆ ಸೇರುತ್ತಿದೆ. ಆದರೆ ಬಜಟ್‌ನಲ್ಲಿ ಮಾತ್ರ ಬಡವರಿಗೆ ಲೈಟ್ ಕೊಡುತ್ತೇವೆ, ಆಶಾಕಿರಣ, ಯಾವುದು ಸ್ವಾಮಿ ಆಶಾ ಕಿರಣ ? ಆಶಾಕಿರಣ ಇಲ್ಲ, ಲೈಟ್ ಇಲ್ಲ, ಆ ಭಾಗ್ಯ ಜ್ಯೋತಿಗೆ ಇವತ್ತು ಮೀಟರ್ ಹಾಕಿ ಅವರೆಲ್ಲರನ್ನೂ

ಸಂಕಷ್ಟಕ್ಕೆ ಈಡು ಮಾಡಿ ಬೇಡಪ್ಪ ಲೈಟು ಎನ್ನುವ ಮಟ್ಟಕ್ಕೆ ಆ ಸಮಾಜದ ಕಟ್ಟ ಕಡೆಯ ಬಡವರನ್ನು ಛಿದ್ರ ಮಾಡುವಂಥ ಇಕ್ಕಟ್ಟಿನ ಪರಿಸ್ಥಿತಿಯನ್ನು ಈ ಸರ್ಕಾರ ನಿರ್ಮಾಣ ಮಾಡಿ ತನ್ನ ಆಯವ್ಯಯದಲ್ಲಿ ಮಾತ್ರ ಮುತ್ತಿನಂಥ ಮಾತನ್ನು ಹೇಳಿ ಸಮಾಧಾನ ಮಾಡಿದೆ. ಪ್ರಾಕ್ಟಿಕಲ್ಲಾಗಿ ಬಂದು ನೋಡಬೇಕು, ದಯಮಾಡಿ ಬಂದು ನೋಡಲಿ. ಇನ್ನು ಕುಡಿಯುವ ನೀರಿನ ವಿಚಾರವಾಗಿ ಹೇಳುವುದಾದರೆ, ಕುಡಿಯುವ ನೀರಿಗಾಗಿ ನಮ್ಮ ಸರ್ಕಾರ ನೂರಕ್ಕೆ ನೂರರಷ್ಟು ಆದ್ಯತೆಯನ್ನು ಕೊಟ್ಟಿದ್ದೇವೆ, ಎಲ್ಲಾ ಊರುಗಳಲ್ಲಿ ಒಬ್ಬ ಮನುಷ್ಯನಿಗೆ ಉತ್ತಮವಾದಂಥ 55 ಲೀಟರ್ ಕುಡಿಯುವ ನೀರನ್ನು ಕೊಟ್ಟಿದ್ದೇವೆ, ಅದಕ್ಕೆ ಇಷ್ಟು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದು ಹೇಳಿದ್ದಾರೆ. ಎಷ್ಟು ಕೋಟಿ ರೂ.ಗಳು ಎಂದು ಹೇಳಿಲ್ಲ, ಎಷ್ಟು ಹಣ ಕೊಡುತ್ತೇವೆಂದೂ ಹೇಳಿಲ್ಲ. ಇಷ್ಟು ಗಂಟೆಯಲ್ಲಿ ಆ ಊರಿನಲ್ಲಿ ಕುಡಿಯುವ ನೀರು ಸರಬರಾಜು ಮಾಡುತ್ತೇವೆಂದು ಇವರು ಹೇಳಿದ್ದಾರೆ, ಆದರೆ ಊರಿನಲ್ಲಿ ಹಾಕಿದರೂ ಕರೆಂಟ್ ಇಲ್ಲ, ಸಿಸ್ಟಂ ಸುಮ್ಮನೆ ನಿಂತಿದ್ದೆ ಟ್ಯಾಂಕ್‌ನಲ್ಲಿ ನೀರು ಇಲ್ಲ, ಕರೆಂಟ್ ಇಲ್ಲ, ಕರೆಂಟ್ 2 ಗಂಟೆ, 3 ಗಂಟೆ, 4 ಗಂಟೆ ಬಂದರೂ ವೋಲ್ಟೇಜ್ ಇಲ್ಲ, ಅವುಗಳಿಗೆ ವೋಲ್ಟೇಜ್ ಇಲ್ಲ, 120–130 ವೋಲ್ಟೇಜ್ ಇದ್ದಾಗ ಯಾವ ಮೋಟಾರ್ ಓಡುವುದಿಲ್ಲ. ಹಳ್ಳಿ ಕಡೆ ಇವತ್ತು ಹೆಣ್ಣು ಮಕ್ಕಳು ಬಿಂದಿಗೆ ತೆಗೆದುಕೊಂಡು ಬೀದಿಗೆ ಬಂದು, ಬಾ ನಮ್ಮ ಊರಿಗೆ ಹೇಗೆ ಬರುತ್ತೀಯಾ ಬಾರಯ್ಯ, ಸುಳ್ಳು ಹೇಳುವುದಕ್ಕೆ ಬರುತ್ತೀಯಾ, ಎನ್ನುವಂಥ ಮಾತನ್ನು ಆಡುವಂಥ ಮಟ್ಟಕ್ಕೇ ಈ ಸರ್ಕಾರ ಈ ಒಂದು ಕೆಟ್ಟ ಪರಿಸ್ಥಿತಿಯನ್ನು ತಂದು, ಆರ್ಥಿಕವಾಗಿ ದೀವಾಳಿತನವನ್ನು ತಂದಂಥ ಸರ್ಕಾರ ಇವತ್ತು ಕೋಟ್ಯಾಂತರ ರೂಪಾಯಿಗಳನ್ನು ಕುಡಿಯುವ ನೀರಿಗಾಗಿ ಖರ್ಚು ಮಾಡಿದ್ದೇವೆಂದು ಹೇಳುತ್ತಾರೆ. ಇಂಗುಬಾವಿಗಳನ್ನು ಮಾಡಿದ್ದೇವೆಂದು ಹೇಳುತ್ತಾರೆ. ಅಕ್ಕಿ ಕೊಟ್ಟಿಲ್ಲವೆಂದು ಹೇಳುತ್ತಾರೆ, ಸೆಂಟ್ರೇಲ್‌ನವರ ಹತ್ತಿರ ಇವರು ಹೋಗಿ ಅಕ್ಕಿಗಾಗಿ ಬೇಡಬೇಕಾಗಿದೆ, ಅಕ್ಕಿ ಕೊಡಿ ಅಕ್ಕಿ ಕೊಡಿ ನಾವು ಸ್ವಲ್ಪ ದುಡ್ಡು ಕೊಟ್ಟು ಇಂಗುಬಾವಿ ಮಾಡುತ್ತೇವೆಂದು ಹೇಳುತ್ತಾರೆ. ಇವರು ಎಷ್ಟು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ, ಆ ಅಂಶ ಇದರಲ್ಲಿ ಇದೆಯೇ ? ಕುಡಿಯುವ ನೀರಿಗೆ ಅಗಲಿ ಅಥವಾ ಇಂಗುಬಾವಿ ಮಾಡುವುದಕ್ಕೆ ಆಗಲಿ ಎಷ್ಟು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ ಎನ್ನುವ ಮಾತನ್ನು ಹೇಳಿಲ್ಲ. ಆದರೆ ಬಜೆಟ್‌ನಲ್ಲಿ ಮಾತ್ರ ಇಂಗುಬಾವಿ ಮಾಡುವುದರ ಮುಖೇನ ಅಂತರ್ಜಲವನ್ನು ಜಾಸ್ತಿ ಮಾಡುತ್ತೇವೆ ಎನ್ನುವ ಮಾತನ್ನು ಬಹಳ ಚೆನ್ನಾಗಿ ಹೇಳಿರುವುದನ್ನು ಬಿಟ್ಟರೆ ಇಷ್ಟು ಕೋಟಿ ರೂಪಾಯಿಗಳನ್ನು ಈ ಒಂದು ಯೋಜನೆಗೆ ಖರ್ಚು ಮಾಡುತ್ತೇವೆ, ನಮ್ಮಲ್ಲಿ ಹಣ ಇದೆ ಎನ್ನುವಂಥ ಮಾತನ್ನು ಎಲ್ಲೂ ಹೇಳಿಲ್ಲ. ಅದೇರೀತಿಯಾಗಿ ಶಿಕ್ಷಣದ ಬಗ್ಗೆ ಹೇಳುವುದಾದರೆ, ಈ ಒಂದು ಇಲಾಖೆಯಲ್ಲಿ ಶಾಲಾ ಕೊಠಡಿಗಳ ಬಗ್ಗೆ ನಾವು ಪ್ರಸ್ತಾಪ ಮಾಡುವುದಾದರೆ, ಒಂದು ತಾಲ್ಲೂಕಿನಲ್ಲಿ 1300,1400,800, ಏನು ಶಾಲಾ ಕೊಠಡಿಗಳು ಇವೆ, ಇದರಲ್ಲಿ ಇವತ್ತಿನವರೆಗೂ 20 ಪರ್ಸೆಂಟ್ ಶಾಲಾ ಕಟ್ಟಡಗಳು ಆಗಿಲ್ಲ. ಎಲ್ಲಿ ಬರುತ್ತದೆ ದುಡ್ಡು? ಜೆಡ್‌ಪಿಯಿಂದ ಅಂದರೆ ಜೆಡ್‌ಪಿಯಲ್ಲಿ ಹಣ ಇಲ್ಲ, ಟಿಪಿ ಯಲ್ಲಿ ಅಂದರೆ ಅಲ್ಲಿ ಹಣ ಇಲ್ಲ, ನಮ್ಮ ಶಾಸಕರಿಗೆ ಅಂದರೆ ಕೇಳುವ ಹಾಗೆಯೇ ಇಲ್ಲ, ಶಾಸಕರು ಬರುತ್ತೇವೆ ಕುಳಿತು ಕೊಂಡು ಹಾಗೆಯೇ ಹೋಗುತ್ತೇವೆ. ಹಳ್ಳಿಗೆ ಹೋದರೆ ಸ್ಕೂಲ್ ಇಲ್ಲ. ಅಂಗನವಾಡಿ ಬಿಲ್ಡಿಂಗ್ ಇಲ್ಲ, ಎಷ್ಟರಮಟ್ಟಿಗೆ ಶಾಸಕರು ಉತ್ತರ ಕೊಡುತ್ತಾರೆಂದರೆ, ನಾವು ಎಲ್ಲರೂ ಶಾಸಕರೂ, ಹಳ್ಳಿಗೆ ಹೋಗಿ ಆ ಮಾತನ್ನು ಕೇಳಿದಾಗ ಬೇಡಪ್ಪ ಶಾಸಕನಾಗುವುದು ಎನ್ನುವ ಮಟ್ಟಕ್ಕೆ ಈ ಒಂದು ಆಯವ್ಯಯದಲ್ಲಿ ನಮಗೆ ಯಾವುದೇ ಒಂದು ಅನುಕೂಲವನ್ನು ಕಲ್ಪಿಸಿಕೊಟ್ಟಿಲ್ಲ. ಅದೇರೀತಿಯಾಗಿ [illegible]

ಎಂದು ಕೊಟ್ಟರು, ಕೊಡಲಿ ನಾವು ಅದನ್ನು ಸ್ವಾಗತಿಸುತ್ತೇವೆ, ಇಲ್ಲವೆಂದು ಹೇಳಲಿಲ್ಲ. ಅದಕ್ಕೆ ಯಾವುದೇ ವೈಜ್ಞಾನಿಕ ರೀತಿಯಲ್ಲಿ ಅಡಿಗೆ ಮನೆಗಳು ಆಗಬಹುದು, ಕೊಡತಕ್ಕಂಥ ಮೇಟಿರಿಯಲ್ಸ್ ಆಗಬಹುದು, ಬೇಳೆಯಾಗಬಹುದು, ಅಕ್ಕಿಯಾಗಬಹುದು, ತರಕಾರಿಯಾಗಬಹುದು, ಅಲ್ಲಿರತಕ್ಕಂಥ ಸ್ಕೂಲ್ ಟೀಚರ್ಸ್ ಅಡಿಗೆ ಮಾಡಬೇಕಾದರೆ, ಪಕ್ಕದಲ್ಲಿರತಕ್ಕಂಥ ಎಪಿಎಂಸಿ ಅಧ್ಯಕ್ಷರನ್ನು ಸೌದೆ ತರಿಸಿ ಕೊಡಿ ಎಂದು ಕೇಳುತ್ತಾರೆ. ಸ್ವಾಮಿ ನಮಗೆ ತರಕಾರಿ ತರಿಸಿ ಕೊಡಿ ಎಂದು ಕೇಳುತ್ತಾರೆ, ಈ ಮಟ್ಟಕ್ಕೆ ಮಕ್ಕಳನ್ನು ಭಿಕ್ಷುಕರನ್ನಾಗಿಸುವ ರೀತಿಯಲ್ಲಿ ನಾವು ಈಗಲೇ ಆ ಪ್ರವೃತ್ತಿಯನ್ನು ಬೆಳಸಿ ನಮ್ಮ ಹೊಸ ಯೋಜನೆಯೊಂದನ್ನು ಹಾಕಿಕೊಟ್ಟರೆ ಇವರು ಎಷ್ಟರಮಟ್ಟಿಗೆ ನಾಗರೀಕರಿಗೆ ಅನುಕೂಲವಾಗುವ ಬಜೆಟ್ ಮಂಡನೆ ಮಾಡಿದ್ದಾರೆ ಎಂದರೆ, ಇದು ಮಾನವನ ಅನಾಗರೀಕತೆಗೆ ತಳ್ಳುವಂಥ ಬಜೆಟ್ ಮಾಡಿದ್ದಾರೆ. ಈ ಇಲಾಖೆಯಲ್ಲಿ ಬಿಸಿ ಊಟಕ್ಕಾಗಿ ಎಷ್ಟು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ ? ಆನ್‌ಲೈನ್ ಲಾಟರಿ ಮಾಡಿಸಿ ಅದರಿಂದ ಬಂದ ಲಾಭ ಎಂದು ಹೇಳುತ್ತೀರಿ, ಇದು ಏಕೆ ಬೇಕು ? ಇಂಥ ಪಾಡು ಈ ಸರ್ಕಾರಕ್ಕೆ ಏಕೆ ಬೇಕು ? ಇಂಥ ಒಂದು ಕೆಳದರ್ಜೆಯ ಕೆಲಸ ಏಕೆ ಬೇಕು ? ಬೇಕಿಲ್ಲ, ಆದಕಾರಣ ನಾಗರೀಕರಣ ಮಾಡಬೇಕಾದರೆ, ಉತ್ತಮವಾದ ಶಿಕ್ಷಣ ಕೊಡಬೇಕಾದರೆ ತಕ್ಕಂತೆ ಹಣವನ್ನು ಇಟ್ಟುಕೊಂಡು ನಾವು ಮುಂದಿನ ಹೆಜ್ಜೆ ಇಡಬೇಕು, ಅದು ಬಿಟ್ಟು ಯಾವುದೇ ಯೋಜನೆ ಇಲ್ಲದೇ ಪೂರ್ವ ಚಿಂತನೆ ಇಲ್ಲದೇ ಮಾಡತಕ್ಕಂಥ ಬಜೆಟ್‌ನಲ್ಲಿ ಶಿಕ್ಷಣ ಇಲಾಖೆಯ ಆ ಬಿಸಿ ಊಟದ ಬಗ್ಗೆ ಸರಿಯಾದ ಮಾತನ್ನು, ಸರಿಯಾದ ಹಣವನ್ನು ನಿಗದಿ ಮಾಡದೇ ಮಾಡಿರುವಂಥದ್ದು ಸತ್ಯಕ್ಕೆ ದೂರವಾದಂಥ ವಿಚಾರ.

ಉತ್ತಮವಾಗಿರತಕ್ಕಂಥ ವಿದ್ಯಾಭ್ಯಾಸ ಕ್ಷೇತ್ರಕ್ಕೆ ಇವರು ಮಾಡಿರತಕ್ಕಂಥ ಅವಮಾನವಾಗಿರುವುದಲ್ಲದೆ, ಇದು ಈ ಸರ್ಕಾರ ಮಾಡಿರತಕ್ಕಂಥ ಕೆಳದರ್ಜೆ ಕೆಲಸವೆಂದು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಇನ್ನು ಪಶುಸಂಗೋಪನೆ ಇಲಾಖೆ ಬಗ್ಗೆ ಹೇಳುವುದಾದರೆ, ಇವತ್ತಿನದಿವಸ ನಮ್ಮ ದೇಶದಲ್ಲಿ ಸುಮಾರು 70 ಪರ್ಸೆಂಟ್ ಜನರು ವ್ಯವಸಾಯ ಮತ್ತು ಪಶುಸಂಗೋಪನೆ ಮೇಲೆ ಅವಲಂಬನೆಯಾಗಿ ಜೀವನ ಮಾಡುತ್ತಿದಾರೆ. ಇವತ್ತಿನ ದಿವಸ ರೈತ ಕೊಡತಕ್ಕಂಥ ಒಂದು ಲೀಟರ್ ಹಾಲಿಗೆ 8.60 ಪೈಸೆ ಕೊಡುತ್ತಾರೆ. ಇವತ್ತಿನ ದಿವಸ 8.60 ಪೈಸೆಗೆ ಬರತಕ್ಕಂಥ ಒಂದೂಕಾಲು ಕೆ.ಜಿ. ಬೂಸವನ್ನು ಒಂದು ಹಸು ತಿಂದುಬಿಡುತ್ತದೆ. ಒಂದು ಹಸುವಿನಿಂದ ಸುಮಾರು 6 ರಿಂದ 10 ಲೀಟರ್ ಹಾಲು ಬರಬಹುದು. ಇವತ್ತಿನ ದಿವಸ ಒಂದು ಹಸುವಿಗೆ ಉಪಚಾರ ಮಾಡತಕ್ಕಂಥ ಖರ್ಚು ಮತ್ತು ಆತನ ಕೂಲಿ ಲೆಕ್ಕ ಹಾಕಿದರೆ ಒಂದು ಹಸುವಿನಿಂದ 2 ರೂಪಾಯಿ ಕೂಡ ರೈತನಿಗೆ ಸಿಗುವುದಿಲ್ಲ. ಆದರೆ, ಇವತ್ತಿನ ದಿವಸ ಒಂದು ಬಾಟಲ್ ಮಿನರಲ್ ವಾಟರ್‌ಗೆ 10 ರೂಪಾಯಿ ಲಾಭ ಸಿಗುತ್ತದೆ. ಆದರೆ, ರೈತರಿಗೆ ಕೊಡಬೇಕಾಗಿರತಕ್ಕಂಥ ವಿಚಾರದ ಬಗ್ಗೆ ಬಜೆಟ್ ಪುಸ್ತಕದಲ್ಲಿ ಎಲ್ಲಿಯೂ ಕೂಡ ಪ್ರಸ್ತಾಪ ಮಾಡಿಲ್ಲ. ಮತ್ತೆ ಈ ಇಲಾಖೆಗೆ ಎಷ್ಟು ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ ಎನ್ನುತಕ್ಕಂಥದ್ದನ್ನು ಸಹ ಸರಿಯಾಗಿ ಹೇಳಿಲ್ಲ. ಇಂಜಕ್ಷನ್ ಕೊಡುವುದಕ್ಕೂ ಕೂಡ ಇವರು ಒಂದು ರೂಪಾಯಿ ಚಾರ್ಜ್ ಮಾಡಿದ್ದರು. ಮಾನ್ಯ ಸಚಿವರಾಗಿರತಕ್ಕಂಥ ಶ್ರೀ ಮಹದೇವ್‌ರವರಲ್ಲಿ ಈ ವಿಷಯದ ಬಗ್ಗೆ ಪ್ರಾರ್ಥನೆ ಮಾಡಿಕೊಂಡ ನಂತರ ಕಳೆದ ಬಜೆಟ್‌ನಲ್ಲಿ ಅದನ್ನು ಮನ್ನಾ ಮಾಡಿದ್ದಾರೆ. ಈ ಸರ್ಕಾರ ರೈತರ ಬಗ್ಗೆ ಮತ್ತು ಪಶುಸಂಗೋಪನೆ ಬಗ್ಗೆ ಹಾಗೂ ಆರ್ಥಿಕ ಸ್ವಾವಲಂಬನೆ ಬಗ್ಗೆ ಈ ಬಜೆಟ್‌ನಲ್ಲಿ ಎಷ್ಟರಮಟ್ಟಿಗೆ ವಿನಿಮಯ ಮಾಡಿದೆ ಎಂಬುದರ ಬಗ್ಗೆ ಹೇಳುವುದಾದರೆ, ರೈತರನ್ನು ಕೊನೆ ಮಟ್ಟಕ್ಕೆ ಮತ್ತು ಕೊನೆ ಸಾಲಿನಲ್ಲಿ ಕೂರಿಸಿದ್ದಾರೆ. ಆದರೆ, ಮಹಿಳಾ

ಆರ್ಥಿಕ ಸಬಲೀಕರಣ, ರೈತರ ಅಭಿವೃದ್ಧಿ ಮತ್ತು ಆರ್ಥಿಕ ಕ್ಷೇಮಾಭಿವೃದ್ಧಿ ಎಂದು ಹೇಳುತ್ತಾ ಮಂಡನೆ ಮಾಡಿರತಕ್ಕಂಥ ಬಜೆಟ್ ಇದಾಗಿದೆ. ಈ ಸರ್ಕಾರ ಮಂಡಿಸಿರತಕ್ಕಂಥ ಬಜೆಟ್‌ನ್ನು ಈ ಸಂದರ್ಭದಲ್ಲಿ ನಾನು ಖಂಡಿಸುತ್ತೇನೆ. ಈ ರಾಜ್ಯದ ಜನತೆ ಇವರಿಗೆ ಖಂಡಿತ ಶಾಪ ಹಾಕುತ್ತಾರೆ. ಮತ್ತೆ ಇವತ್ತಿನ ದಿವಸ ಹಳ್ಳಿಗಾಡಿನಲ್ಲಿರತಕ್ಕಂಥ ವಿಧವೆಯರಿಗೆ ಮತ್ತು ಅಂಗವಿಕಲರಿಗೆ ಕೊಡತಕ್ಕಂಥ ವೇತನ ಹಾಗೂ ವೃದ್ಧಾಪ್ಯ ವೇತನವನ್ನು ಕಳೆದ ಒಂದು ವರ್ಷದಿಂದ ಇನ್ನೂ ಬಿಡುಗಡೆ ಮಾಡಿಲ್ಲ. ಬಡವರಿಗೋಸ್ಕರ ಇಷ್ಟು ಕೋಟಿ ರೂಪಾಯಿಗಳನ್ನು ಕೊಡುತ್ತೇವೆ ಎನ್ನತಕ್ಕಂಥ ಚಕಾರ ಶಬ್ದವನ್ನು ಈ ಬಜೆಟ್ ಪುಸ್ತಕದಲ್ಲಿ ಹೇಳಿಲ್ಲ. ಕಳೆದ ಒಂದು ವರ್ಷದಿಂದ ಮತ್ತು ಎರಡು ವರ್ಷಗಳಿಂದ ನಮಗೆ ಪೆನ್‌ಷನ್ ಕೊಟ್ಟಿಲ್ಲವೆಂದು ವಯಸ್ಸಾಗಿರತಕ್ಕಂಥ ಅನೇಕ ಜನರು ನಾನೂ ಹಳ್ಳಿಗೆ ಹೋಗಿದಂಥ ಸಂದರ್ಭದಲ್ಲಿ ನನ್ನ ಗಮನಕ್ಕೆ ತಂದರು. ಇಂಥ ಒಂದು ಪರಿಸ್ಥಿತಿಯಲ್ಲಿಯೂ ಕೂಡ ಇದರ ಬಗ್ಗೆ ಈ ಬಜೆಟ್ ಪುಸ್ತಕದಲ್ಲಿ ಒಂದು ಸಣ್ಣ ಮಾತನ್ನೂ ಕೂಡ ಹೇಳಿಲ್ಲ. ಅಥವಾ ಇಷ್ಟು ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಇಡಲಾಗಿದೆ ಎನ್ನತಕ್ಕಂಥ ಮಾತನ್ನು ಕೂಡ ಹೇಳಿಲ್ಲ. ಇದೊಂದು ಮಾಯಾಮಂತ್ರದ ಬಜೆಟ್ ಆಗಿದೆ. ಇವತ್ತಿನ ದಿವಸ ಇವರು ಮಾಯಾಮಂತ್ರ ಮಾಡಿ ಜನರನ್ನು ನಂಬಿಸಿ ಅವರ ಮುಂದೆ ಕನ್ನಡಿ ಹಿಡಿದು ಚೆನ್ನಾಗಿದ್ದಿಯ ಎಂದು ಹೇಳುವಂತಾಗಿದೆ. ಆದರೆ, ಇವತ್ತಿನದಿವಸ ಜನರಲ್ಲಿ ಸಂತೋಷವಾಗಲಿ, ಹೊಟ್ಟೆಗೆ ಊಟವಾಗಲಿ ಇಲ್ಲ. ಇದನ್ನು ನೋಡಿ ಸಂತೋಷಪಡತಕ್ಕಂಥ ಬಜೆಟ್‌ನ್ನು ಇವತ್ತಿನದಿವಸ ಈ ರಾಜ್ಯದ ಜನತೆಗೆ ಕೊಟ್ಟಿದ್ದಾರೆ. ಇದು ಹೇಗಿದೆ ಎಂದರೆ ಹಳ್ಳಿ ಕಡೆ ಒಂದು ಮಾತನ್ನು ಹೇಳುತ್ತಾರೆ. ಏನೆಂದರೆ ಮಕ್ಮಲ್ ಟೋಪಿ ಹಾಕುವುದು ಎಂದು ಹೇಳುತ್ತಾರೆ. ಇವರೂ ಸಹ ಅದೇ ರೀತಿ ಮಾಡಿದ್ದಾರೆ. ಮತ್ತೆ ಇವತ್ತಿನ ದಿವಸ ಹಳ್ಳಿಗಳಲ್ಲಿರತಕ್ಕಂಥ ರಸ್ತೆಗಳನ್ನು ಇವರು ಬಂದು ನೋಡಬೇಕು. ರಸ್ತೆಗಳ ಅಭಿವೃದ್ಧಿ ಬಗ್ಗೆ ಮೊನ್ನೆ ದಿವಸ ಕೊಟ್ಟಿರತಕ್ಕಂಥ ಪಿ.ಎಂ.ಜಿ.ಎಸ್.ವೈ. ಕಾರ್ಯಕ್ರಮಗಳೊಂದೂ ಕೂಡ ಇನ್ನೂ ಅಪ್ರೂವಲ್ ಆಗಿಲ್ಲ. ಇದಕ್ಕೆ ಒಂದೂಕಾಲು ಕೋಟಿ ರೂ.ಗಳನ್ನು ಕೊಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರು. ಆದರೆ ಇದು ಈಗ ಕೇವಲ 20 ಲಕ್ಷ ರೂಪಾಯಿಗೆ ಬಂದಿದೆ. ಇವತ್ತಿನದಿವಸ ನಾವು ಹಳ್ಳಿಗಳಿಗೆ ಹೋಗಿ ನೋಡಿದಾಗ ಅಲ್ಲಿ ಎಲ್ಲಾ ರಸ್ತೆಗಳು ದೂಳಿನಿಂದ ತುಂಬಿದೆ. ಮತ್ತೆ ಮಾಡತಕ್ಕಂಥ ಕೆಲಸದಲ್ಲಿಯೂ ಕೂಡ ಪಿ.ಡಬ್ಲ್ಯೂ.ಡಿ. ಇಲಾಖೆಯವರನ್ನು ಪ್ಯಾಕೇಜು ಮಾಡಿ ಕೊಂಡಿದ್ದಾರೆ. ಅಂದರೆ ಪ್ಯಾಕೇಜ್ ಮಾಡಿಕೊಂಡಿರತಕ್ಕಂಥದ್ದು ಕಮೀಷನ್‌ಗೋಸ್ಕರ. ಇವತ್ತಿನ ದಿವಸ ಎಷ್ಟು ಕೋಟಿ ರೂಪಾಯಿಗಳನ್ನು ಪ್ಯಾಕೇಜ್ ಮಾಡಿಕೊಂಡಿದ್ದೀರಿ ? ಇವತ್ತಿನ ದಿವಸ ದಾಬಸ್‌ಪೇಟೆಯಿಂದ ಕುಣಿಗಲ್‌ಗೆ ಹೋಗತಕ್ಕಂಥ ರಸ್ತೆಯಲ್ಲಿ ನೂರಾರು ಗುಂಡಿಗಳು ಬಿದ್ದಿವೆ. ಈ ರಸ್ತೆಯಲ್ಲಿ ಸಾವಿರಾರು ಜನರು ಬಂದು ಹೋಗತಕ್ಕಂಥ ಈ ರಸ್ತೆಯಲ್ಲಿರುವ ಗುಂಡಿಗಳನ್ನು ಇದುವರೆಗೂ ಮುಚ್ಚಿಲ್ಲ. ಸಂಬಂಧಪಟ್ಟಂಥ ಗುತ್ತಿಗೆದಾರರನ್ನು ಕೇಳಿದರೆ ಏನು ಹೇಳುತ್ತಾನೆಂದರೆ ಮೂರು ವರ್ಷ ಗುತ್ತಿಗೆ ತೆಗೆದುಕೊಂಡಿದ್ದೇವೆ, ಕೊನೆಯ ವರ್ಷ ರಿಪೇರಿ ಕೆಲಸ ಮಾಡುತ್ತೇವೆಂದು ಹೇಳುತ್ತಾನೆ. ಮೊದಲೇ ದುಡ್ಡು ತೆಗೆದುಕೊಂಡು ಮೂರನೇ ವರ್ಷದ ಕೊನೆಯಲ್ಲಿ ಮಾಡುತ್ತೇನೆಂದು ಹೇಳುತ್ತಿದ್ದಾನೆ. ಆದರೆ, ಮೂರನೇ ವರ್ಷ ಈಗ ಮುಗಿದು ಹೋಗುತ್ತಿದೆ. ಈ ಸಂದರ್ಭದಲ್ಲಿ ಇದಕ್ಕೆ ಸಂಬಂಧಪಟ್ಟಂತೆ ನಾನು ಕೇಳುವುದೇನೆಂದರೆ, ಪ್ಯಾಕೇಜ್ ಮಾಡಿರತಕ್ಕಂಥದ್ದು ಯಾರಿಗೋಸ್ಕರ ಮತ್ತು ಯಾವ ಉದ್ದೇಶಕ್ಕೋಸ್ಕರ ಹಾಗೂ ಯಾವ ಉದ್ದೇಶಗೋಸ್ಕರ ಹಾಗೂ ಎಷ್ಟು ಕೋಟಿ ರೂಪಾಯಿಯ ಪ್ಯಾಕೇಜ್ ಮತ್ತು ಯಾವ ರಸ್ತೆಗೆ ಹಾಗೂ ಈಗ ಎಷ್ಟು ಕೊಟ್ಟಿದ್ದೇವೆ ಎನ್ನತಕ್ಕಂಥದ್ದನ್ನು ಎಲ್ಲಿಯೂ

ಕೂಡ ಹೇಳಿಲ್ಲ. ಪ್ಯಾಕೇಜ್ ಎಂದರೆ, ಪ್ಯಾಕ್ ಮಾಡಿಕೊಂಡು ಜೇಬಿನಲ್ಲಿಟ್ಟುಕೊಂಡು ಮನೆಗೆ ಹೋಗು ಎನ್ನುವಂಥದ್ದು ಈ ಬಜೆಟ್‌ನ ಮುಖ್ಯ ಉದ್ದೇಶವಾಗಿದೆ. ಪ್ಯಾಕ್ ಮಾಡಿಕೊಂಡು ಜೇಬಿನಲ್ಲಿಟ್ಟುಕೊಂಡು ಮನೆಗೆ ನಡಿ ಎನ್ನುವ ರೀತಿಯಲ್ಲಿ ಇದನ್ನು ಮಾಡಿದ್ದಾರೆ. ಈ ಬಜೆಟ್‌ನಲ್ಲಿ ಯಾವುದೇ ವಿಷಯಗಳನ್ನು ಹೇಳದೆ ಒಂದು ರೀತಿಯ ಗೊಂದಲವನ್ನು ನಿರ್ಮಾಣ ಮಾಡಿದ್ದಾರೆ. ಈ ರೀತಿಯಾದ ಒಂದು ಕತೆಯನ್ನು ಈ ರಾಜ್ಯದ ಜನತೆ ನೋಡಬೇಕಾಗಿದೆ. ಮತ್ತೆ ವಿದ್ಯುಚ್ಛಕ್ತಿ ಬಗ್ಗೆ ಹೇಳುವುದಾದರೆ, ನಮ್ಮಲ್ಲಿ ವಿದ್ಯುಚ್ಛಕ್ತಿ ಕಣ್ಣಾಮುಚ್ಚಾಲೆ ಆಟವಾಡುತ್ತಿದೆ. ಒಂದು ಗಂಟೆ ಕೊಡತಕ್ಕಂಥ ಕರೆಂಟ್‌ನಲ್ಲಿ 20 ಸಾರಿ ಕರೆಂಟ್ ಹೋಗಿರುತ್ತದೆ. ರೈತ ಹೊಲಕ್ಕೆ ಹೋಗಿ ಸ್ವಿಚ್ ಆನ್ ಮಾಡಿ ಬಂದರೆ ಕಾಲು ಘಂಟೆಗೊಂದು ಸಾರಿ ಕರೆಂಟ್ ಹೋಗುತ್ತಿರುವುದರಿಂದ ಇವತ್ತಿನ ದಿವಸ ರೈತ ಸಾಕಾಗಿ ಸನಿಕೆಯನ್ನು ಅಲ್ಲಿಯೇ ಬಿಸಾಕಿ ಮನೆಗೆ ಬಂದು ಮಲಗುತ್ತಾನೆ. ಈ ದೇಶದಲ್ಲಿರತಕ್ಕಂಥ ರೈತರಿಗೆ ವಿದ್ಯುತ್ ಸರಬರಾಜು ಮಾಡತಕ್ಕಂಥದ್ದರಲ್ಲಿ ಅನುಕೂಲವಾಗಿಲ್ಲ. ಇವತ್ತಿನ ದಿವಸ ರಾತ್ರಿ ಎರಡು ಗಂಟೆ ನಂತರ ಕರೆಂಟ್ ಕೊಡುತ್ತಾರೆ. ರೈತರಿಗೆ ಈ ರೀತಿಯಾದ ಕರ್ಮ ಏಕೆ ? ಇಲ್ಲಿರತಕ್ಕಂಥ ಶಾಸಕರಲ್ಲಿ 95 ಪರ್ಸೆಂಟ್ ರೈತರ ಮಕ್ಕಳೇ ಇದ್ದೇವೆ. ಇದರ ಬಗ್ಗೆ ಚಿಂತನೆ ಮಾಡಬೇಕು. ಇಲ್ಲಿ ಕೇವಲ 5 ಪರ್ಸೆಂಟ್ ಬೇರೆಯವರು ಇರಬಹುದು. ರಾತ್ರಿ ಎರಡು ಗಂಟೆಗೆ ಕರೆಂಟ್ ಕೊಟ್ಟರೆ ಆ ಸಮಯದಲ್ಲಿ ಅವರು ಜಮೀನಿಗೆ ನೀರು ಕಟ್ಟುವುದಕ್ಕೆ ಆಗುತ್ತದೆಯೇ ? ರೈತ ನಮ್ಮ ಹಾಗೆ ಮನುಷ್ಯನ್ನಲ್ಲವೆ ? ಮತ್ತು ಆತನಿಗೆ ಉತ್ತಮವಾದ ಆರೋಗ್ಯ ಬೇಡವೆ ? 31–03–2003 ರವರೆಗಿನ ವಿದ್ಯುತ್ ಬಾಕಿಯನ್ನು ಮನ್ನಾ ಮಾಡಿದ್ದೇವೆ ಎನ್ನತಕ್ಕಂಥ ಒಳ್ಳೆಯ ಮಾತನ್ನು ಹೇಳಿದ್ದಾರೆ. ಆದರೆ, ಬಡವರಿಗೆ ಕೊಟ್ಟಿರುವ ಭಾಗ್ಯಜ್ಯೋತಿಗೆ ಮೀಟರ್ ಹಾಕಿಸುತ್ತಿದ್ದಾರೆ. ಇವತ್ತಿನ ದಿವಸ ವಿದ್ಯುಚ್ಛಕ್ತಿ ಪಾಲಿಸಿ ಮಾಡಿಕೊಂಡು ಬೆಸ್ಕಾಂ, ಮೆಸ್ಕಾಂ, ಗೆಸ್ಕಾಂ ಈ ರೀತಿ ನೂರಾರು ಕಾಂಗಳನ್ನು ಮಾಡಿಕೊಂಡಿರತಕ್ಕಂಥದ್ದೆಲ್ಲಾ ಇವತ್ತಿನ ದಿವಸ ಟುಸ್ಕಾಂ ಆಗಿವೆ. ಯಾವ ಉದ್ದೇಶಕ್ಕೋಸ್ಕರ ಮತ್ತು ಯಾರ ಅಭಿವೃದ್ಧಿಗೋಸ್ಕರ ಈ ಟೆಸ್ಕಾಂಗಳನ್ನು ಮಾಡಿಕೊಂಡಿದ್ದೀರಿ ? ನನಗೆ ತಿಳಿದ ಮಟ್ಟಿಗೆ ಇದು ನಿಲ್ ಅಥವಾ ಬಿಗ್ ಜೀರೋ. ಒಳ್ಳೆಯ ವಿದ್ಯುಚ್ಛಕ್ತಿ ಕೊಡುವುದರ ಜೊತೆಗೆ ಉತ್ತಮವಾದಂಥ ಸಾಧನೆ ಮಾಡುತ್ತೇವೆ ಎನ್ನತಕ್ಕಂಥದ್ದರ ಬಗ್ಗೆ ಇದರಲ್ಲಿ ಚಕಾರವೆತ್ತಿಲ್ಲ.

ಛೇರ್ಮನ್ : ಮಾನ್ಯ ಚೆನ್ನಿಗಪ್ಪನವರೆ, ನಾನು ಮೆಸ್ಕಾಂ, ಬೆಸ್ಕಾಂ ಎಂಬುದನ್ನು ಕೇಳಿದ್ದೇನೆ. ಆದರೆ ಟುಸ್ಕಾಂ ಏನು ಎನ್ನತಕ್ಕಂಥದ್ದನ್ನು ತಾವು ಹೇಳಬೇಕು. ಏಕೆಂದರೆ ಇದು ಏನು ಎಂಬುದು ನನಗೆ ಗೊತ್ತಿಲ್ಲ.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಛೇರ್ಮನ್‌ರವರೆ, ಮಾನ್ಯ ಚೆನ್ನಿಗಪ್ಪನವರು ಏಕೆ ಈ ವಿಷಯವನ್ನು ಹೇಳುತ್ತಿದ್ದಾರೆಂದರೆ, ಇತ್ತೀಚೆಗೆ ಸರ್ಕಾರ ಒಂದು ಹೊಸ ಧೋರಣೆಯನ್ನು ಅನುಸರಿಸುತ್ತಿದೆ. ರೈತ ಹೊಸದಾಗಿ ವಿದ್ಯುತ್ ಕನೆಕ್ಷನ್ ತೆಗೆದುಕೊಳ್ಳಬೇಕಾದರೆ, 25 ಸಾವಿರ ರೂಪಾಯಿ ಡೆಪಾಜಿಟ್ ಮಾಡಿ ಆತನಿಗೆ ಹೊಸ ಟ್ರಾನ್ಸ್‌ಫಾರ್ಮರ್ ಹಾಕಬೇಕೆಂಬ ಮಾತನ್ನು ಸರ್ಕಾರ ಹೇಳಿದೆ. ರೈತರ ಬಗ್ಗೆ ಸರ್ಕಾರ ಎಷ್ಟು ದ್ವಂದ್ವ ನೀತಿಯನ್ನು ಅನುಸರಿಸಿದೆ ಎನ್ನತಕ್ಕಂಥದ್ದನ್ನು ಆಲೋಚನೆ ಮಾಡಬೇಕಾಗುತ್ತದೆ. ಈಗಾಗಲೇ ಬೇರೆ ಬೇರೆ ಸ್ಕೀಂಗಳಿಗೆ ಬೇರೆ ಬೇರೆ ಜನರು ಕೊಟ್ಟಿರತಕ್ಕಂಥ ಅರ್ಜಿಗಳಿಗೆ ಮಂಜೂರಾತಿ ಸಿಕ್ಕಿದೆ. ಆದರೆ, ವಿದ್ಯುತ್ ಇಲಾಖೆಯ ಈ ಒಂದು ಧೋರಣೆಯಿಂದ ರೈತ ಹೊಸ ಕನೆಕ್ಷನ್ ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲ. ಕೊನೇಪಕ್ಷ ಡಿಸೆಂಬರ್ ತಿಂಗಳ ಕೊನೆಯವರೆಗೆ ಏನು ಮಂಜೂರಾತಿಯಾಗಿದೆ ಅಂಥವರಿಗಾದರೂ ತಕ್ಷಣ ಕರೆಂಟ್ ಕನೆಕ್ಷನ್ ಕೊಡತಕ್ಕಂಥ

ಕೆಲಸವನ್ನಾದರೂ ಮಾಡಬೇಕು. ಈಗ ಅವರು 25 ಸಾವಿರ ರೂಪಾಯಿಗಳನ್ನು ಕಟ್ಟಿ ವಿದ್ಯುತ್ ಕನೆಕ್ಷನ್ ತೆಗೆದುಕೊಳ್ಳುವುದಕ್ಕೆ ಈ ಸಂದರ್ಭದಲ್ಲಿ ಯಾರಿಗೂ ಸಾಧ್ಯವಾಗುವುದಿಲ್ಲ. ಈ ರೀತಿ ಮಾಡಿರತಕ್ಕಂಥ ಧೋರಣೆ ಸರಿಯೇ ? ಇದು ರೈತರ ಪರವಾಗಿರತಕ್ಕಂಥ ಧೋರಣೆಯೇ ? ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುವುದೇನೆಂದರೆ, 2003 ನೇ ಇಸವಿಯವರೆಗೆ ವಿದ್ಯುತ್ ಬಾಕಿಯನ್ನು ಮನ್ನಾ ಮಾಡಿದ್ದೇವೆಂದು ತಾವು ಏನು ಘೋಷಣೆ ಮಾಡಿದ್ದೀರಿ, ಇದರ ಜೊತೆಗೆ 25 ಸಾವಿರ ರೂಪಾಯಿಗಳನ್ನು ಕಟ್ಟಿ ಹೊಸ ಕನೆಕ್ಷನ್ ತೆಗೆದುಕೊಳ್ಳಬೇಕೆಂದು ಮಾಡಿರತಕ್ಕಂಥ ಪಾಲಿಸಿಯನ್ನು ಸರ್ಕಾರ ತಾತ್ಕಾಲಿಕವಾದರೂ ವಿತ್‌ಡ್ರಾ ಮಾಡಬೇಕು. ಇಲ್ಲದಿದ್ದರೆ, ಇವರ ರೈತ ವಿರೋಧ ನೀತಿ ಯಾವ ರೈತನನ್ನು ಬದುಕುವುದಕ್ಕೆ ಬಿಡುವುದಿಲ್ಲ. ಆದ್ದರಿಂದ ಇದರ ಬಗ್ಗೆ ಸರ್ಕಾರ ತೀವ್ರವಾದ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಚೆನ್ನಿಗಪ್ಪ : ಮಾನ್ಯ ಛೇರ್ಮನ್ ರವರೆ, ರೈತರು ವಿದ್ಯುತ್ ಕನೆಕ್ಷನ್ ತೆಗೆದುಕೊಳ್ಳುವುದರ ಬಗ್ಗೆ ಮಾನ್ಯ ಸದಾನಂದಗೌಡರು ಪ್ರಸ್ತಾಪ ಮಾಡಿದ್ದಾರೆ. ಆದರೆ, ಇವತ್ತಿನ ದಿವಸ ಇದಕ್ಕಾಗಿ ರೈತ ದುಡ್ಡು ಕಟ್ಟುವುದಕ್ಕೂ ಕೂಡ ಆಗುವುದಿಲ್ಲ ಮತ್ತೆ ಇದಕ್ಕೆ ಲೋನ್ ಕೂಡ ಕೊಡಿಸುವುದಿಲ್ಲ. ಮತ್ತೆ ವಿದ್ಯುತ್ ಕನೆಕ್ಷನ್ ತೆಗೆದುಕೊಳ್ಳುವುದಕ್ಕೂ ಕೂಡ ಆಗುತ್ತಿಲ್ಲ. ಈ ರೀತಿಯಾದರೆ ರೈತ ಎಲ್ಲಿಗೆ ಹೋಗಿ ಸಾಯಬೇಕು ? ಇದರ ಬಗ್ಗೆ ತಾವು ಏನಾದರೂ ಆಲೋಚನೆ ಮಾಡಿದ್ದೀರಾ ? ತಾವು ಇದರ ಬಗ್ಗೆ ಯಾವುದೇ ರೀತಿಯ ಅಲೋಚನೆ ಮಾಡಿಲ್ಲ. ಈ ರಾಜ್ಯದ ಜನತೆಗೆ ತುಂಬಾ ಚೆನ್ನಾಗಿ ಬಜೆಟ್ ಓದಿದೆ ಎಂದರೆ ಆಯಿತೆ ? ಇವತ್ತಿನ ದಿವಸ ಏನಾಗಿದೆ ಎಂದರೆ ಶಾಸಕರು ಇಲ್ಲಿಗೆ ಬಂದು ಟಿಎ ಮತ್ತು ಡಿಎ ಹಣಕ್ಕಾಗಿ ಸಹಿ ಹಾಕಿ ಪಾಪದ ಹಣವನ್ನು ತೆಗೆದುಕೊಂಡು ಮನೆಗೆ ಹೋಗಬೇಕಾಗಿದೆ. ಇದು ಹೀಗಾಗಬಾರದು ಕೊನೆ ಪಕ್ಷ ಈ ರಾಜ್ಯದ ಜನತೆಯ ಆರ್ಥಿಕ ಸಬಲತೆಯನ್ನು ಗಮನದಲ್ಲಿಟ್ಟುಕೊಂಡು ಎಲ್ಲಾ ಇಲಾಖೆಯ ವತಿಯಿಂದ ಬಡವರಿಗೆ ಮತ್ತು ಸಾಮಾನ್ಯ ಜನತೆಗೆ ಅನುಕೂಲ ಆಗತಕ್ಕಂಥ ಸೌಕರ್ಯವನ್ನು ಕಲ್ಪಿಸಿಕೊಡದೇ ಹೋದರೆ ಮತ್ತು ಈ ಒಂದು ಕಾರ್ಯಕ್ಕಾಗಿ ಆಯವ್ಯಯದಲ್ಲಿ ಹಣವನ್ನು ಕ್ರೋಢಿಕರಣ ಮಾಡದೆ ಹೋದರೆ that Government is unfit to lead the state. may be Central or the state. ರಾಜ್ಯ ಮತ್ತು ಕೇಂದ್ರ ಸರ್ಕಾರಗಳೆರಡೂ ಕೂಡ ಆರ್ಥಿಕ ಸಬಲತೆಯನ್ನು ಶಕ್ತಿಯುತವಾಗಿ ನಡಸದೇ ಹೋದಾಗ ಈ ದೇಶದಲ್ಲಿ ಅಂಥ ಸರ್ಕಾರಗಳು ಇರಬಾರದು. ಅವರು ಮನೆಗೆ ಹೋಗಬೇಕು. ಇವರು ಮಾಡಿರತಕ್ಕಂಥ ಬಜೆಟ್‌ನಲ್ಲಿ ಯಾವುದೇ ರೀತಿಯ ಆರ್ಥಿಕ ಸಬಲತೆಯಿಲ್ಲ. ರೈತರ ಬಗ್ಗೆ ಕೂಡ ಯಾವುದೇ ಉಪಕಾರವನ್ನು ಎತ್ತಿಲ್ಲ. ರೈತರಿಗೆ ಕೊಡತಕ್ಕಂಥ ವಿದ್ಯುತ್ ಬಗ್ಗೆ ಸರ್ಕಾರ ಏನೊಂದು ಮಲತಾಯಿ ಧೋರಣೆಯನ್ನು ತೋರಿಸುತ್ತಿದೆ. ಅದನ್ನು ಕೂಡಲೇ ಚೇಂಜ್ ಮಾಡಬೇಕು. ಇವತ್ತಿನ ದಿವಸ ರೈತರಿಗೆ ವಿದ್ಯುತ್ತನ್ನು ದಿನಕ್ಕೆ 10 ಅಥವಾ 8 ಅಥವಾ 6 ಗಂಟೆ ಸಮಯದವರೆಗೆ ಕೊಡತಕ್ಕಂಥದ್ದನ್ನು ಬೆಳಿಗ್ಗೆ ಸಮಯದಲ್ಲಿ ಕೊಟ್ಟರೆ ರೈತರಿಗೆ ಅನುಕೂಲವಾಗುತ್ತದೆ ಎಂದು ಈ ಸಂದರ್ಭದಲ್ಲಿ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಇನ್ನು ಗ್ರಾಮೀಣ ಸಾರಿಗೆ ಬಗ್ಗೆ ಹೇಳುವುದಾದರೆ, 6 ತಿಂಗಳ ಹಿಂದೆ ಸರ್ಕಾರ ಗ್ರಾಮೀಣ ಸಾರಿಗೆ ಬಗ್ಗೆ ಹೇಳಿರತಕ್ಕಂಥದ್ದನ್ನು ನಾನು ಪತ್ರಿಕೆಯಲ್ಲ ನೋಡಿದ್ದೆ. ಪ್ರತಿ ಹಳ್ಳಿಗೆ ಗ್ರಾಮೀಣ ಸಾರಿಗೆ ವ್ಯವಸ್ಥೆ ಮಾಡಿ ಹಳ್ಳಿ ಜನರಿಗೆ ಉತ್ತಮವಾದ ಸಾರಿಗೆ ಸೌಲಭ್ಯವನ್ನು ಒದಗಿಸಿ ಅವರ ಆರ್ಥಿಕ ಪರಿಸ್ಥಿತಿಯ ಅಭಿವೃದ್ಧಿಗೆ ಕಾರಣರಾಗುತ್ತೇವೆ ಎಂದು ಇವರು ಹೇಳಿರತಕ್ಕಂಥ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಸಾರಿಗೆ ಬಸ್ಸಿನ ಕಲರ್ ಮತ್ತು ಅದರ ವಿನ್ಯಾಸ, ಬಸ್ ಓಡಿಸತಕ್ಕಂಥ

ಚಿತ್ರ ಮತ್ತು ರೈತ ಬಸ್ ಹತ್ತತಕ್ಕಂಥ ಚಿತ್ರ ಟೊಮ್ಯಾಟೋ ಬುಟ್ಟಿಯನ್ನು ಹೊತ್ತುಕೊಂಡು ಬಸ್ ಹತ್ತತಕ್ಕಂಥ ಚಿತ್ರವನ್ನೆಲ್ಲಾ ತೋರಿಸಿದ್ದರು. ಇನ್ನು ಮುಂದೆಯಾದರೂ ಎಲ್ಲಾ ಹಳ್ಳಿಗಳಿಗೆ ಬಸ್ಸಿನ ಸೌಕರ್ಯವನ್ನು ಒದಗಿಸುತ್ತಾರೆಂದು ತಿಳಿದು ನಮಗೆಲ್ಲಾ ಸಂತೋಷವಾಗಿತ್ತು. ಆದರೆ, ಇದುವರೆಗೆ ಹಳ್ಳಿಗಳಿಗೆ ಬಸ್ಸಿನ ಸೌಕರ್ಯವನ್ನು ಒದಗಿಸಿಕೊಟ್ಟಿಲ್ಲ. ಮೊನ್ನೆ ದಿವಸ ನಾನು ರಂಗನಪಳ್ಳಿ ಎಂಬ ಹಳ್ಳಿಗೆ ಹೋಗಿದ್ದಾಗ, ನೀನು ಶಾಸಕನಾದ ಮೇಲೆ ಈಗ ಬಂದಿದೆಯಾ ? ಇಲ್ಲಿಂದ ಆಚೆಗೆ ಹೋಗು. ಈ ಊರಿಗೆ ಬಸ್ಸಿನ ಸೌಕರ್ಯವಿಲ್ಲದೆ ನಾವು ಸಾಯುತ್ತಿದ್ದೇವೆ. ನಿನ್ನ ಮನೆ ಹಾಳಾಗ, ನೀನು ಮಾತ್ರ ಇಲ್ಲಿಗೆ ಕಾರಿನಲ್ಲಿ ಬಂದಿದ್ದೀಯ ? ಎಂದು ಕೇಳಿದರು. ಇಲ್ಲಿಗೆ ಬಸ್ಸಿನ ಸೌಕರ್ಯವನ್ನು ಸರ್ಕಾರ ಒದಗಿಸಿಕೊಡಬೇಕಾಗಿತ್ತು. ಆದರೆ, ಇನ್ನೂ ಒದಗಿಸಿಲ್ಲ. ಇನ್ನು ಎರಡು ತಿಂಗಳೊಳಗಾಗಿ ಇಲ್ಲಿಗೆ ಖಂಡಿತ ಬಸ್ಸಿನ ಸೌಕರ್ಯವನ್ನು ಕಲ್ಪಸಿಕೊಡತಕ್ಕಂಥ ವ್ಯವಸ್ಥೆ ಮಾಡುತ್ತೇನೆಂದು ಸುಳ್ಳು ಹೇಳಿ ಅವರಿಗೆಲ್ಲಾ ಕೈಮುಗಿದು ಅಲ್ಲಿಂದ ಬರತಕ್ಕಂಥ ಪರಿಸ್ಥಿತಿ ಆಯಿತು. ಅವರಿಗೆ ಸುಳ್ಳು ಹೇಳಿ ನಮಸ್ಕಾರ ಮಾಡಿ ಬಾಯಿ ಮುಚ್ಚಿಕೊಂಡು ಅವರಿಂದ ವಧೆ ತಿನ್ನದೆ ವಾಪಸ್ಸು ಬಂದ ಪರಿಸ್ಥಿತಿ ಕಳೆದ ವಾರ ನಡೆಯಿತು. ಇಂಥ ಪರಿಸ್ಥಿತಿ ಇಲ್ಲಿರತಕ್ಕಂಥ ಎಲ್ಲಾ ಮಾನ್ಯ ಶಾಸಕರಿಗೂ ಕೂಡ ಇದೆ. ಒಂದು ಸೌಕರ್ಯವನ್ನು ಒದಗಿಸುತ್ತೇವೆಂದು ಹೇಳಿದ ಮೇಲೆ ಅದನ್ನು ಒದಗಿಸಿ ಕೊಡಬೇಕು. ಇಲ್ಲದಿದ್ದರೆ ಹೇಳುವುದಕ್ಕೆ ಹೋಗಬಾರದು. ಗ್ರಾಮೀಣ ಸಾರಿಗೆ ಬಗ್ಗೆ ಇದರಲ್ಲಿ ಚಕಾರ ಎತ್ತಿಲ್ಲ. ಆದರೆ, ಕೇವಲ ಸಾರಿಗೆ ಎಂದು ಹೇಳಿದ್ದಾರೆ. ಇದಕ್ಕಾಗಿ ಎಷ್ಟು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ ಎಂಬುದನ್ನು ಮತ್ತು ಇದನ್ನು ಏತಕ್ಕಾಗಿ ಖರ್ಚು ಮಾಡುತ್ತೇವೆ ಎಂಬುದಾಗಲಿ ಮತ್ತು ಯಾವುದಕ್ಕೆ ಎಷ್ಟು ಖರ್ಚಾಗಿದೆ ಎಂಬುದಾಗಲಿ ಅಥವಾ ಇನ್ನು ಎಷ್ಟು ಬಂಡವಾಳ ತರುತ್ತೇವೆ ಎನ್ನತಕ್ಕಂಥ ಪ್ರಶ್ನೆ ಇಲ್ಲಿ ಎಲ್ಲಿಯೂ ಕೂಡ ಬಂದಿಲ್ಲ. ಆದ್ದರಿಂದ ಇದೊಂದು ನಿರರ್ಥಕವಾದ ಬಜೆಟ್ ಮತ್ತು ಸುಳ್ಳು ಆಶ್ವಾಸನೆಯ ಕಂತೆ ಹೊಂದಿರತಕ್ಕಂಥ ಬಜೆಟ್ ಆಗಿದೆ. ಈ ಒಂದು ವಿಚಾರದಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ ಎಂದು ಹೇಳುವುದಕ್ಕೆ ಇಷ್ಟ ಪಡುತ್ತೇನೆ.

1.20 ಪಿ.ಎಂ.

ಸ್ತ್ರೀಶಕ್ತಿ ಗುಂಪನ್ನು ಮಾಡಿರತಕ್ಕಂಥದ್ದು ಏನಿದೆ ಅದನ್ನು ನಾನು ಸ್ವಾಗತ ಮಾಡುತ್ತೇನೆ. 150 ಕೋಟಿ ರೂ. ಮತ್ತು 60 ಕೋಟಿ ರೂ.ಗಳು ಎಂದು ಹೇಳಿಬಿಟ್ಟರು. ಇಷ್ಟು ಕೋಟಿ ರೂ.ಗಳನ್ನು ನಿಗದಿ ಮಾಡಿದ್ದೇವೆಂದು ಹೇಳುತ್ತಾರೆ. ಅದಕ್ಕೆ 5 ಸಾವಿರ ರೂ.ಗಳ ಸಬ್ಸಿಡಿ ಹಣ ಮಾತ್ರ ಕೊಡುತ್ತಾರೆ. ಆ ಟರ್ನ್‌ಓವರ್ ಹಣವನ್ನು ಬ್ಯಾಂಕಿನಲ್ಲಿಟ್ಟು ಏನು ಮಾಡಲು ಸಾಧ್ಯ ? 15 ರಿಂದ 20 ಜನ ಉತ್ತಮರಾದ ಮಹಿಳೆಯರು ಅವರಿಗೆ ಪಾಪ ಇವತ್ತು ಕೆಲಸವಿಲ್ಲ, ಮನೆಯ ಕೆಲಸವನ್ನು ಬಿಟ್ಟು ಸಣ್ಣ ಕೈಗಾರಿಕೆ ಯಲ್ಲಿ ಬಂದು ಜೀವನ ಮಾಡಬೇಕೆಂದು ಅವರು ಬಂದರೆ, ಅವರು ತಯಾರು ಮಾಡಿರುವ ವಸ್ತುಗಳನ್ನು ಕೊಂಡುಕೊಳ್ಳುವವರು ಇಲ್ಲ. ಅವರು ತಯಾರು ಮಾಡಿರುವ ವಸ್ತುಗಳಿಗೆ ಬೆಲೆ ನಿಗದಿಯಾಗಿಲ್ಲ. ಸಫಿಷಿಯೆಂಟ್ ಫಂಡ್ಸ್ ಇಲ್ಲ. ಒಂದೊಂದು ಸ್ತ್ರೀ ಶಕ್ತಿ ಗುಂಪುಗಳಿಗೆ 5 ರಿಂದ 10 ಸಾವಿರ ರೂ.ಗಳನ್ನು ಕೊಟ್ಟರೆ 20 ಜನ ಹೆಣ್ಣು ಮಕ್ಕಳು ಏನು ಮಾಡುತ್ತಾರೆ ? ಶ್ರೀಮತಿ ಮೋಟಮ್ಮನವರು ಮಾಡಿರುವ ಒಳ್ಳೆಯ ಕೆಲಸವನ್ನು ನಾನು ಸ್ವಾಗತ ಮಾಡುತ್ತೇನೆ. ಅವರನ್ನು ಆ ಮಟ್ಟಕ್ಕೆ ತೆಗೆದುಕೊಂಡು ಹೋಗಬಾರದು, ಇವರನ್ನು ಒಂದೊಂದು ಕಂಪನಿಯವರಿಗೆ 200 ರಿಂದ 400 ರೂ.ಗಳವರೆಗೆ ಕೊಡುತ್ತೀರಲ್ಲಾ, ಆ ಹೆಣ್ಣುಮಕ್ಕಳ ಅಭಿವೃದ್ಧಿಗೋಸ್ಕರ ಅಟಲೀಸ್ಟ್ ಒಂದೊಂದು ಲಕ್ಷ ರೂ.ಗಳನ್ನು ಒಂದೊಂದು ಗುಂಪಿಗೆ ವಿಥೌಟ್ ಇಂಟರೆಸ್ಟ್ ಕೊಡಿ. ಅವರು ತಯಾರು

ಮಾಡುವಂಥ ವಸ್ತುಗಳಿಗೆ ಸರ್ಕಾರ ಬೆಲೆಯನ್ನು ನಿಗಧಿ ಮಾಡಿ ತೆಗೆದುಕೊಳ್ಳಲಿ. ಆಗ ನೀವು ಮಾಡಿರುವ ಸ್ತ್ರೀ ಸಬಲತೆ. ಇಲ್ಲದಿದ್ದರೆ ಅದು ತಪ್ಪು ಎಂದು ಹೇಳಬಹುದು. ಅದು ಯಾವುದು ಇಲ್ಲ, 5 ಸಾವಿರ ರೂ.ಗಳ ಒಂದು ಟಿಪ್ಸ್ ಕೊಡುತ್ತಿದ್ದೀರಿ. ಹೊಟೇಲನಲ್ಲಿ ಸಾಹುಕಾರರು ಟೀ ಕುಡಿದು ಟಿಪ್ಸ್ ಕೊಡುತ್ತಾರಲ್ಲಾ, ಆ ಮಟ್ಟಕ್ಕೆ ತಂದಿರುತ್ತೀರಿ.

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) : ಮಾನ್ಯ ಛೇರ್ಮನ್‌ರೆ, ಮಾನ್ಯ ಸದಸ್ಯರು ಸ್ತ್ರೀ ಶಕ್ತಿ ಕಾನ್ಸೆಪ್ಟ್ ಬಗ್ಗೆ ಸರಿಯಾಗಿ ಅರ್ಥವನ್ನು ಮಾಡಿಕೊಂಡಂತೆ ಕಾಣುತ್ತಿಲ್ಲ. ಏಕೆಂದರೆ ಸ್ತ್ರೀಶಕ್ತಿ ಗುಂಪುಗಳಿಗೆ ಕೋಟ್ಯಾಂತ್ರ ಲಕ್ಷಾಂತರ ರೂ.ಗಳನ್ನು ಇನ್‌ವೆಸ್ಟಮೆಂಟ್ ಮಾಡಿ ಅವರನ್ನು ಸಬಲೀಕರಣ ಮಾಡಬೇಕು ಎನ್ನುವುದಲ್ಲ. ಸ್ತ್ರೀಶಕ್ತಿ ಗುಂಪಿನವರ ಕನಿಷ್ಟ ಕಷ್ಟವೇನು ? ಗ್ರಾಮೀಣ ಮಹಿಳೆಯರು ಕಷ್ಟಗಳನ್ನು ಅನುಭವಿಸುತ್ತಿದ್ದರು, ಅವರ ಗಂಡ ಕುಡುಕ, ಗಂಡ ಅವರನ್ನು ಬಿಟ್ಟು ಹೋದರೆ, ಬೇರೆ ಬೇರೆ ರೀತಿಯಿಂದ ಗಂಡಾಂತರಕ್ಕೆ ಅವರು ಒಳಗಾದಾಗ, ಅವರು ಬಸುರಿಯಾಗಿದ್ದಾಗ 500 ರೂ. ಗಳನ್ನು ಖರ್ಚು ಮಾಡುವುದಕ್ಕಾದರೂ ಅವರು ಬೇರೆಯವರ ಕಡೆ ಕೈಯನ್ನು ಒಡ್ಡಬೇಕಾಗಿತ್ತು. ಇದು ಹಾಗಲ್ಲ. ಇದು ಹಾಗಾಗಬಾರದು, ತಮ್ಮ ಕಷ್ಟಗಳನ್ನು ನಿವಾರಣೆ ಮಾಡಿಕೊಳ್ಳಲಿಕ್ಕೆ ಅವರಿಗೆ ಒಂದಿಷ್ಟು ಸಹಾಯವನ್ನು ಮಾಡಬೇಕು, ಅವರಿಗೆ ಉಳಿತಾಯ ಮಾಡುವ ಒಂದು ಮನೋಭಾವನೆಯನ್ನು ಹಚ್ಚಬೇಕು ಎನ್ನುವ ದೃಷ್ಟಿಯಿಂದ ಮಾಡಿದ್ದು, ಪ್ರಾರಂಭದಲ್ಲಿ ಸುತ್ತು ನಿಧಿಯನ್ನು ನಾವು ಹಂಚಲಿಲ್ಲ, ಆದರೆ ಉಳಿತಾಯವೆಷ್ಟು ಆಗಿತ್ತು ಗೊತ್ತೆ ? 750 ಕೋಟಿ ರೂ.ಗಳಾಗಿತ್ತು, ಈಗ ಒಂದು ಲಕ್ಷ ಗುಂಪುಗಳಿಗೆ 150 ಕೋಟಿ ರೂ.ಗಳು ಉಳಿತಾಯ ಮಾಡಿದ್ದಾರೆಂದರೆ ನಾವು ನೀವು ಹೆಮ್ಮೆಯನ್ನು ಪಡಬೇಕು. ಏಕೆಂದರೆ ಗಂಡಸರು ಎಲ್ಲದಕ್ಕೂ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್, ಬ್ಯಾಂಕ್ ಆಕೌಂಟ್ಸ್ ಮತ್ತು ಆಸ್ತಿ ಎಲ್ಲ ದುಡ್ಡನ್ನು ತೆಗೆಯಬೇಕೆಂದರೆ ಅಷ್ಟೊಂದು ಹಣ ಯಾರ ಅಕೌಂಟ್‌ನಲ್ಲಿ ಇಲ್ಲ. ಅವರು ಮೊದಲಿನಿಂದಲೂ ಅಚ್ಚಿಟ್ಟು, ಬಚ್ಚಿಟ್ಟು ಸಂಸಾರ ಮಾಡು, ಹೊಟ್ಟೆ ಬಟ್ಟೆ ಕಟ್ಟಿ ಮಕ್ಕಳನ್ನು ಸಾಕು. ಇದೆಲ್ಲಾ ಒಂದು ಕಾನ್ಸೆಪ್ಟ್ ಇದೆ. ಅದನ್ನು ನಾವು ಇನ್ನಷ್ಟು ಸುಧಾರಣೆ ಮಾಡಬೇಕೆನ್ನುವ ದೃಷ್ಟಿಯಿಂದ ನಾವು ಈ ಕೆಲಸವನ್ನು ಮಾಡಿದ್ದು. ಈಗ ನೋಡಿ, ಅವರಿಗೆ ನಾವು ಗಳಿಸಿದಂಥ ಹಣವನ್ನು ಕಿಂಚಿತ್ತು ಉಳಿಸಿ, ಸರ್ಕಾರ ಕೊಡುವ ಸಹಾಯಧನದೊಂದಿಗೆ ಬದುಕಬೇಕೆಂದು ಹೇಳಿ, ಈ ಯೋಜನೆಯನ್ನು ಯಾರು ಮಾಡಿದ್ದರು ? ಅನೇಕ ಸರ್ಕಾರಗಳು ಬಂದುಹೋಗಿದ್ದೆ ಇದರ ಬಗ್ಗೆ ಯಾರಾದರು ಯೋಚನೆ ಮಾಡಿದ್ದರಾ ? ಇವತ್ತು 15 ಲಕ್ಷ ಜನ ಹೆಣ್ಣು ಮಕ್ಕಳು ಆರ್ಥಿಕವಾಗಿ ಸಬಲರಾಗಿದ್ದಾರೆ, ಅವರ ಮುಖದಲ್ಲಿ ಸಂತೋಷವಿದೆ, ನಗು ಇದೆ, ಅದನ್ನು ನೋಡಿ ನೀವು ಹೆಮ್ಮೆಯನ್ನು ಪಡಬೇಕು, ನಾವು ಕೊಟ್ಟಿರುವ 5 ಸಾವಿರ ರೂ.ಗಳು ಇದೆಯಲ್ಲಾ ಅದು ಸ್ತ್ರೀಶಕ್ತಿ ಗ್ರಾಮೀಣ ಬ್ಯಾಂಕ್ ಮಾಡಲಿಕ್ಕೆ, ನೋಡಿ ಈಗ ನ್ಯಾಷನಲ್ ಬ್ಯಾಂಕಿಗೆ ಹೋಗುತ್ತಾರೆ, 50 ಸಾವಿರ ರೂ.ಗಳನ್ನು ಕೇಳುತ್ತಾರೆ, ಒಂದು ಲಕ್ಷ ರೂ.ಗಳ ಸಾಲವನ್ನು ಕೊಡುತ್ತಾರೆ, ಆದರೆ ಆ ಬ್ಯಾಂಕಿನವರು 'ಏನು ಗೊತ್ತೆ, ಸಾಲವನ್ನು ಕೊಡುವುದಕ್ಕೆ ಹಿಂದೇಟು ಹಾಕುತ್ತಿದ್ದಾರೆ. ಮಹಿಳೆಯರದ್ದು ಸಣ್ಣ ಸಣ್ಣ ವ್ಯವಸಾಯ ಸಹಕಾರ ಬ್ಯಾಂಕಿನ ತರಹ ಆದರೆ ಅವರ ಹಣವನ್ನು ಅವರೇ ಅಲ್ಲಿ ತೆಗೆದುಕೊಳ್ಳಲಿಕ್ಕೆ ಮತ್ತು ಅವರು ತಮ್ಮ ಆಕ್ಟಿವಿಟೀಸ್ ಪ್ರಾರಂಭ ಮಾಡಲಿಕ್ಕೆ ಅನುಕೂಲವಾಗುತ್ತದೆ. ಸ್ತ್ರೀಶಕ್ತಿ ಗುಂಪಿನ ಎಲ್ಲಾ ಹೆಣ್ಣುಮಕ್ಕಳೂ ಆದಾಯ ಉತ್ಪನ್ನ ಚಟುವಟಿಕೆಯಲ್ಲಿಯೇ ತೊಡಗಬೇಕೆಂದು ಅಲ್ಲ, ಕನಿಷ್ಟ ಕಷ್ಟಗಳನ್ನು ತಾವೇ ನಿವಾರಣೆ ಮಾಡಿಕೊಳ್ಳಬೇಕು, ಬರುವ ಗಂಡಾಂತರವನ್ನು ಅವರು ಎದುರಿಸಬೇಕು ಎನ್ನುವ ಆ

ಕಾನ್ಸ್‌ಫ್ಟ್ ನಿಂದ ಮಾಡಿದ್ದು, ಎಲ್ಲರೂ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದಿಲ್ಲ. ನಮ್ಮ ಹೆಣ್ಣುಮಕ್ಕಳು ಬೆಳೆಯುವ ಅಡಿಕೆಯ ಎಲೆಯಿಂದ ಊಟದ ತಟ್ಟೆಗಳನ್ನ ಮಾಡುತ್ತಿದ್ದಾರೆ, ಅದನ್ನು ಇವತ್ತು ಎಲ್ಲರೂ ಕೊಂಡುಕೊಳ್ಳುತ್ತಿದ್ದಾರೆ. ಅದೇರೀತಿ ನಮ್ಮ ಮುತ್ತಗದ ಎಲೆಯಲ್ಲಿ ಊಟದ ತಟ್ಟೆಗಳನ್ನು ಬಟ್ಟಲುಗಳನ್ನು ಮಾಡಿದ್ದಾರೆ, ಅಕ್ಷರ ದಾಸೋಹಕ್ಕೆ ಖಾರದ ಪುಡಿಯನ್ನು ಸಪ್ಲೈ ಮಾಡುತ್ತಿದ್ದಾರೆ. ಇಸ್ಕಾನ್ ಟೆಂಪಲ್‌ನವರು ಕೂಡ ಊಟದ ತಟ್ಟೆಗಳನ್ನು ಸ್ತ್ರೀಶಕ್ತಿ ಗುಂಪಿನವರ ಕಡೆಯಿಂದಲೇ ತೆಗೆದುಕೊಳ್ಳುತ್ತಿದ್ದಾರೆ. ಪ್ರತಿಯೊಂದು ಸ್ತ್ರೀಶಕ್ತಿ ಗುಂಪಿನವರು ಆದಾಯ ಬರುವಂಥ ಚಟುವಟಿಕೆಗಳನ್ನು ಮಾಡಬೇಕೆಂದು ಏನಿಲ್ಲ. ಇಂಡಿವಿಜ್ಯುವಲ್ ಆಗಿ ಒಬ್ಬ ಹೆಣ್ಣುಮಗಳು ಒಂದು ಹಸು ಸಾಕಬಹುದು, ಎರಡು ಕೋಳಿಗಳನ್ನು ಸಾಕಬಹುದು, ತರಕಾರಿ ಮಾರಬಹುದು, ಹೂವು ಮಾರಬಹುದು, ಅದಕ್ಕೆ ಕೋಟ್ಯಾಂತರ ರೂಪಾಯಿಗಳು 'ಏನು ಬೇಕಾಗಿಲ್ಲ, ಒಟ್ಟಿನಲ್ಲಿ ಹಣವನ್ನು ಉಳಿತಾಯ ಮಾಡಬಹುದು ಒಬ್ಬ ಬೇಜವಾಬ್ದಾರಿ ಗಂಡ ಇದ್ದರೆ ಒಬ್ಬ ಅಸಹಾಯಕ ಗಂಡನನ್ನು ಕಟ್ಟಿಕೊಂಡು ಒಬ್ಬ ಹೆಣ್ಣುಮಗಳು ತನ್ನ ಬದುಕನ್ನು ನಡೆಸಲಿಕ್ಕೆ ಒಂದು ಶಕ್ತಿಯನ್ನು ತುಂಬುವಂಥ ಕೆಲಸ ಅಷ್ಟೇ, ತಾವು ಅನ್ಯಥಾ ಭಾವಿಸಬಾರದು.

ಶ್ರಿ ಸಿ.ಚೆನ್ನಿಗಪ್ಪ : ಮಾನ್ಯ ಛೇರ್ಮನರೆ, ಮಾನ್ಯ ಸಚಿವರು ಬಹಳ ಚೆನ್ನಾಗಿ ಹೇಳುತ್ತಾರೆ, ಆದರೆ ಅದರ ಬಗ್ಗೆ ನಮಗೂ ಗೊತ್ತು, ಅದರೆ ಪಾಪ ಅವರ ಅಕೌಂಟ್ ಯಾರ ಹೆಸರಿನಲ್ಲಿ ಇದೆ ಎಂಬುದು ಗೊತ್ತಿಲ್ಲ. ನಮಗೆಲ್ಲರಿಗೂ ಗೊತ್ತಿರುವ ವಿಚಾರ, ಸ್ತ್ರೀಶಕ್ತಿಯನ್ನು ಪರಿಪಾಲನೆ ಮಾಡುವುದಕ್ಕೆ ಹೋದರೆ ಮನೆಯ ಕೆಲಸವನ್ನು ಯಾವಾಗ ಮಾಡುವುದು ? ಅವರು ಹಸುವಿನ ಹಾಲನ್ನು ಮೊದಲಿನಿಂದಲೂ ಕರೆಯುತ್ತಿದ್ದರು. ಇದು ಎಲ್ಲರಿಗೂ ಗೊತ್ತಿರುವ ವಿಚಾರ. ಆದರೆ ನೀವೇನು ಹೇಳುತ್ತೀರಲ್ಲಾ, ಸ್ತ್ರೀಶಕ್ತಿಯನ್ನ ಬಲಪಡಿಸುತ್ತೇವೆ, ಅವರಿಗೆ ಗೌರವವನ್ನು ಕೊಡುತ್ತೇವೆ ಆಲ್‌ರೈಟ್ ವೆಲ್‌ಕಂ, ಮಾಡಿ, ಆದರೆ ಅದಕ್ಕೆ ನಿಗದಿತವಾದ ಹಣವನ್ನು ಬಿಡುಗಡೆ ಮಾಡಿದ್ದೀರಾ ?

ಛೇರ್ಮನ್ : ಚೆನ್ನಿಗಪ್ಪನವರೆ, ತಾವು ಪುರುಷ ಪ್ರಾಬಲ್ಯದ ಈ ಸಮಾಜದಲ್ಲಿ ಪುರುಷ ಪ್ರಾಬಲ್ಯಕ್ಕೆ ಪ್ರಾಧಾನ್ಯತೆ ಕೊಡುತ್ತೀರಿ ಅಂದ ಹಾಗೆ ಆಯಿತು.

ಶ್ರೀ ಸಿ.ಚೆನ್ನಿಗಪ್ಪ : ಮಾನ್ಯ ಛೇರ್ಮನರೆ, ನೋ ನೋ. ನಾವು ಹೆಣ್ಣುಮಕ್ಕಳಿಗೆ ತಾಯಿ ಗೌರವವನ್ನು ಕೊಡುತ್ತೇವೆ. ಅದರಲ್ಲಿ ಎರಡು ಮಾತಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಮತ್ತು ಸಣ್ಣ ನೀರಾವರಿ ಸಚಿವರು) : ಮಾನ್ಯ ಛೇರ್ಮನರೆ, ಶ್ರೀ ಚನ್ನಿಗಪ್ಪನವರೆ, ನೋಡಿ ಹುಷಾರ್, ಸ್ತ್ರೀಶಕ್ತಿ ವಿರುದ್ಧ ನೀವು ಹುಷಾರವಾಗಿ ಮಾತನಾಡಿ, ಇಲ್ಲದಿದ್ದರೆ ನಿಮ್ಮ ಮತಕ್ಷೇತ್ರಕ್ಕೆ ಹೋದಾಗ ಎಲ್ಲರೂ ಒನಕೆಯನ್ನು ತೆಗೆದುಕೊಂಡು ನಿಲ್ಲಬಹುದು.

ಶ್ರೀ ಹೆಚ್.ಎಂ.ರೇವಣ್ಣ : ಸಾರಾಯಿ ಮಾರುವವರನ್ನು ಅಡ್ಡ ಹಾಕುತ್ತಿದ್ದಾರೆ, ಬಹಳ ಹುಷಾರಾಗಿ ಊರ ಕಡೆ ಹೋಗಬೇಕು, ಬಹಳ ಕಷ್ಟ ಇದೆ. ನೀವು ಬಿಸಿ ಊಟದ ಬಗ್ಗೆ ಮತ್ತು ಸ್ತ್ರೀಶಕ್ತಿ ಬಗ್ಗೆ ಮಾತನಾಡುವಾಗ ಸ್ವಲ್ಪ ಯೋಚನೆಯನ್ನು ಮಾಡಿ, ಏಕೆಂದರೆ ಒಡವರು ನಿಮ್ಮ ಮೇಲೆ ಬಿದ್ದಾರು.

ಶ್ರೀ ಸಿ.ಚೆನ್ನಿಗಪ್ಪ : ಮಾನ್ಯ ಛೇರ್ಮನರೆ, ಪಾಪ, ಮಾನ್ಯ ಸಚಿವರು ಹೇಳುತ್ತಾರೆ, ಸರ್ಕಾರದಿಂದ ಕೆಲಸ ಮಾಡುತ್ತೇವೆ ಎಲೆಕ್ಷನ್ ಬಂತು ಓಟು ತೆಗೆದುಕೊಳ್ಳಬೇಕೆಂದು ಹೇಳುತ್ತಾರೆ, ಆದರೆ ಅದು ಸಾಧ್ಯವಾಗುವುದಿಲ್ಲ. ಇದು ಎಲ್ಲರಿಗೂ ಗೊತ್ತು, ಎಷ್ಟರಮಟ್ಟಿಗೆ ಸ್ತ್ರೀಶಕ್ತಿಯನ್ನು ಸಬಲೀಕರಣ ಮಾಡಿದ್ದಾರೆ ಇದರ ಹಿಂದೆ ನಾವು ಹೇಗೆ ಇದ್ದೆವು, ಇವರು ಕೊಟ್ಟಿರುವ ದುಡ್ಡು ಎಷ್ಟು

ಇವರ ಸುತ್ತು ನಿಧಿ ಎಷ್ಟು ? ಇವರ ಸಬ್ಸಿಡಿ ಎಷ್ಟು ಎನ್ನುವುದರ ಬಗ್ಗೆ ಎಲ್ಲರಿಗೂ ಗೊತ್ತಿದೆ. ಅದರ ಬಗ್ಗೆ ಎರಡು ಬೇಕಾಗಿಲ್ಲ. ಬಿಸಿಯೂಟವನ್ನು ಕೊಡಿಸಿ ಬಿಟ್ಟು ಓಟನ್ನು ಗಳಿಸುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಹೆಚ್.ಎಂ.ರೇವಣ್ಣ (ರೇಷ್ಮೆ, ಜವಳಿ, ಮೂಲಭೂತ ಸೌಕರ್ಯ ಅಭಿವೃದ್ಧಿ ನಾಗರೀಕ ವಿಮಾನಯಾನ ಸಚಿವರು) : ಮಾನ್ಯ ಛೇರ್ಮನರೆ, ದುಡ್ಡು ಕೊಡಬೇಕಾಗಿಲ್ಲ, ಮಹಿಳೆಯರಿಗೆ ಸ್ವಾಭಿಮಾನ ಕೊಡಬೇಕು. ಕೀಳರಿಮೆ ಹೋಗಿ ಸ್ವಾಭಿಮಾನದಿಂದ ಬದುಕಬೇಕು ಎನ್ನುವುದರ ಬಗ್ಗೆ ಕಲಿಸುತ್ತಿದ್ದೇವೆ. ಆತ್ಮಬಲವನ್ನು ಕೊಟ್ಟಿದ್ದೇವೆ. ಮಹಿಳೆಯರ ಆತ್ಮಬಲ, ಸ್ವಾಭಿಮಾನ ಹೆಚ್ಚಾಗಿದೆ. ಕೀಳರಿಮೆಯಿಂದ ಅವರ ನೋವನ್ನು ತಪ್ಪಿಸುವಂಥ ಕೆಲಸವಾಗಿದೆ. ದುಡ್ಡು ಎಷ್ಟು ಅಂತ ಮುಖ್ಯವಲ್ಲ ಎಷ್ಟು ಸ್ವಸಹಾಯ ಗುಂಪುಗಳು ಆಗಿದೆ. ಇವತ್ತು ಎಷ್ಟು ಸುತ್ತು ನಿಧಿಯಾಗಿದೆ ಎನ್ನುವುದರ ಬಗ್ಗೆ ಪರಿಶೀಲನೆ ಮಾಡಿ. ಇದರ ಬಗ್ಗೆ ಅಷ್ಟು ಲಘುವಾಗಿ ಮಾತನಾಡುವುದು ಬೇಡ.

ಶ್ರೀ ಸಿ.ಚೆನ್ನಿಗಪ್ಪ : ಮಾನ್ಯ ಛೇರ್ಮನರೆ, ನಾವು ಸ್ತ್ರೀಯರಿಗೆ ಕೊಡತಕ್ಕಂಥ ಗೌರವ ಮೊದಲನೆಯದು. ಪ್ರತಿಯೊಂದು ವಿಚಾರದಲ್ಲೂ ಅವರನ್ನು ತಾಯಿಸ್ಥಾನದಲ್ಲಿಟ್ಟು ಗೌರವವನ್ನು ಕೊಡುತ್ತೇವೆ ಎನ್ನುವುದರಲ್ಲಿ ಎರಡು ಮಾತಿಲ್ಲ. ತಮಗೆ ಒಂದು ಹೇಳುತ್ತೇನೆ, ಇವರು ಸ್ತ್ರೀಶಕ್ತಿಯನ್ನು ಬಲಪಡಿಸುತ್ತೇವೆಂದು ಹೇಳುತ್ತಾರೆ. ಸರ್ಕಾರದ ವತಿಯಿಂದ ಎಷ್ಟು ಹಣವನ್ನು ಕೊಟ್ಟು ಅವರ ಆತ್ಮಸಬಲತೆಯನ್ನು ಮಾಡಿದ್ದೀರಾ ? ಸ್ತ್ರೀಶಕ್ತಿಗೆ ಕೊಟ್ಟಿರುವ 5 ಸಾವಿರ ರೂ.ಗಳು ಏನಿದೆ ಇದು ಸಾಲದು ಎನ್ನುವ ಮಾತನ್ನು ಹೇಳುತ್ತೇನೆ. ಒಂದು ಲಕ್ಷ ರೂ.ಗಳನ್ನು ಕೊಡಬೇಕೆಂದು ಸರ್ಕಾರಕ್ಕೆ ನಾವು ಡಿಮ್ಯಾಂಡ್ ಮಾಡುತ್ತೇವೆ. ಅವರು ತಯಾರು ಮಾಡಿರುವ ವಸ್ತುಗಳನ್ನು ರೇಟ್ ಫಿಕ್ಸ್ ಮಾಡಿ ತೆಗೆದುಕೊಳ್ಳುವುದಕ್ಕೆ ಹೇಳಿದ್ದೀರಿ. ಅವರನ್ನು ಇಲ್ಲಿ ಕಂಡೆಮ್ ಮಾಡುವ ಪ್ರಶ್ನೆಯೇ ಇಲ್ಲ. ಸ್ತ್ರೀಶಕ್ತಿ ಮತ್ತು ಬಿಸಿಯೂಟ ಬೇಕೇ ಬೇಕು. ಶಾಲೆಯನ್ನು ಕಟ್ಟಿದ್ದೀರಾ, ಅವರಿಗೆ ಟೈಮ್‌ಗೆ ಸರಿಯಾಗಿ ರೇಷನ್ ಸಪ್ಲೈ ಮಾಡಿದ್ದೀರಾ ? ಇಲ್ಲವಲ್ಲಾ. ಹಳ್ಳಿಗಳಿಗೆ ಬನ್ನಿ ಎಂದು ನಮ್ಮ ಮಾನ್ಯ ಘನವೆತ್ತ ಸಚಿವರು ಹೇಳುತ್ತಾರೆ. ನೀವು ನನ್ನ ಸ್ನೇಹಿತರು, ನೀವು ಪಕ್ಕದಲ್ಲಿದ್ದೀರಿ, ಒಂದು ಸಲ ನಾವು ನೀವೆಲ್ಲಾ ಹೋಗಿದ್ದೆವು, ಒಬ್ಬ ಮೇಡಂ ಹೇಳಿದರು, ಸೌದೆ ಇಲ್ಲ, ಇಲ್ಲಿ ತರಕಾರಿ ಇಲ್ಲ ಅಡಿಗೆ ಮಾಡುವುದಕ್ಕೆ ಜಾಗವಿಲ್ಲವೆಂದು ಹೇಳಿದರು.

ಶ್ರೀ ಹೆಚ್.ಎಂ. ರೇವಣ್ಣ : ಮಾನ್ಯ ಛೇರ್ಮನರೆ, ನಿಜ, ಆದರೆ ನಾವು ನೀವು ಹೋಗಿದ್ದು ಯಾವಾಗ ? ಕಳೆದ ಸಾಲಿನ ಪ್ರಾರಂಭಿಕ ದಿನದಲ್ಲಿ ನೆಲಮಂಗಲದಲ್ಲಿ ಆಗಿರುವ ಘಟನೆ ಬಗ್ಗೆ ಹೇಳುತ್ತಿದ್ದೀರಿ. ಇವತ್ತು ಸುಲಲಿತವಾಗಿ ನಡೆಯುತ್ತಿರುವ ಸಂದರ್ಭದಲ್ಲಿ ಗ್ಯಾಸ್ ಕೊಟ್ಟಿರತಕ್ಕಂಥ ಸಂದರ್ಭದಲ್ಲಿ ಇವತ್ತು ಅದೇ ಶಾಲೆಗೆ ಹೋಗೋಣ ಬನ್ನಿ. ಮೊದಲು ಒಂದು ಅಪಾದನೆ ಇತ್ತು, ಅಡಿಗೆ ಮನೆ ಕೊಡಲಾಗಿದೆ, ಮೊದಲು ಅಧ್ಯಾಪಕರು ಅಡಿಗೆ ಮಾಡಬೇಕೆಂದು ಇತ್ತು, ಇವತ್ತು ಆ ಪರಿಸ್ಥಿತಿ ಇಲ್ಲ, ಇವತ್ತು ಸ್ತ್ರೀಶಕ್ತಿ ಗುಂಪಿನವರು ಮಾಡುತ್ತಿದ್ದಾರೆ, ಸುಧಾರಣೆಯಾಗಿರತಕ್ಕಂಥ ಸಂದರ್ಭದಲ್ಲಿಯೂ ಕೂಡ ನೀವು ಹಳೆಯದನ್ನು ಹೇಳೂವುದಲ್ಲ. ಆದರೆ ಆ ಸಮಯ ಈಗ ಇಲ್ಲ.

ಶ್ರೀ ಸಿ.ಚೆನ್ನಿಗಪ್ಪ : ಮಾನ್ಯ ಛೇರ್ಮನರೆ, ನಮ್ಮ ಮಾನ್ಯ ಸಚಿವರು ಹೇಳತಕ್ಕಂಥ ವಿಚಾರವನ್ನು ಒಪ್ಪಿಕೊಳ್ಳುವಂಥದ್ದು. ಆದರೆ 100 ಪರ್ಸೆಂಟ್ ಆಗಿಲ್ಲ, 60:40 ಪರ್ಸೆಂಟ್ ಮಾತ್ರ ಆಗಿದೆ. ಅಂದರೆ 60 ಭಾಗ ಮಾಡಿದ್ದು ಇನ್ನು 40 ಭಾಗ ಪೆಂಡಿಂಗ್ ಇದೆ. ನಾನು ಬೇಕಾದರೆ ತೋರಿಸುತ್ತೇನೆ. ನಮ್ಮ ದಯ ಮಾಡಿ ಕ್ಷೇತ್ರಕ್ಕೆ ಬನ್ನಿ.

ಛೇರ್ಮನ್ ಶ್ರೀ ಚೆನ್ನಿಗಪ್ಪನವರೆ, 60 ಪರ್ಸೆಂಟ್ ಅಚೀವ್‌ಮೆಂಟ್ ಆಗಿದೆ, ಇನ್ನು 40 ಪರ್ಸೆಂಟ್ ಆಗಿಲ್ಲ ಎಂದು ಹೇಳುತ್ತಿದ್ದೀರಾ ?

ಶ್ರೀ ಸಿ.ಚೆನ್ನಿಗಪ್ಪ : ಮಾನ್ಯ ಛೇರ್ಮನರೆ, ಆಗಿಲ್ಲ, ಏಕೆ ಅಂತಹ ಕೆಲಸವನ್ನು ಮಾಡಿದ್ದೀರಿ? ಚುನಾವಣೆಯ ದೃಷ್ಟಿಯಿಂದ ಓಟುಗಳ ದೃಷ್ಟಿಯಿಂದ ಸ್ತ್ರೀಶಕ್ತಿಯನ್ನ ಬಲ ಮಾಡುತ್ತೇವೆಂದು ಹೇಳಿಬಿಟ್ಟಿದ್ದೀರಿ. ಅವರಿಗೆ ಕೊಡಬೇಕಾದಂಥ ಸವಲತ್ತುಗಳನ್ನು ಕೊಟ್ಟಿಲ್ಲ, ಬಿಸಿಯೂಟದ ಬಗ್ಗೆ ಮಾಡಿದ್ದೀರಿ, ಸರಿಯಾದ ರೀತಿಯಲ್ಲಿ ಊಟವನ್ನು ಕೊಡುವಂಥ ವ್ಯವಸ್ಥೆಯನ್ನು ಮಾಡಿಲ್ಲ. ನಮ್ಮ ನಿಮ್ಮ ಮಕ್ಕಳಿಗೆ ಒಳ್ಳೆಯ ಊಟ, ಆದರೆ ಅಲ್ಲಿ ಬರತಕ್ಕಂಥ ಮಕ್ಕಳಿಗೆ ಯಾವ ಊಟ ? ಕೊಳೆತು ಹೋದ ಬೇಳೆ, ಮುಗ್ಗಿ ಹೋದ ಅಕ್ಕಿ, ತರಕಾರಿ ಇಲ್ಲ. ಪಾತ್ರೆಗಳು ಇಲ್ಲ.

ಗೊಂದಲ

ಶ್ರೀಮತಿ ಮೋಟಮ್ಮ : ಛೇರ್ಮನರೆ, ಬೇಳೆ ಏನಾದರೂ ಕೊಳೆಯುತ್ತದೆಯೇ ? ಅದು ಕೊಳೆಯುವುದಿಲ್ಲ.

ಗೊಂದಲ

ಶ್ರೀ ಎಂ.ಶಿವಣ್ಣ : ಅವರು ಅದನ್ನು ರುಜುವಾತು ಪಡಿಸಲಿ, ಆಗ ಸರ್ಕಾರ ಅದರ ಬಗ್ಗೆ ಕ್ರಮವನ್ನು ಕೈಗೊಳ್ಳುತ್ತದೆ.

ಗೊಂದಲ

ಶ್ರೀ ಹೆಚ್.ಸಿ.ಶ್ರೀಕಂಠಯ್ಯ : ಬೇಳೆ ಏನಾದರೂ ಕೊಳೆಯುತ್ತದೆ ಏನ್ರಿ ? ಕಾಂಗ್ರೆಸ್ ಸರ್ಕಾರಕ್ಕೆ ಒಳ್ಳೆಯ ಹೆಸರು ಬಂತಲ್ಲ ಎಂದು ಇವರು ಹೊಟ್ಟೆಯುರಿಯಿಂದ ಮಾತನಾಡುತ್ತಿದ್ದಾರೆ.

ಗೊಂದಲ

ಛೇರ್ಮನ್ : ಮಾನ್ಯ ಚೆನ್ನಿಗಪ್ಪನವರೆ, ತಾವು ನಿರ್ದಿಷ್ಟವಾದ ಒಂದು ಉತ್ತರವನ್ನು ಹೇಳಿ.

ಶ್ರೀ ಸಿ.ಚೆನ್ನಿಗಪ್ಪ : ಇದು ವಿಧಾನಸಭೆ, ನಾನು ಕಂಡಿರುವುದನ್ನು ಹೇಳುವುದಕ್ಕೆ ನನಗೆ ಅಧಿಕಾರವಿದೆ. ಬೇಕಾದರೆ ಕೇಳಬಹುದು, ಇಲ್ಲದಿದ್ದರೆ ಬಿಡಬಹುದು.

ಛೇರ್ಮನ್ :ನಿರ್ದಿಷ್ಟವಾದಂತಹ ಇನ್‌ಸ್ಟೆನ್ಸ್ ತಾವು ಹೇಳಿ. ನೀವು ನಿರ್ದಿಷ್ಟವಾಗಿ ಇಂತಹ ಶಾಲೆಯಲ್ಲಿ ಈ ತರಹ ಆಗಿದೆ ಎಂದು ನಿರ್ದಿಷ್ಟವಾದಂತ ಒಂದು ಎಕ್ಸಾಂಪಲ್‌ನ್ನು ಕೊಟ್ಟರೆ ಒಳ್ಳೆಯದು.

ಶ್ರೀಮತಿ ಮೋಟಮ್ಮ : ಮಾನ್ಯ ಚೆನ್ನಿಗಪ್ಪನವರೆ ಅಕ್ಷರದಾಸೋಹ ಸಮಿತಿಯ ಅಧ್ಯಕ್ಷರು ಆಗಿದ್ದಾರೆ. ಆ ಸಮಿತಿಯವರು ಅದನ್ನು ನೋಡಬೇಕು.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ(ಕಂದಾಯ ಸಚಿವರು) : ಮಾನ್ಯ ಚೆನ್ನಿಗಪ್ಪನವರೆ, ತಾವು ಯಾವತ್ತಾದರೂ ಒಂದು ದಿನ ಅಲ್ಲಿಗೆ ಹೋಗಿದ್ದೀರಾ ? ನೀವು ಎಲ್ಲಿಗೂ ಕೂಡ ಹೋಗಿಲ್ಲ.

ಶ್ರೀ ಸಿ.ಚೆನ್ನಿಗಪ್ಪ : ಮಾನ್ಯ ಸಚಿವರೆ, ತಾವು ಹಿರಿಯರು, ತಮಗೆ ನಾನು ಕೈಮುಗಿಯುತ್ತೇನೆ. ನಾನು ಸುಳ್ಳು ಹೇಳುವುದಕ್ಕೆ ಹೋಗುವುದಿಲ್ಲ. ಬೇಳೆ ಹಸಿರಾಗಿತ್ತು ತ್ಯಾಮಗೊಂಡ್ಲು ಮಿಡಲ್‌ಸ್ಕೂಲ್‌ನಲ್ಲಿ ಅಲ್ಲಿ ಉಂಡೆಗಟ್ಟಿರುವಂತಹ ಬೇಳೆ ಸ್ವಾಮಿ, ಅದೂ ನೆನೆದುಹೋಗಿರುವುದು;ಅದನ್ನು ತಂದು ನಮಗೆ ತೋರಿಸುತ್ತೇನೆ.

ಗೊಂದಲ

ಶ್ರೀಮತಿ ಮೋಟಮ್ಮ : ಎಲ್ಲಾ ಕಡೆ ಈ ರೀತಿಯಾಗಿದೆ ಎಂದು ಏತಕ್ಕಾಗಿ ಹೇಳುತ್ತೀರಿ ಆಗಿರುವ ಕಡೆ ಮಾತ್ರ ಹೇಳಬೇಕು.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ : 50 ಲಕ್ಷ ಮಕ್ಕಳಿಗೆ ಊಟವನ್ನು ಕೊಡುವಾಗ ಎಲ್ಲೋ

ಒಂದು ಕಡೆ ಆಗಿರಬಹುದು. ನೀವು ಶಾಸಕರಾಗಿದ್ದೀರಿ, ತಾವು ಅದನ್ನು ಸರಿಪಡಿಸಬೇಕು. ಅದನ್ನು ಕೇಳಿಕೊಂಡು ನೋಡಿಕೊಂಡೇ ಬರುತ್ತೀರಾ ?

ಶ್ರೀಮತಿ ಮೋಟಮ್ಮ : ಎಲ್ಲಿ ಶಾಸಕರು ಇದರ ಬಗ್ಗೆ ಬೇಜವಾಬ್ದಾರಿಯುತ್ತ ರಾಗಿರುತ್ತಾರೆ ಅಂಥ ಕಡೆ ಇಂತಹವುಗಳನ್ನು ಆಗುತ್ತವೆ. ಗುಣಕ್ಕೆ ಮಾತ್ಸರ್ಯ ಇರಬಾರದು. ಒಳ್ಳೆಯ ಕೆಲಸಕ್ಕೆ ಒಳ್ಳೆಯದಾಗಿದೆ ಎಂದು ಹೇಳಿ.

ಶ್ರೀ ಎ.ಕೃಷ್ಣಪ್ಪ(ಸಮಾಜ ಕಲ್ಯಾಣ ಸಚಿವರು) : ಮಾನ್ಯ ಚೆನ್ನಿಗಪ್ಪನವರು ಬಹುಶಃ ಅವರು ಸ್ವಲ್ಪ ಕಣ್ಣು ಟೆಸ್ಟ್ ಮಾಡಿಸುವುದು ಬೆಟರ್, ಕಲರ್ ಬ್ಲೈಂಡ್ ಆಗಿದೆಯೋ ಏನೋ ? 53 ಲಕ್ಷ ಮಕ್ಕಳಿಗೆ ಊಟ ಕೊಡುವಾಗ ಆಗಿರಬಹುದು.

ಶ್ರೀ ಸಿ.ಚೆನ್ನಿಗಪ್ಪ : ನಾನೇನೂ ಡಾಕ್ಟರ್ ಹತ್ತಿರ ಕಣ್ಣುಟೆಸ್ಟ್ ಮಾಡಿಸುವುದಕ್ಕೆ ಹೋಗಬೇಕಾಗಿಲ್ಲ, ನನ್ನ ಕಣ್ಣು ಗಿಣ್ಣು ಏನು ಹೋಗಿಲ್ಲ, ನಾನು ಹಳ್ಳಿಯವನು ನಾನು ನಾಲ್ಕು ಮುದ್ದೆ ಉಣ್ಣುತ್ತೇನೆ, ನನಗೆ ಕಣ್ಣು ಹೋಗುವುದಿಲ್ಲ. ಮಾನ್ಯ ಛೇರ್ಮನ್‌ಗವರೆ ಸರ್ಕಾರದವರು ಮಾಡಿರುವಂತಹ ಬಿಸಿ ಊಟ ಕಾರ್ಯಕ್ರಮವನ್ನು ನಾನು ಸ್ವಾಗತ ಮಾಡುತ್ತೇನೆ. ನಾನು ಸ್ತ್ರೀಶಕ್ತಿಯನ್ನೂ ಕೂಡ ಸ್ವಾಗತ ಮಾಡುತ್ತೇನೆ. ಆದರೆ ತಾವು ಹೇಳಿದಂತಹ ಮಟ್ಟಕ್ಕೆ ಏನು ತಾವು ಬಜೆಟ್‌ನಲ್ಲಿ ಪ್ರಸ್ತಾಪ ಮಾಡಿದ್ದೀರಲ್ಲಾ ಆ ಮಟ್ಟಕ್ಕೆ ನೀವು ಯಾವುದನ್ನು ಕೂಡ ಒದಗಿಸಿಲ್ಲ. ನಮ್ಮ ರಾಜ್ಯದ ಸ್ತ್ರೀಶಕ್ತಿ ಗುಂಪು ಏನಿದೆ ಅವರಿಗೆ ಸಪಿಷಿಯೆಂಟಾಗಿ ಕೊಡತಕ್ಕಂತಹ ಸವಲತ್ತುಗಳನ್ನು ಕೊಟ್ಟಿಲ್ಲ. ಅದಕ್ಕೆ ಅಷ್ಟು ಹಣವನ್ನು ಕೂಡ ಬಿಡುಗಡೆ ಮಾಡಿಲ್ಲ. ಆ ಸ್ತ್ರೀಶಕ್ತಿ ಬ್ಯಾಂಕಿನಲ್ಲಿ ಎಷ್ಟು ಹಣವನ್ನು ಇಟ್ಟಿದ್ದೀರಿ ? ಅದರ ಉದ್ದೇಶವೇನು ? ಏನು ಇಲ್ಲ. Back is Bank what is there ? ಏನೂ ಇಲ್ಲ. Nothing is there ದಯಮಾಡಿ ತಾವು ನಾನು ಹೇಳಿರುವಂತಹ ಮಾತನ್ನು ಕೇಳಬೇಕು. ಸತ್ಯವಾದ ವಿಚಾರವನ್ನು ಹೇಳಬೇಕಾಗುತ್ತದೆ. ಇದು ಎಲ್ಲಾ ಮಾನ್ಯ ಶಾಸಕರುಗಳಿಗೆ ಗೊತ್ತಿರುವಂತಹ ವಿಚಾರ ಇದು. ನಾವು ಬೇರೆ ಏನು ಹೇಳುವುದಕ್ಕಾಗುವುದಿಲ್ಲ. ಈ ವಿಚಾರ ಮಾನ್ಯ ಮುಖ್ಯಮಂತ್ರಿಗಳಿಗೂ ಗೊತ್ತಿರುತ್ತದೆ. ಎಲ್ಲಾ ಶಾಸಕ ಮಿತ್ರರಿಗೂ ಗೊತ್ತಿರುತ್ತದೆ.

ಛೇರ್ಮನ್ : ಬಜೆಟ್ ಪುಸ್ತಕದಲ್ಲಿ 50 ಕೋಟಿ ರೂಪಾಯಿಗಳನ್ನು ಮೀಸಟ್ಟಿದ್ದೇವೆ ಎಂದು ಬರೆದಿದೆ ನೋಡಿ.

ಶ್ರೀ ಸಿ.ಚೆನ್ನಿಗಪ್ಪ : 50 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿರುವುದು ನೆಕ್ಸ್ಟ್ ಈಯರ್‌ಗೆ ಸ್ವಾಮಿ. ಈ ವರ್ಷ ಏನು ಮಾಡುತ್ತೇವೆಂದು ಹೇಳಲಿಲ್ಲಾವಲ್ಲಾ ? ಅದು ಮುಖ್ಯ ಇಲ್ಲಿ ಹೇಳುತ್ತಿರುವಂತಹ ಇಬ್ಬರು ಸಚಿವರು ಅವರು ಎಲ್ಲಾ ವಿಚಾರದಲ್ಲೂ ಕೂಡ ನನಗಿಂತ ದೊಡ್ಡವರಾಗಿದ್ದಾರೆ. ಅವರು ನಮ್ಮನ್ನು ಟ್ಯಾರಲ್ ಮಾಡುವುದನ್ನು ನಾನು ಸ್ವಾಗತ ಮಾಡುತ್ತೇನೆ. ನನ್ನ ವಿಚಾರವನ್ನು ನಾನು ಅವರ ಮುಂದಿಟ್ಟಿದ್ದೇನೆ, ಅದನ್ನು ಸರ್ಕಾರ ಸಾಲ್ವ್ ಮಾಡಲಿ, ಅಷ್ಟೇ ಸಾಕು ಎಂಬುದು ನನ್ನ ವಿನಂತಿ, ಬೇರೆ ಮಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ಮಾನ್ಯ ಚೆನ್ನಿಗಪ್ಪನವರಿಗೆ ನಮ್ಮ ಕಾರ್ಯಕ್ರಮಗಳ ಬಗ್ಗೆ ಬಹಳ ನಂಬಿಕೆ ಇದೆ. ಶಾಸನ ಸಭೆ ಎಂದು ಹಾಗೆ ಅನ್ನುತ್ತಾರೆ ಪಾಪಾ ಏನು ಮಾಡೋಣ. ಪ್ರಚಾರಕ್ಕೆ ಮಾತನಾಡುತ್ತಾರೆ.

ಶ್ರೀ ಸಿ.ಚೆನ್ನಿಗಪ್ಪ : ಇನ್ನು ನಮ್ಮ ಹಳ್ಳಿಗಾಡಿನ ಇಂಡಸ್ಟ್ರೀಸ್ ಬಗ್ಗೆ ಹೇಳುವುದಾದರೆ, ಗ್ರಾಮೀಣ ಕೈಗಾರಿಕೆಗೆ ಹೆಚ್ಚಿಗೆ ಸಬ್ಸಿಡಿಯನ್ನು ಕೊಡುತ್ತೇವೆ, ಅಲ್ಲಿಗೆ ಹೆಚ್ಚಿಗೆ ಹಣವನ್ನು ಕೊಡುತ್ತೇವೆ

ಎಂದು ಹೇಳಿದ್ದಾರೆ. ನಮ್ಮ ಒಂದು ತಾಲ್ಲೂಕಿನಲ್ಲಿ ಒಂದು ಇಂಡಸ್ಟ್ರಿಯಲ್ ಆಫೀಸ್ ಇದೆ. ನಿಮ್ಮಲ್ಲಿ ಎಷ್ಟು ಅಭಿವೃದ್ಧಿಯಾಗಿದೆ ಎಂದು ನಾವು ಕೈಪಿಡಿ ಸಭೆಯಲ್ಲಿ ಕೇಳಿದರೆ ಹಣವೂ ಇಲ್ಲ, ಏನೂ ಇಲ್ಲ ನಾವು ಟ್ರೈನಿಂಗ್ ಕೊಡುತ್ತೇವೆ ಎಂದು ಹೇಳುತ್ತಾರೆ. ಟ್ರೈನಿಂಗ್‌ಗೆ 150 ರೂ.ಗಳನ್ನು ಕೊಡುತ್ತಾರೆ ಸರ್ಕಾರ ಗ್ರಾಮೀಣ ಅಭಿವೃದ್ಧಿಗೆ ಕೈಗಾರಿಕೆಯ ಅಭಿವೃದ್ಧಿಗೆ ಕೊಟ್ಟಿರುವಂತಹ ಹಣ ಎಷ್ಟೆಂದರೆ, ಟ್ರೈನಿಂಗ್ ಮಾಡುವುದಕ್ಕೆ ಕೊಟ್ಟಿದ್ದಾರೆ. ಆ ವಿದ್ಯಾವಂತ ಯುವಕರನ್ನು ಮತ್ತು ಮಹಿಳೆಯರನ್ನು ಸಂಘಟಿಸಿ ಅವರಿಗೆ ಟ್ರೈನಿಂಗ್ ಕೊಟ್ಟು ನಿಮಗೆ ಬ್ಯಾಂಕಿನಿಂದ ಸಹಾಯವನ್ನು ಮಾಡುತ್ತೇವೆ ಎಂದು ಹೇಳುತ್ತಾರೆ. ಅವರು ಅರ್ಜಿ ಹಾಕಿದರೆ ಎಲ್ಲೂ ಕೂಡ ಅವರಿಗೆ ಸಾಲ ಸಿಗುವುದಿಲ್ಲ. ಬ್ಯಾಂಕಿಗೆ ಹೋಗಿ ಬಂದು ಅಲ್ಲಿಂದ ಬಂದವರು ಸಿಕ್ಕಾಬಟ್ಟೆಯಾಗಿ ಮೀಟಿಂಗ್‌ನಲ್ಲಿ ಮಾತನಾಡುತ್ತಾರೆ. ನೀವು ಗ್ರಾಮೀಣ ಕೈಗಾರಿಕೆ ಅಭಿವೃದ್ಧಿ ಎಂದು ಹೇಳುತ್ತೀರಿ. ನಮಗೆ ಟ್ರೈನಿಂಗ್ ಕೊಡಿಸುತ್ತೀರಿ, ನಮಗೆ ಹಣ ಬಿಡುಗಡೆಯಾಗಿಲ್ಲವೆಂದು ಹೇಳುತ್ತಾರೆ. ಆ ಬ್ಯಾಂಕಿಗೆ ಹೋದರೆ ಸರ್ಕಾರದ ಡೈರಕ್ಷನ್ ಇಲ್ಲದೆ ನಾವು ಕೊಡುವುದಕ್ಕಾಗುವುದಿಲ್ಲವೆಂದು ಅವರು ಹೇಳುತ್ತಾರೆ. ಸಬ್ಸಿಡಿಯನ್ನು ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತಾರೆ. ನಮಗೆ ಹಣ ಬಿಡುಗಡೆಯಾಗಿ ಬಂದಿಲ್ಲ ಎನ್ನುವ ಮಾತನ್ನು ಅವರು ಹೇಳುತ್ತಾರೆ. ಅಲ್ಲಿ ಗ್ರಾಮೀಣ ಮಹಿಳೆಯರ ಮತ್ತು ವಿದ್ಯಾವಂತ ಯುವಕರ ಗತಿ ಏನಾಗಬೇಕು ? ಅದರ ಬಗ್ಗೆ ಚಕಾರವಿಲ್ಲ. ಇಂತಹ ವಿಚಾರಗಳನ್ನು ಬಜೆಟ್‌ನಲ್ಲಿ ತಂದು ಫಸ್ಟ್‌ಕ್ಲಾಸ್ ಆಗಿ ರಾಜ್ಯದ ಜನರ ಮುಂದೆ ಓದಿಬಿಟ್ಟು ಆ ವಿಚಾರಗಳೆಲ್ಲವು ಟಿ.ವಿ. ಮಾಧ್ಯಮಗಳಲ್ಲಿ ಬಂದಿರುವುದನ್ನು ನೋಡಿಬಿಟ್ಟರೆ ಸಾಲದು ಹೊಟ್ಟೆ ತುಂಬಿರುವಂತಹ ಜನರು ರಾಜ್ಯದಲ್ಲಿಲ್ಲ. ಜನರು ಬಹಳ ಬುದ್ಧಿವಂತರಿದ್ದಾರೆ, ಸರ್ಕಾರ ಗ್ರಾಮೀಣ ಕೈಗಾರಿಕೆಗೆ ದಯಮಾಡಿ ಹೆಚ್ಚು ಒತ್ತನ್ನು ಕೊಟ್ಟು, ಸಬ್ಸಿಡಿಯನ್ನು ಕೊಡಬೇಕು. ನಾನು ಪಶುಸಂಗೋಪನೆ ಇಲಾಖೆಯ ಬಗ್ಗೆ ಹೇಳುವುದಾದರೆ, ನಾನು ಅವರಲ್ಲಿ ವಿನಂತಿಯನ್ನು ಮಾಡುತ್ತೇನೆ. ರಾಜ್ಯದ ಯುವಕರ ಮತ್ತು ರೈತರ ಮಕ್ಕಳು ಪರವಾಗಿ ಒಂದೊಂದು ಫ್ರೀ ಹಸುವನ್ನು ಕೊಡಿ, ಮತ್ತು ಹಾಲಿನ ರೇಟನ್ನು ಲೀಟರ್‌ಗೆ 15 ರೂಪಾಯಿಗಳಂತೆ ಮಾಡಿ. ರೈತರ ಹಾಲಿನ ರೇಟನ್ನು 15 ರೂ.ಗೆ ನಿಗಧಿ ಮಾಡಲಿ, ಒಬ್ಬ ಗ್ರಾಜ್ಯುಯೇಟ್ ಹುಡುಗನಿಗೆ ಒಂದು ಹಸುವನ್ನು ಫ್ರೀಯಾಗಿ ಕೊಡಲಿ, ಅವನು ಅದರಿಂದ ಉದ್ಯೋಗ ಮಾಡಿ ಜೀವನವನ್ನು ಮಾಡುತ್ತಾನೆ. ಅದು ಬಿಟ್ಟು ಮಾನ್ಯ ಛೇರ್ಮನ್‌ರವರೆ, ಅದಕ್ಕೆ ಇಂಜಕ್ಷನ್‌ಗೆ ಚಾರ್ಜ್ ಮಾಡಬೇಕು, ನೀವು 81/2 ರೂಪಾಯಿಗೆ ಹಾಲನ್ನು ಕೊಡಬೇಕು. ಅವರು ಬೆಂಗಳೂರಿಗೆ ಬಂದ ತಕ್ಷಣ ಅದನ್ನು 12 ರೂಪಾಯಿಗಳಿಗೆ ಮಾರಿಕೊಳ್ಳಬೇಕು, ಅದರಲ್ಲಿ ಸಬ್ಸಿಡಿಯನ್ನು ಹಾಕಿಕೊಂಡು ಆ ಡೈರಿಯೊಳಗೆ ಅದನ್ನು ಸರ್ಕಾರ ತೆಗೆದುಕೊಂಡು ಏನೂ ಮಾಡದಿರುವ ಕೆಲಸ ಸರ್ಕಾರ ಕೈಹಾಕಬಾರದು. ಆ ಬಗ್ಗೆ ಒಂದೇ ಒಂದು ಮಾತನ್ನು ಕೂಡ ಹೇಳಲಿಲ್ಲ. ಇನ್ನು ಮೇವಿನ ಬಗ್ಗೆ ಹೇಳುವುದಾದರೆ, ಇದರ ಬಗ್ಗೆ ಮಾನ್ಯ ಸಚಿವರಾದ ಶ್ರೀ ಕೃಷ್ಣಪ್ಪನವರು ಬಹಳ ಚೆನ್ನಾಗಿ ಮಾಡಿದ್ದರು. ನಾನು ಸಾಮಾಜ ಕಲ್ಯಾಣ ಇಲಾಖೆಯವರಲ್ಲಿ ವಿನಂತಿಯನ್ನು ಮಾಡುತ್ತೇನೆ, ಕಳೆದ ವರ್ಷ ಒಂದು ಲಕ್ಷ ರೂ.ಗಳನ್ನು ಬೋರ್‌ಗಾಗಿ ಖರ್ಚು ಮಾಡುತ್ತೇನೆಂದರು. ಆದರೆ ಬಂದು ಬೋರ್‌ವೆಲ್ ಗೆ 65 ಸಾವಿರ ರೂ.ಗಳನ್ನು ನಿಗಧಿ ಮಾಡಿದ್ದಾರೆ, ಅಲ್ಲಿ 700 ರಿಂದ 800 ಅಡಿ ತೋಡಿದರೂ ಕೂಡ ನೀರು ಬರುವುದಿಲ್ಲ. ಇದು ಎಷ್ಟು ಕಣ್ಣುಮುಚ್ಚಾಲೆ ಆಟವಾಗಿದೆ ನೋಡಿ, ಅಲ್ಲಿ ಒಂದು ಬೋರ್ ತೆಗೆದು ನೀರು ಬರಬೇಕಾದರೆ 700 ರಿಂದ 800 ಅಡಿ ತೋಡಬೇಕು. ಅವರು ಅದಕ್ಕೆ ಕೊಡುವುದು 65 ಸಾವಿರ ರೂಗಳನ್ನು ಮಾತ್ರ. ಸಮಾಜಕಲ್ಯಾಣ ಇಲಾಖೆಯಲ್ಲಿ ಬಡವರಿಗೆ, ದೀನದಲಿತರಿಗೆ, ಈ ಸರ್ಕಾರದ ಮುಖಾಂತರ

ಕೊಡುವಂತಹ ಕೊಡುಗೆ ಬರೀ 65 ಸಾವಿರ ರೂಗಳು ಮಾತ್ರ. ಇದಕ್ಕಾಗಿ ಖರ್ಚಾಗುವಂತಹ ಹಣ 11\2 ಲಕ್ಷ ರೂಪಾಯಿಗಳು, ಏನಾಯಿತು ಒಂದು ಲಕ್ಷ ರೂಪಾಯಿ ? ಇವತ್ತು ರೈತರ ಯಾವ ಬೇಡಿಕೆಗಳು ಕೂಡ ಈಡೇರಲಿಲ್ಲ, ಅದರ ಬಗ್ಗೆ ಚಕಾರವಿಲ್ಲ, ಸಬಲತೆ ಮಾಡುತ್ತೇವೆ ಎಂದು ಹೇಳುತ್ತಾರೆ, ಇದಕ್ಕಾಗಿ ನೀವು ಎಷ್ಟು ಹಣವನ್ನು ಕೊಟ್ಟಿದ್ದೀರಿ ? ಪ್ಲೀಸ್ ಶೋ ಎಲ್ಲಿ ಲಕ್ಷ ರೂಗಳನ್ನು ಕೊಟ್ಟಿಲ್ಲವಲ್ಲಾ ? ಸನ್ಮಾನ್ಯ ಕೃಷ್ಣಪ್ಪನವರೆ, ಹೇಳಿ.

ಶ್ರೀ ಎ.ಕೃಷ್ಣಪ್ಪ : ಅವರು ಸಂಪೂರ್ಣವಾಗಿ ಬಜೆಟ್ ಪುಸ್ತಕವನ್ನು ಓದಲಿ, ಅದರಲ್ಲಿ ನಾವು ಸ್ಪಷ್ಟವಾಗಿ ಹೇಳಿದ್ದೇವೆ. ಈ ಒಂದು ಡಿಫರೆನ್ಸ್ ಆಫ್ ಕಾಸ್ಟ್ ಇನ್‌ವೆಸ್ಟ್‌ಮೆಂಟ್‌ನಲ್ಲಿ ಏನು ದುಬಾರಿಯಾಗಿದೆ, ಆ ದುಬಾರಿಗೆ ಈ ಆರ್ಥಿಕ ವರ್ಷದಲ್ಲಿ ಸರ್ಕಾರ ಏನು ಸ್ಟ್ಯಾಂಡ್ ತೆಗೆದುಕೊಂಡಿದೆ ಅದರಲ್ಲಿ ನಾವು ಎಕ್ಸ್‌ಪ್ಲೇನ್ ಮಾಡಿದ್ದೇವೆ. ಅದನ್ನು ತಾವು ಓದದೇ ಸುಮ್ಮನೆ ಮಾತನಾಡಿದರೆ ಹೇಗೆ? ತಮಗೆ ಓದಲು ಸ್ಪೆಕ್ಸ್ ಬೇಕಾ ?

ಶ್ರೀ ಸಿ.ಚೆನ್ನಿಗಪ್ಪ : ಮಾನ್ಯ ಸಚಿವರಿಗೆ ಚೆನ್ನಾಗಿ ಗೊತ್ತಿದೆ, ಅವರು ಏನೋ ಮಾಡಿ ಟ್ವಿಸ್ಟ್ ಮಾಡುವುದಕ್ಕೆ ಹೋಗುತ್ತಾರೆ. ಅಲ್ಲಿ 65 ಸಾವಿರ ರೂಪಾಯಿಗಳನ್ನು ಕೂಡ ಕೊಟ್ಟಿಲ್ಲ, ಮೊನ್ನೆ ಪೇಮೆಂಟಾಗಿದೆ, 65 ಸಾವಿರ ರೂಪಾಯಿಗಳಲ್ಲಿ ಒಂದು ಪೈಸೆಯನ್ನು ಕೊಟ್ಟಿಲ್ಲ. ಎಲ್ಲಾ ಶಾಸಕರಿಗೂ ಗೊತ್ತಿರುವಂತಹ ವಿಚಾರ. ನೀವು ಒಂದು ಲಕ್ಷ ರೂ.ಗಳನ್ನು ಖರ್ಚು ಮಾಡುತ್ತೇವೆಂದು ಲಾಸ್ಟ್ ಈಯರ್ ಇದು ಅಸ್ಲೆಂಬಿನಲ್ಲಿ ಹೇಳುತ್ತೀರಿ. ನೀವು ಲಾಸ್ಟ್ ಈಯರ್ ಬುಕ್‌ನ್ನು ತೆಗೆಸಿನೋಡಿ ಒಂದು ಲಕ್ಷ ರೂ.ಗಳನ್ನು ಕೊಡುತ್ತೇವೆಂದು ಅಸೆಂಬ್ಲಿಯಲ್ಲಿ ಹೇಳುತ್ತೀರಿ. ಇವತ್ತಿನವರೆಗೂ ಅದರ ಚಾಲನೆಯನ್ನು ಮಾಡಲಿಲ್ಲವಲ್ಲಾ. ದಯಮಾಡಿ ಬಡವರಿಗೆ ಹಣವನ್ನು ಬಿಡುಗಡೆ ಮಾಡಿ. ತಾವು ಇನ್ನೊಂದು ಒಳ್ಳೆಯ ಕೆಲಸವನ್ನು ಮಾಡಿದ್ದೀರಿ, ವಿದ್ಯುಚ್ಛಕ್ತಿ ದುಡ್ಡು ಕಟ್ಟಬಾರದು ಎಂದು ಆರ್ಡರ್ ಮಾಡಿದ್ದೀರಿ, ಆ ಆರ್ಡರ್ ಬಂದಿರುವುದನ್ನು ನಾನು ನೋಡಿದ್ದೇನೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ.

ಶ್ರೀ ಎ.ಕೃಷ್ಣಪ್ಪ : ನಾವು ಮಾಡಿರುವಂತಹ ಒಳ್ಳೆಯ ಕೆಲಸಗಳ ಬಗ್ಗೆ ಹೇಳಿದರೆ, ನಿಮಗೂ ಕೂಡ, ಜನರು ಮೆಚ್ಚಿ ಇನ್ನೂ ಸ್ವಲ್ಪ ಓಟನ್ನು ಕೊಡಬಹುದು.

ಶ್ರೀ ಸಿ.ಚೆನ್ನಿಗಪ್ಪ : ಓಟಿನ ವಿಷಯ ಇಲ್ಲಿ ಏಕೆ ಸ್ವಾಮಿ ? ದೇವರು ಇದ್ದಾನೆ, ಜನರು ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆ. ಅದು ನಮ್ಮ ಅನಿಸಿಕೆ ಬಿಟ್ಟರೆ ನಾವು ಬರೀ ಓಟಿಗೋಸ್ಕರ ಕೆಲಸ ಮಾಡುವುದಲ್ಲ. ಸಮಾಜ ಕಲ್ಯಾಣ ಇಲಾಖೆಯವರು ಹೆಚ್ಚಿಗೆ ಹಣವನ್ನು ಇದಕ್ಕಾಗಿ ನಿಗಧಿ ಮಾಡಿಲ್ಲ. ಆ ಬಡವರ ಬಗ್ಗೆ ಹೆಚ್ಚಿಗೆ ಕಾಳಜಿ ಸರ್ಕಾರಕ್ಕೆ ಇಲ್ಲ, ದಯಮಾಡಿ ಅದನ್ನೂ ಕೂಡ ಸರ್ಕಾರಿ ಮಾಡಬೇಕೆಂಬ ವಿಷಯವನ್ನು ತಮಗೆ ತಿಳಿಸುತ್ತೇನೆ.

ಶ್ರೀ ಎ.ಕೃಷ್ಣಪ್ಪ : ತಾವು ಕೂಡ ಸರ್ಕಾರವನ್ನು ಇಲ್ಲಿ ನಡೆಸಿದ್ದೀರಿ, ನಾವು ಆಗ ವಿರೋಧಪಕ್ಷದಲ್ಲಿದ್ದೆವು, ಹೋದ ಸಾರಿ ಹಾಸ್ಟಲ್‌ಗಳಿಗೆ ಎಷ್ಟು ಹಣ ಕೊಟ್ಟಿದ್ದೀರಿ ? ಈಗ ನಾವು ಎಷ್ಟು ಹಣವನ್ನು ಕೊಟ್ಟಿದ್ದೇವೆ. ಯಾವುದು ಒಳ್ಳೆಯದು ಇದೆ ಅದರ ಬಗ್ಗೆ ಹೇಳಿ. ಹರಿಜನರ ಮೇಲೆ ನಡೆಯುತ್ತಿದ್ದ ದೌರ್ಜನ್ಯದ ಪ್ರಕರಣಗಳಲ್ಲಿ ಎಷ್ಟು ಬಾಕಿ ಇತ್ತು. ಈಗ ಎಷ್ಟು ಬಾಕಿ ಇದೆ. ಇವತ್ತು ಹಾಸ್ಟೆಲ್‌ಗಳಲ್ಲಿ ಇನ್‌ಫ್ರಾಸ್ಟ್ರಕ್ಚರ್ ಕೊಡದೆ ಮಕ್ಕಳಲ್ಲಿ ಶಿಕ್ಷಣದ ಗುಣಮಟ್ಟವನ್ನು ನಾವು ಕಾಣಲಿಕ್ಕೆ ಆಗಲಿಲ್ಲ. ಜಸ್ಟ್ ಇನ್‌ವೆಸ್ಟ್‌ಮೆಂಟ್ ಆಗುತ್ತದೆ ಎಂದು ಈ ಸರ್ಕಾರ ಇನ್‌ಫ್ರಾಕ್ಚರ್‌ಗೆ ಎಷ್ಟು ಹಣ ಕೊಟ್ಟಿದೆ, ಅದರ ಬಗ್ಗೆಯೂ ಕೂಡ ಹೇಳಿ ಇವತ್ತು ಬೇರೆ ಬೇರೆ ಒನ್ ಮ್ಯಾನ್ ಕಮೀಷನ್

ಮಾಡಿದ್ದವೆಂದು ಹೇಳಿ, ಏನೂ ಮಾಡಿಲ್ಲವೆಂದು ಏತಕ್ಕಾಗಿ ಹೇಳುತ್ತೀರಾ ? ಒನ್ ಮ್ಯಾನ್ ಕಮೀಷನ್ ಮಾಡದೆಯೇ ಸಾಮಾಜಿಕ ನ್ಯಾಯವನ್ನು ಕೊಡುವಂತಹ ವಿಚಾರದಲ್ಲಿ ನೀವು ಮೊದಲು ಏತಕ್ಕಾಗಿ ಆ ಧೋರಣೆಯನ್ನು ತೆಗೆದುಕೊಳ್ಳುಲಿಲ್ಲ ? ಬ್ಯಾಕ್‌ಲಾಗ್ ವೇಕೆನ್ಸೀಸ್ ಏನಿದೆ ಅದರ ಬಗ್ಗೆಯೂ ಸುಳ್ಳು ಹೇಳುತ್ತೀರಾ ? ಇವತ್ತು ಯಾವ ರಾಜ್ಯ ಸರ್ಕಾರ ಮತ್ತು ಭಾರತ ಸರ್ಕಾರ ಈ ಎದೆಗಾರಿಕೆಯನ್ನು ಆಡಳಿತದಲ್ಲಿ ತೋರಿಸಿ ಬಾಕಿ ಇದ್ದ ಹರಿಜನರಿಗೆ ದಲಿತರಿಗೆ ವೇಕೆನ್ಸಿ ಕೊಡುವಂತಹ ಕೆಲಸ ನೀವು ಏತಕ್ಕಾಗಿ ಮಾಡಲಿಲ್ಲ ? ಈ ಮಾತನ್ನು ಇನ್ನು ಮುಂದೆಯೂ ಹೇಳುತ್ತೇನೆ.

ಶ್ರೀ ಸಿ.ಚೆನ್ನಿಗಪ್ಪ : ಬ್ಯಾಕ್‌ಲಾಗ್ ಹುದ್ದೆಯ ಬಗ್ಗೆ ಮಾನ್ಯ ಸಚಿವರು ಹೇಳುತ್ತಾರೆ, ಸುಪ್ರೀಂಕೋರ್ಟಿನಿಂದ ಆರ್ಡರ್ ಆದಮೇಲೆ ಅದನ್ನು ಜಾರಿ ಮಾಡುವುದಕ್ಕೆ ಇವರು ಒಂದು ವರ್ಷ ತೆಗೆದುಕೊಂಡರು. ಇದು ದೊಡ್ಡ ಸಾಧನೆ. ಸುಪ್ರೀಂಕೋರ್ಟ್ ಆರ್ಡರ್ ಆದರೂ ಕೂಡ ಅದನ್ನು ಜಾರಿ ಮಾಡುವುದಕ್ಕಾಗಿ ಆ ಮೀಟಿಂಗ್ ಮೀಟಿಂಗ್ ಎಂದು ಹೇಳಿ ಒಂದು ವರ್ಷ ಪೋಸ್ಟ್‌ಪೋನ್ ಆಯಿತು. ಇನ್ನು ಕೆಲಸದವರು ಹಾಗೆಯೇ ಇದ್ದಾರೆ, ಅಲ್ಲಿ ಸಫಿಷಿಯೇಂಟಾಗಿ ಏನೂ ನಡೆದಿಲ್ಲ. ನೀವು ಮಾಡಿರಬಹುದು ಇಲ್ಲವೆಂದು ಹೇಳುತ್ತಿಲ್ಲ. ಅದಕ್ಕಾಗಿ ಒಂದು ವರ್ಷ ಡಿಲೇ ಆಯಿತು. ಅದು ಸರ್ಕಾರದ ಲ್ಯಾಪ್ಸ್. ಇನ್ನು ಎರಡನೆಯದು ಇದು 100 ಪರ್ಸೆಂಟ್ ಆಗಿಲ್ಲ. ಇನ್ನೂ ಕೂಡ ಇದೆ. ಆ ಬಡತನದಲ್ಲಿರುವಂತಹ ಜನರಿಗೆ ಕೊಡಿ. ಪರ್ಸೆಂಟೇಜನ್ನು ಫಿಕ್ಸ್ ಮಾಡಿ. ಅಪಾಯಿಂಟ್‌ಮೆಂಟ್ ಮತ್ತು ಎಲ್ಲಾ ವಿಚಾರದಲ್ಲಿಯೂ ಕೂಡ ಸರ್ಕಾರ ಮಾಡಲಿಲ್ಲ. ನಮ್ಮ ಸರ್ಕಾರದಲ್ಲಿ ಮಾನ್ಯ ಸಿದ್ದರಾಮಯ್ಯನವರು ಹಣಕಾಸಿನ ಸಚಿವರಾಗಿದ್ದಾಗ ಅವರಿಗೆ ಕೊಡತಕ್ಕಂತಹ ಹಣವನ್ನು ಕೂಡಲೇ ಬಿಡುಗಡೆ ಮಾಡುತ್ತಿದ್ದರು. ಈಗ ಹಣ ಬಿಡುಗಡೆಯಾಗುತ್ತಿಲ್ಲ, ಸೋಷಿಯಲ್ ವೆಲ್‌ಫೇರ್ ಹಾಸ್ಟಲ್‌ಗಳು ಮತ್ತು ನಿಮ್ಮ ಇಲಾಖೆಯ ಬಗ್ಗೆ ಮಾತನಾಡುವುದಕ್ಕೆ ಹೋದರೆ ಅವರು ಚೆನ್ನಾಗಿ ಕೆಲಸವನ್ನು ಮಾಡುತ್ತಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ, ಆದರೆ ಲ್ಯಾಂಡ್ ಆರ್ಮಿಗೆ ಕೊಟ್ಟು ಕೆಲಸವನ್ನು ಮಾಡಿಸುತ್ತಾರಲ್ಲಾ ಅದು ತಪ್ಪಬೇಕು ಇವರು ಲ್ಯಾಂಡ್ ಆರ್ಮಿಯವರು ಮಾಡಿರುವಂತಹ ಕೆಲಸವನ್ನು ಮಾಡಲಿ. ಡಿಪಾರ್ಟ್‌ಮೆಂಟ್‌ನಲ್ಲಿರುವಂತಹ ಹಾಸ್ಟಲ್‌ಗಳು 100ಕ್ಕೆ 60 ಪರ್ಸೆಂಟ್ ಕೆಲಸಗಳು ಆಗಲಿಲ್ಲ. ಅದರೂ ಕೂಡ ಕಂಪ್ಲೀಟ್ ಮಾಡಿಬಿಟ್ಟು ಸುಣ್ಣಬಣ್ಣ ಹೊಡೆದು ಜನರಿಗೆ ಮಕಮಲ್ ಮಾಡುತ್ತಿದ್ದಾರೆ, ದಯಮಾಡಿ ನಾನು ತಮ್ಮ ಮುಖಾಂತರ ಅವರಲ್ಲಿ ವಿನಂತಿಯನ್ನು ಮಾಡುತ್ತೇನೆ. ಅದರ ಬಗ್ಗೆ ಚೆಕ್ ಮಾಡಿಸಬೇಕು, ಮತ್ತು ನ್ಯಾಯ ದೊರಕಿಸಿಕೊಡಬೇಕೆಂದು ಹೇಳುತ್ತೇನೆ.

ಶ್ರೀ ವೆಂಕಟರಮಣಪ್ಪ : ಲ್ಯಾಂಡ್ ಆರ್ಮಿ ಮುಖಾಂತರ ಸರ್ಕಾರದ ಬಿಲ್ಡಿಂಗ್ ಕೆಲಸ 60 ಪರ್ಸೆಂಟ್ ಆಗಿಲ್ಲವೆಂದು ಹೇಳಿದರು. ನಮ್ಮಲ್ಲಿ ಏನು ಬಿಲ್ಡಿಂಗ್ ಕಟ್ಟಿದ್ದಾರೆ ಆ ಹಾಸ್ಟಲ್ ಬಿಲ್ಡಿಂಗ್‌ನ್ನು ಮೊನ್ನೆ ಮಾನ್ಯ ಮಂತ್ರಿಗಳು ಬಂದು ಉದ್ಘಾಟನೆಯನ್ನು ಮಾಡಿದ್ದಾರೆ ಈಗ ಎರಡು ಬಿಲ್ಡಿಂಗ್‌ಗಳನ್ನು ಕಟ್ಟುತ್ತಿದ್ದೇವೆ, ಅದನ್ನು ನೀವು ಸ್ವಲ್ಪ ಬಂದು ನೋಡಿ. ನಿಮ್ಮಲ್ಲಿ ಆ ತರಹ ಅಗಿರಬಹುದು. 60 ಪರ್ಸೆಂಟ್ ಕೆಲಸ ಕೂಡ ಆಗಿಲ್ಲವೆಂದರೆ ಅದು ಕೊರಟಗರಯಲ್ಲಿ ಆಗಿರಬಹುದು. ಬೇರೆ ಕಡೆಗಳಲ್ಲಿ ಬಹಳ ಚೆನ್ನಾಗಿ ಕೆಲಸಗಳು ಆಗಿವೆ. ಆ ಬಿಲ್ಡಿಂಗ್‌ನ್ನು ತಾವು ದಯವಿಟ್ಟು ಬಂದು ನೋಡಿ.

ಶ್ರೀ ಸಿ.ಚೆನ್ನಿಗಪ್ಪ : ಮಾನ್ಯ ಚೇರ್‌ಮನ್‌ರವರೇ ಲ್ಯಾಂಡ್ ಆರ್ಮಿ ಕೆಲಸ ಕಳಪೆಯಾಗಿದೆ, ಸರಿಯಾಗಿ ನಡೆಯುತ್ತಿಲ್ಲವೆನ್ನುವ ಮಾತನ್ನು ಮೊನ್ನೆ ಮಾನ್ಯ ಸಚಿವರಾದ ಡಾ॥ ಪರಮೇಶ್ವರ್ ಅವರು ಮೀಟಿಂಗ್‌ನಲ್ಲಿ ಹೇಳಿದರು. ಅದನ್ನು ನಾನು ಸಮರ್ಥಿಸಿ, ಸ್ವಾಗತಿಸುತ್ತೇನೆ. ಅದಕ್ಕೆ ಜನರು

ಉತ್ತರ ಕೊಡುತ್ತಾರೆ. ಮಾನ್ಯ ಸಚಿವರು ಆ ಬಿಲ್ಡಿಂಗ್ ಅನ್ನು ನೋಡಿದ್ದಾರೆ. ಅದಕ್ಕೆ ಎಂತಹ ಬಣ್ಣ ಹೊಡೆದಿದ್ದಾರೆ, ಎಷ್ಟು ಬಿರುಕು ಬಿಟ್ಟಿದೆ, ಏನೇನಾಗಿತ್ತು ಎಲ್ಲಾ ವಿಚಾರಗಳು ಗೊತ್ತಾಗಿದೆ. ನಾನು ಕಂಡಿರುವ ವಿಚಾರವನ್ನು ಸತ್ಯವಾಗಿ ಸದನದ ಮುಂದೆ ಇಟ್ಟಿದ್ದೇನೆ ಹಾಗೂ ಮಾನ್ಯ ಸಚಿವರ ಗಮನಕ್ಕೆ ತಂದಿದ್ದೇನೆ. ಅದರ ಬಗ್ಗೆ ಆಕ್ಷನ್ ತೆಗೆದುಕೊಳ್ಳಬೇಕೆಂದು ನಾನು ವಿನಂತಿಸುತ್ತೇನೆ. ಅದೇ ರೀತಿ ನಮ್ಮ ಸಮಾಜ ಕಲ್ಯಾಣ ಇಲಾಖೆ ಸುಧಾರಣೆಯಾಗಿದೆ. ಮಾನ್ಯ ಸಚಿವರು ತೋರಿಸಿರುವ ಆಸಕ್ತಿಯನ್ನು ನಾನು ಸ್ವಾಗತಿಸುತ್ತೇನೆ. ಮಾನ್ಯ ಸಚಿವರೇ ಸ್ವತಃ ಹಾಸ್ಟಲ್‌ಗಳನ್ನು ಚೆಕ್ ಮಾಡಿ. ಇನ್ಸ್‌ಪೆಕ್ಷನ್ ಮಾಡಿ ಅವರಿಗೆಲ್ಲಾ ಬೇಗನೆ ಈ ಕೆಲಸ ಮುಗಿಸಿ ಎಂದು ಸೂಚನೆಯನ್ನು ಕೊಟ್ಟಿದ್ದಾರೆ. ಅದೇ ರೀತಿ ಹಳ್ಳಿಗಾಡಿಗೂ ಕೂಡ ಹೆಚ್ಚಿನ ಹಾಸ್ಟಲ್‌ಗಳನ್ನು ಕೊಡಬೇಕೆಂದು ವಿನಂತಿಸುತ್ತೇನೆ. ಆಶ್ರಯ ಯೋಜನೆಯಡಿಯಲ್ಲಿ ನವ ಗ್ರಾಮದ ಜಮೀನನ್ನು ಸರ್ಕಾರ ಮಂಜೂರು ಮಾಡಿದೆ. ಐವತ್ತು ನಾವು ಅನೇಕ ಅರ್ಜಿಗಳನ್ನು ಕೊಟ್ಟಿದ್ದೇವೆ. ಇಷ್ಟು ಜನಗಳಿಗೆ ಸೈಟುಗಳನ್ನು ಕೊಡಿ ಎಂದು ಕೇಳಿದ್ದೇವೆ. ನೆಲಮಂಗಲ ತಾಲ್ಲೂಕಿನ ಕರಿಮಣ್ಣೆ ಎಂಬ ಊರಿನಲ್ಲಿ ಸರ್ಕಾರದ ಗೋಮಾಳ ಜಮೀನನ್ನು ಕೋಟಿ 1430 ಜನ ಕಡುಬಡವರು ಅರ್ಜಿಯನ್ನು ನೀಡಿದ್ದಾರೆ. ಕೆಲವರು ರೈತರು ಸತ್ಯಾಗ್ರಹ ಹೂಡುತ್ತಿದ್ದರು. ಕಮಿಟಿಯಲ್ಲಿ ಮಾನ್ಯ ಶಾಸಕರಾದ ಶ್ರೀ ಅಂಜನಾಮೂರ್ತಿ ಅವರು ಅದನ್ನು ಬಿಡುಗಡೆ ಮಾಡಿಕೊಟ್ಟರು. ಸನ್ಮಾನ್ಯ ಅಧ್ಯಕ್ಷರು ದಯಮಾಡಿ ಅದರಿಂದ ಎಷ್ಟರಮಟ್ಟಿಗೆ ಜನರಿಗೆ ಅನುಕೂಲವಾಗಿದೆಯೆಂದು ಚೆಕ್ ಮಾಡಬೇಕು. ಕರಿಮಣ್ಣೆ ಊರಿನ ಸೈಟ್ ನಂ–66–67ರಲ್ಲಿ 131/2 ಎಕರೆ ಜಮೀನಿಗಾಗಿ ನಾ.ಲ.1430 ಜನರಿಂದ ಅರ್ಜಿಗಳನ್ನು ತೆಗೆದುಕೊಂಡು ಡಿ.ಸಿ. ಅವರಿಗೆ ಕಳುಹಿಸಿಕೊಟ್ಟರೆ, ದುಡ್ಡು ಕೊಟ್ಟು ನಾವು ಅದನ್ನು ಸ್ಟೇ ಮಾಡಿಸುತ್ತೇವೆಂದು, ಕೆಲವು ರಾಜಕಾರಣಿಗಳು ಬಾಯಿ ಬಡಿದುಕೊಂಡು ಸ್ಟೇ ಮಾಡಿಸಿದ್ದಾರೆ, ಇದು ಬಡವರಿಗೆ ಅನುಕೂಲ ಮಾಡಿಕೊಡುವ ರೀತಿಯೇ ? ನಾನು ಸರ್ಕಾರದಲ್ಲಿ ವಿನಂತಿಸುವುದೇನೆಂದರೆ ಈ ರೀತಿ ಆಗಬಾರದು ಕಡತವನ್ನು ತರಿಸಿ ನೋಡಿ ಎ.ಸಿ. ಅವರು ಸ್ಟೇ ಕೊಟ್ಟಿದ್ದಾರೆ. ನಮ್ಮ ಸಚಿವರು ನೀವು ಉತ್ತಮರು ಸ್ವಾಮಿ ಆದರೆ ಹೀಗೆ ಎ.ಸಿ.ಯವರು ಸ್ಟೇ ಕೊಡುವುದು ಉತ್ತಮವಾದ ಕೆಲಸವೇ ಇದರಿಂದ ಬಡವರಿಗೆ ಸಹಾಯ ಮಾಡಿದಂತಾಗುತ್ತದೆಯೇ ? ಗೋಮಾಳದ ಸ್ಥಳ ಆಕ್ವಿಸಿಷನ್ ಮಾಡಿಕೊಟ್ಟರೆ ಮಾನ್ಯ ಅಂಜನಾಮೂರ್ತಿಯವರೆ, ಎ..ಸಿ. ಸ್ಟೇ ಮಾಡುತ್ತಾರೆಂದರೆ ....

ಶ್ರೀ ಅಂಜನಾಮೂರ್ತಿ : ಮಾನ್ಯ ಸ್ನೇಹಿತರು ನನ್ನ ಹೆಸರನ್ನು ಪ್ರಸ್ತಾಪ ಮಾಡಿರುತ್ತಾರೆ. ನಾನು ಆಶ್ರಯ ಸಮಿತಿಯ ಅಧ್ಯಕ್ಷನಾಗಿದ್ದೇನೆಂದು ಒಪ್ಪಿಕೊಳ್ಳುತ್ತೇನೆ. ಆಶ್ರಯ ಕಡತವನ್ನು ಇವರೇ ತರಿಸಿಬಿಟ್ಟು " don't allot any land to the person " ಎಂದು ಬರೆದಿರುತ್ತಾರೆ, ಆಗ ನಾನು ಅವರಿಗೆ ಇದು ಲಕ್ಷಣವಲ್ಲ ಎಂದು ಹೇಳಿದೆ. ಚೆನ್ನಿಗಪ್ಪನವರೇ ದಯಮಾಡಿ ನನಗೆ ದೂರವಾಣಿ ಮೂಲಕ ತಿಳಿಸಿ, ಹೀಗೆಲ್ಲಾ ಕಡತದಲ್ಲಿ ಬರೆಯಬೇಡಿ ಎಂದು ಮನವಿ ಮಾಡಿದೆ. ಆದರೂ ಅವರು ನನ್ನ ಮಾತನ್ನು ಕೇಳಲಿಲ್ಲ. ಕಡತದಲ್ಲಿ ಅವರು "don't allot any land to the poor people. It should alloted to the beneficiaries" ಎಂದು ಬರೆದಿದ್ದಾರೆ, ಏನು ಈ ಚೆನ್ನಿಗಪ್ಪನವರು ಈ ರೀತಿ ಬರೆದಿದ್ದಾರೆಂದು ನನಗೆ ಆಶ್ಚರ್ಯವಾಯಿತು.

ಶ್ರೀ ಸಿ.ಚೆನ್ನಿಗಪ್ಪ : ನಾನು ಆ ಕಮಿಟಿಯ ಚೇರ್‌ಮನ್ ಆಗಬೇಕು. ಹೆಚ್ಚಿಗೆ ಬೈಸಿಕೊಳ್ಳುವ ವ್ಯಕ್ತಿ ನಾನು. ನನ್ನ ಸ್ನೇಹಿತರಾದ ಶ್ರೀ ಅಂಜನಾಮೂರ್ತಿಯವರಿಗೆ ಗೌರವವನ್ನು ಕೊಡುತ್ತೇನೆ. ದಯಮಾಡಿ ಶ್ರೀ ಅಂಜನಾಮೂರ್ತಿಯವರು ನನ್ನ ಕ್ಷೇತ್ರದ ಲ್ಯಾಂಡ್ ಆದ ಕರಿಮಣ್ಣೆಯ ಸೈಟ್ ನಂ.66–67 ಏನಿದೆ ಅದು ಬಡವರ ಹಾಗೂ ಹಿಂದುಳಿದವರ ತಾಣ, ಅದು ಸಾರ್ವಜನಿಕರ ಸ್ವತ್ತು.

ಅದು ಸರ್ಕಾರದ ಸ್ವತ್ತು ಅದು ನಮ್ಮ ಅಪ್ಪನ ಮನೆಯ ಆಸ್ತಿಯಲ್ಲ....I have to tell this with force...

ಶ್ರೀ ಅಂಜನಾಮೂರ್ತಿ : ಚೆನ್ನಿಗಪ್ಪನವರೇ, ಸ್ವಲ್ಪ ಈಲ್ಡ್ ಆಗುತ್ತೀರಾ ? ಅಲ್ಲಿ ದುರಾದೃಷ್ಟವಶಾತ್ ಏನಾಗಿದೆಯೆಂದರೆ, ಜಮೀನುದಾರರು, ಉಳುವವರು ಯಾರೂ ಸಹ, ಅವರಿಗೆಲ್ಲಾ ಮೂರು ಬಾರಿ ನೋಟೀಸ್ ಕೊಟ್ಟರೂ ಬರಲಿಲ್ಲ. ಕಾರಣ ಇವರೇನಾದರೂ ಅವರನ್ನು ಹೆದರಿಸಿದರೇನೋ ಗೊತ್ತಿಲ್ಲ. ಒಟ್ಟಿನಲ್ಲಿ ಅವರು ಬರದ ಹಾಗೆ ಮಾಡಿದರೇನೋ ನಮ್ಮ ಚೆನ್ನಿಗಪ್ಪನವರು ನನಗೆ ಗೊತ್ತಿಲ್ಲ. ಏಕೆಂದರೆ ಇವರು ಸ್ವಲ್ಪ ಪ್ರಭಾವಿ ವ್ಯಕ್ತಿಯಾಗಿರುವರೆಂದು ತೋರುತ್ತದೆ. ಮೊನ್ನೆ ಮದುವೆ ಮನೆಯಲ್ಲಿ ಮಂಟಪದಲ್ಲಿ ಹುಡುಗನನ್ನು ನನಗೆ ವಿರೋಧವಾಗಿ ಹೋಗಿರುವೆಯಾ ಎಂದು ಅವನಿಗೆ ಹೊಡೆದುಬಿಟ್ಟರು. ಇವರನ್ನು ಕಂಡರೆ ಅಲ್ಲಿ ಬಹಳ ಹೆದರಿಕೊಳ್ಳುತ್ತಾರೆ. ಆಮೇಲೆ ಆ ಹುಡುಗ ಕಂಪ್ಲೇಂಟ್ ಕೊಡಲಿಕ್ಕೆ ಬಂದ ಈ ರೀತಿ ಏನಾದರೂ ಆಗಿರಬಹುದೇನೋ. ಕೋರ್ಟಿನಲ್ಲಿ ಸ್ಟೇ ಕೊಟ್ಟರೆ....

ಶ್ರೀ ಸಿ.ಚೆನ್ನಿಗಪ್ಪ : ಮಾನ್ಯ ಚೇರ್‌ಮನ್‌ರವರೇ, ಮಾನ್ಯ ಅಂಜನಾಮೂರ್ತಿಯವರು ನನ್ನ ಕ್ಷೇತ್ರದಲ್ಲಿ ಬರುವ ಲ್ಯಾಂಡ್ ಅನ್ನು ಆಶ್ರಯ ಯೋಜನೆಯಡಿ ದರಖಾಸ್ತು ಮಾಡಬಾರದೆಂದು ಹೇಳಿ ಮುಂದಿನ ಬಾರಿ ನಾನು ಬರುವುದನ್ನು ತಪ್ಪಿಸಬೇಕೆಂದು ಮಾಡಿದ್ದಾರೆ. ಹೀಗೆ ಮಾಡಿದರೆ ಈ ರಾಜ್ಯದ ಜನರು ಮುಂದೆ ಅವರಿಗೆ ಉತ್ತರ ಹೇಳುತ್ತಾರೆ ಬಡವರಿಗೋಸ್ಕರ ನನ್ನ ಕ್ಷೇತ್ರದಲ್ಲಿರುವ ಸರ್ಕಾರದ ಗೋಮಾಳದ ಜಮೀನನ್ನು ನಿಗದಿಪಡಿಸಿ ಬಡವರಿಗೆ ಸೈಟುಗಳನ್ನು ಕೊಡಬೇಕೆಂಬ ಉದ್ದೇಶದಿಂದ ನಾನು ಫೈಲ್‌ನಲ್ಲಿ ಬರೆದಿದ್ದೇನೆ, ನನಗೆ ಅಧಿಕಾರವುಂಟು. I am an H.L.A of that constituancy I have got supreme power to take certain things to solve the problems of the poor people. ಅದನ್ನು ನೀವು ಪ್ರಶ್ನೆ ಮಾಡಲು ನಿಮಗೆ ನೈತಿಕ ಹಕ್ಕಿಲ್ಲ. ಆದ್ದರಿಂದ ನಾನು ಸರ್ಕಾರದಲ್ಲಿ ವಿನಂತಿ ಮಾಡುತ್ತೇನೆ, ದಯಮಾಡಿ ಆ ಕರಿಮಣಿ ಸೈಟ್ ನಂ 66–67 ಅನ್ನು ಬಿಡುಗಡೆ ಮಾಡಿಕೊಡಬೇಕು.

ಶ್ರೀ ಎ.ಕೃಷ್ಣಪ್ಪ : ನಮಗೆ ಇವತ್ತೇ ಗೊತ್ತಾಗಿದ್ದು, ಮಾನ್ಯ ಚೆನ್ನಿಗಪ್ಪನವರಿಗೆ ಕೋಪ ಬಂದಾಗ ದೊಡ್ಡ ಇಂಗ್ಲೀಷ್ ಮಾತನಾಡುತ್ತಾರೆಂಬ ಸೀಕ್ರೆಟ್ ಇವತ್ತೇ ನಮಗೆ ಗೊತ್ತಾದ್ದು.

ಛೇರ್‌ಮನ್ : ಚೆನ್ನಿಗಪ್ಪನವರೇ, ಅದಕ್ಕಿಂತಲೂ ಮುಖ್ಯವಾಗಿ ನೀವಿಬ್ಬರೂ ಅಣ್ಣತಮ್ಮಂದಿರು ನೋಡಿ, ಅದಕ್ಕೆ ನೀವು ನೀವೇ ಪಾಲು ಮಾಡಿಕೊಳ್ಳುವುದು.

ಶ್ರೀ ಅಲ್ಲಂ ವೀರಭದ್ರಪ್ಪ : ಛೇರ್‌ಮನ್‌ರೇ, ಮಾನ್ಯ ಚೆನ್ನಿಗಪ್ಪನವರು ಸಿಟ್ಟು ಬಂದರೆ ಇಂಗ್ಲೀಷ್ ಮಾತನಾಡುತ್ತಾರೆ. ಇನ್ನು ಯಾವ್ಯಾವ ಸಂದರ್ಭದಲ್ಲಿ ಯಾವ್ಯಾವ ಭಾಷೆ ಮಾತನಾಡುತ್ತಾರೋ ಗೊತ್ತಾಗಲಿಲ್ಲ ?

ಶ್ರೀ ಸಿ.ಚೆನ್ನಿಗಪ್ಪ : ಹಿರಿಯ ಸಚಿವರು ಹೇಳಿದರೆ ತಪ್ಪಿಲ್ಲ, ನಾನು ಚಿಕ್ಕವನು, ಸನ್ಮಾನ್ಯ ಅಂಜನಾಮೂರ್ತಿಯವರು ದಯಮಾಡಿ ವಿಶ್ವಾಸಕ್ಕೆ ಧಕ್ಕೆ ಬರುವಂತಹ ಮಾತನ್ನು ಆಡಬಾರದು, ನನ್ನ ಕ್ಷೇತ್ರದ ಸರ್ಕಾರದ ಗೋಮಾಳವನ್ನು ನಿಗದಿಮಾಡುವ ಸಂದರ್ಭದಲ್ಲಿ ನಾನು ಛೇರ್‌ಮನ್ ಆಗಬೇಕಾಗಿತ್ತು. ನಾನು ಕೋರ್ಟಿಗೆ ಹೋಗಿದ್ದರೆ ಛೇರ್ಮನ್ ಆಗುತ್ತಿದ್ದೆ. ಆದರೂ ವಿಶ್ವಾಸದಿಂದ ಅವರೇ ಮಾಡಲಿ ಎಂದು ನಾನು ಸುಮ್ಮನಾದೆ, ಅವರೂ ಲಾಗ್ರಾಜ್ಯುಯೇಟ್ ನಾನು ಲಾ ಗ್ರಾಜ್ಯುಯೇಟ್ ಆದರೆ ಅದನ್ನು ಪ್ರಶ್ನೆ ಮಾಡುವ ನೈತಿಕ ಹಕ್ಕು ನಿಮಗಿಲ್ಲ. ನನ್ನ ಕ್ಷೇತ್ರದ ಆಗು ಹೋಗುಗಳು, ಜನತೆಯ ಸಂಕಷ್ಟಕ್ಕೆ ಸ್ಪಂದಿಸಬೇಕಾದುದು ನನ್ನ ಧರ್ಮ ಸೈಟ್‌ಗಳನ್ನು ಕೊಡತಕ್ಕ ವಿಚಾರದಲ್ಲಿ

ಸರ್ಕಾರಕ್ಕೆ ಗೌರವ ಬರುತ್ತದೆ. ಅದರ ಅರಿವಿಲ್ಲದೆ ಅವರು ಮಾತನಾಡುತ್ತಿದ್ದಾರೆ. ಆದ್ದರಿಂದ ದಯಮಾಡಿ ಆ ಸ್ಟೇ ಅನ್ನು ವಾಪಾಸ್ಸು ತೆಗೆದುಕೊಳ್ಳಬೇಕೆಂದು ತಿಳಿಸಿ.........

ಶ್ರೀ ಅಂಜನಾಮೂರ್ತಿ : ಮಾನ್ಯ ಚೆನ್ನಿಗಪ್ಪನವರು ದಾರಿ ಬಿಟ್ಟು ಹೋಗುತ್ತಿದ್ದಾರೆ. ಅವರೇನು ಮಾತನಾಡುತ್ತರೆ ಎನ್ನುವ ವಿಷಯ ಅವರಿಗೆ ಅರ್ಥವಾಗುವುದಿಲ್ಲ, ಒಂದೇ ಸಾರಿ ಪೂರ್ವಕ್ಕೆ ಪಶ್ಚಿಮಕ್ಕೆ ಹೋಗಿಬಿಡುತ್ತಾರೆ. ದಯವಿಟ್ಟು ಅರ್ಥ ಮಾಡಿಕೊಳ್ಳಬೇಕು. ಆಶ್ರಯ ಸಮಿತಿಗೆ ನೀವು ಛೇರ್ಮನ್ ಇರಬಹುದು. ಬಗರ್‌ಹುಕಂ ಸಾಗುವಳಿ ಸಮಿತಿಗೆ ನಾನು ಛೇರ್ಮನ್ ಅದು ನನ್ನ ತೀರ್ಮಾನ ಆದರೆ ನೀವು ಆ ಫೈಲ್ ಮೇಲೆ ಆ ರೀತಿ ಬರೆಯಬಾರದು, ಅದು ಲಕ್ಷಣವಲ್ಲವೆಂದು ಹೇಳಿದ್ದೇನೆ.

ಶ್ರೀ ಸಿ.ಚೆನ್ನಿಗಪ್ಪ : ನನ್ನ ಕ್ಷೇತ್ರದ ಬಡವರಿಗೆ ಆದ ಅನ್ಯಾಯ, ನನ್ನ ತಾಲ್ಲೂಕಿನ ಜಮೀನಿನ ಬಗ್ಗೆ ಮಾತ್ರ ನನಗೆ ಸಂಬಂಧಿಸಿದ್ದು, ನಿಮ್ಮ ಫೈಲ್ ಬಗ್ಗೆ ಬರೆಯದ ನೈತಿಕ ಹಕ್ಕು ನನಗಿಲ್ಲ, ನಾನು ಹಾಗೆ ಬರೆಯುವುದಿಲ್ಲ. ನನಗೆ ಸಂಬಂಧಪಟ್ಟ ಕಡತಕ್ಕೆ ಬರೆಯುವ ಅಧಿಕಾರ ನನಗೆ ಇದೆ, ನಾನು ಮಾಡುತ್ತೇನೆ. ಜನರು ನನಗೆ ಕೊಟ್ಟಿರುವ ಅಧಿಕಾರವನ್ನು ನನ್ನ ಜನರಿಗೋಸ್ಕರ ಕೊಡಬೇಕಾಗಿದೆ, ಅದು ಸರ್ಕಾರದ ತತ್ವ, ಅದನ್ನು ನಾನು ನಿರ್ವಹಿಸುತ್ತೇನೆ. ಇದರಿಂದ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ಈಗ ತಂದಿರುವ ಸ್ಟೇ ಬಗ್ಗೆ ದಯಮಾಡಿ ಸರ್ಕಾರ ಎನ್‌ಕ್ವೈರಿ ಮಾಡಲಿ ಅದು ಬಡವರಿಗೆ ಸೇರಿದ್ದು. ಈ ಅನ್ಯಾಯಕ್ಕೆ ಸರ್ಕಾರವೇ ಹೊಣೆ ಎಂಬ ಮಾತನ್ನು ನೇರವಾಗಿ ಪ್ರತಿಪಾದನೆ ಮಾಡಿ ಕೊಡತಕ್ಕಂತಹ ನವ ಗ್ರಾಮದ ಮನೆಗಳು ಬಡವರಿಗೆ ಸಾಲದು, ಈಗ ಕೊಟ್ಟಿರುವುದಕ್ಕೆ ಸೈಟಿಲ್ಲ, ಇವರು ಹಣವನ್ನು ಬಿಡುಗಡೆ ಮಾಡಿಲ್ಲ. ಈ ವಿಚಾರಗಳಾವುದನ್ನು ಪ್ರಸ್ತಾಪ ಮಾಡದೆ ಹನ್ನೊಂದು ಲಕ್ಷ ಮನೆಗಳು, ನವ ಗ್ರಾಮಗಳು, ಅದರಲ್ಲಿ ಲೈಟ್, ಎಲಿಕ್ಟ್ರಿಫಿಕೇಶನ್ ಬಗ್ಗೆ ಹೇಳಿರುವುದು ಸತ್ಯಕ್ಕೆ ದೂರವಾದ ವಿಚಾರ, ಬಡವರ ಹೊಟ್ಟೆ ಮೇಲೆ ತಣ್ಣೀರು ಬಟ್ಟೆ ಹಾಕುವಂತಹ ವಿಚಾರವಾಗಿದೆ. ಇವತ್ತು ಸರ್ಕಾರ ಜನತೆಗೆ ನೀಡಿರುವ ಈ ಬಜೆಟ್ ಸತ್ಯಕ್ಕೆ ದೂರವಾಗಿದ್ದು ನೂರಕ್ಕೆ ನೂರರಷ್ಟು ಸುಳ್ಳು ಅದರಲ್ಲಿ ತುಪ್ಪದಂತೆ ಒಳ್ಳೆಯ ಮಾತನಾಡಿ ಸರ್ಕಾರ ಹೊಟ್ಟೆ ಹಸಿಯುವಂತಹ ಕೆಲಸವನ್ನು ಇವತ್ತು ಸರ್ಕಾರ ಮಾಡಿದೆಯೆಂದು ಹೇಳಿ ಇದು ನಿರರ್ಥಕ ಮಾತು ಇದು ಸುಳ್ಳಿನ ಕಂತೆ ಎಂಬ ಮಾತನ್ನು ಹೇಳಿ, ತಾವು ನನಗೆ ಇವತ್ತು ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಛೇರ್ಮನ್ : ಈಗ ಸದನವನ್ನು ಮಧ್ಯಾಹ್ನ 3.00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 1–48ಕ್ಕೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 3--00 ಗಂಟೆಗೆ ಸಮಾವೇಶಗೊಳ್ಳುವುದಾಗಿ ನಿಶ್ಚಯಿಸಿತು)

(ಸದನವು ಮಧ್ಯಾಹ್ನ 3–30 ಘಂಟೆಗೆ ಪುನಃ ಸಮಾವೇಶಗೊಂಡಿತು ಶ್ರೀ ಎಂ.ವಿ.ವೆಂಕಟಪ್ಪನವರು ಅಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರುಯ

2. ಅಧ್ಯಕ್ಷರ ಅಪ್ಪಣೆ ಮೇರೆಗೆ:

ಛಾಪಾ ಕಾಗದ ಆರೋಪಿ ಶ್ರೀ ಕರೀಂಲಾಲಾ ತೆಲಗಿ ಕುರಿತು

†**ಶ್ರೀ ಜಗದೀಶ್ ಶೆಟ್ಟರ್** : ಸನ್ಮಾನ್ಯ ಅಧ್ಯಕ್ಷರೇ ಬೆಳಿಗ್ಗೆ ನಾನು ಒಂದು ವಿಷಯವನ್ನು ಪ್ರಸ್ತಾಪ ಮಾಡಬೇಕೆಂದಿದ್ದೆ. ಈಗೆ ನಾನು ಆ ವಿಷಯವನ್ನು ಪ್ರಸ್ತಾಪ ಮಾಡುತ್ತೇನೆ. ಸಂಬಂಧಪಟ್ಟ ಮಂತ್ರಿಗಳು ಬಂದ ಮೇಲೆ ಉತ್ತರ ಕೊಡಲಿ.

ಅಧ್ಯಕ್ಷರು : ಬೆಳಿಗ್ಗೆ ಮಾನ್ಯ ಸಚಿವರು ಆ ಮೇಲೆ ಉತ್ತರವನ್ನು ಕೊಡುತ್ತೇವೆಂದು ಹೇಳಿದ್ದರು. ಈಗ Introduction of Bills ಇತ್ಯಾದಿಗಳನ್ನು ಮಾಡುತ್ತಾ ಇರೋಣ ಅಷ್ಟರೊಳಗೆ ಅವರು ಬರುತ್ತಾರೆ.

(† ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಮತ್ತು ಭಾಷಣವನ್ನು ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ)